ಅಧ್ಯಕ್ಷರು —ನಾನು ಮುಖ್ಯಮಂತ್ರಿಗಳನ್ನು ಕೇಳಿ ಹೇಳುತ್ತೇನೆ.

SRI D. DEVARAJ URS —I am going to make a statement shortly In advance I may convey to the House through you, Madam, that on this very issue there is a writ petition. Keeping that in view whatever I have got to say, I will make a statement.

ಅಧ್ಯಕ್ಷರು.—ನಾಳೆಯು ದಿವಸ ಸ್ಟೇಟ್‌ಮೆಂಟ್ ಮಾಡುತ್ತೀರಾ ?

SRI D. DEVARAJ URS.—Yes.

BUDGET ESTIMETES FOR 1977-78
DEMANDS FOR GRANTS

Demand No. 39, 40, 42, 45 and 46 (Debate Oontinnued)

† ಶ್ರೀ ಕಾಗೋಡು ತಿಮ್ಮಪ್ಪ (ಸಾಗರ).—ಮಾನ್ಯ ಅಧ್ಯಕ್ಷರೇ, ಕೃಷಿ ಸಚಿವರು, ಮೀನುಗಾರಿಕೆ ಸಚಿವರು, ತೋಟಗಾರಿಕೆ ಸಚಿವರು, ಹಾಗೂ ಹೈನುಗಾರಿಕೆ ಸಚಿವರು ಈ ಸಭೆಯಲ್ಲಿ ಮಂಡಿಸಿರತಕ್ಕ ಬೇಡಿಕೆಗಳನ್ನು ನಾನು ವಿರೋಧ ಮಾಡುತ್ತಾ ಎರಡು ಮಾತುಗಳನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಮೊದಲು ನಮ್ಮ ಮೀನುಗಾರಿಕೆ ಹಾಗೂ ತೋಟಗಾರಿಕೆ ಇಲಾಖೆಗಳ ಬೇಡಿಕೆಗಳ ಬಗ್ಗೆ ಎರಡು ಮಾತುಗಳನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇವತ್ತು ನಮ್ಮ ರಾಜ್ಯದಲ್ಲಿ ಸುಮಾರು 200 ಕಿಲೋಮೀಟರುಗಳ ಕರಾವಳಿ ಪ್ರದೇಶವಿದೆ ಹಾಗೂ ಒಳನಾಡಿನಲ್ಲಿ ಮೀನುಗಾರಿಕೆ ಅಭಿವೃದ್ಧಿ ಪಡಿಸುವ ಅನುಕೂಲಗಳು ಇರತಕ್ಕ ಪ್ರದೇಶವಿದೆ. ನಮ್ಮ ಮೀನುಗಾರಿಕೆ ಇಲಾಖೆಯು ಸಚಿವರು ಒಳನಾಡಿನ ಮೀನುಗಾರಿಕೆ ಬಗ್ಗೆಯಾಗಲೀ ಮತ್ತು ಕರಾವಳಿ ಮೀನುಗಾರಿಕೆ ಬಗ್ಗೆಯಾಗಲಿ ಮಾಡಿರುವ ಕೆಲಸಕಾರ್ಯಗಳು ಅಷ್ಟು ಪರಿಣಾಮಕಾರಿಯಾಗಿ ಆಗಿಲ್ಲ. ಮೀನುಗಾರಿಕೆಯಲ್ಲಿ ನಾವು ಸಾಧಿಸಬೇಕಾದಂತಹ ಪ್ರಗತಿಯನ್ನೂ ಸಹ ಇನ್ನೂ ಸಾಧನೆ ಮಾಡಿಲ್ಲ. ಇವತ್ತು ನಮ್ಮ ಕರಾವಳಿ ಪ್ರದೇಶದಲ್ಲಿರತಕ್ಕ ಮೀನುಗಾರರಿಗೆ ಸಿಗಬೇಕಾದ ಪ್ರೋತ್ಸಾಹ ಸಾಕಷ್ಟು ಪ್ರಮಾಣದಲ್ಲಿ ಇಲ್ಲದೇ ಇರುವುದರಿಂದ ಅಲ್ಲಿನ ಮೀನುಗಾರಿಕೆ ವ್ಯಾಪಕವಾಗಿ ಸಾಕಷ್ಟು ಅಭಿವೃದ್ಧಿ ಪಡಿಸುವುದಕ್ಕೆ ಆಗಿಲ್ಲ, ಇವತ್ತಿನವರೆಗೂ ಕರಾವಳಿ ಪ್ರದೇಶದಲ್ಲಿರುವ ಮೀನುಗಾರರಲ್ಲಿ ಅನೇಕರು ಮಧ್ಯವರ್ತಿ ಜನಗಳ ಹಿಡಿತದಲ್ಲಿ ಸಿಕ್ಕಿದ್ದಾರೆ. ಅವರನ್ನು ಅವರಿಂದ ತಪ್ಪಿಸುವುದಕ್ಕಾಗುವುದಿಲ್ಲ. ಅಲ್ಲಿರತಕ್ಕ ಮೀನುಗಾರರ ಸಹಕಾರ ಸಂಘಗಳು ಹಾಗೂ ಅಲ್ಲಿರತಕ್ಕ ದೊಡ್ಡ ಉದ್ದಿಮೆದಾರರು ಈಗಾಗಲೇ ಸಾಕಷ್ಟು ಪ್ರಮಾಣದಲ್ಲಿ ಬಡಜನರನ್ನು ಶೋಷಣೆ ಮಾಡುತ್ತಿದ್ದಾರೆ. ಆ ಶೋಷಣೆಯನ್ನು ತಪ್ಪಿಸುವುದಕ್ಕೆ ಇನ್ನೂ ಸಾಧ್ಯವಾಗಿಲ್ಲ. ಅಲ್ಲಿ ಮೀನುಗಾರರಿಗಾಗಿ ಒಂದು ಕಾರ್ಪೊರೇಷನ್ ಇದೆ. ಅದರಲ್ಲಿಯೂ ಕೂಡ ಶ್ರೀ ಬಿ. ಭಾಸ್ಕರ ಶೆಟ್ಟಿಯವರು ಕರಾವಳಿ ಪ್ರದೇಶದವರೇ. ಅವರು ಮೀನುಗಾರರ ಅಭಿವೃದ್ಧಿ ಕಾರ್ಪೊರೇಷನ್ನಿಗೆ ಅಧ್ಯಕ್ಷರಾಗಿದ್ದಾರೆ. ಅವರು ಬಂದ ಮೇಲಾದರೂ ಈ ಕರಾವಳಿ ಪ್ರದೇಶದ ಮೀನುಗಾರರ ಬಗ್ಗೆ ವಿಶೇಷವಾದಂತಹ ಗಮನವನ್ನು ಕೊಡುವುದರಲ್ಲಿ ಅಷ್ಟಾಗಿ ಅಸ್ಥೆ, ಆಸಕ್ತಿ ವಹಿಸಿದಂತೆ ನನಗೆ ಕಂಡುಬರುತ್ತಾ ಇಲ್ಲ. ಅನೇಕಸಾರಿ ನಮಗೆ ಇದು ಸಂಶಯಕ್ಕೆ ಬರುತ್ತದೆ ರಾಜಕಾರಣದಲ್ಲಿರತಕ್ಕಂಥವರನ್ನು ಇಂತಹ ಒಂದು ವ್ಯಾಪಾರಿ ಸಂಸ್ಥೆಗೆ ಜವಾಬ್ದಾರಿ ವಹಿಸಿಕೊಟ್ಟರೆ ಅವರು ಹೆಚ್ಚಿಗೆ ರಾಜಕಾರಣದಲ್ಲಿಯೇ ತೊಡಗುತ್ತಾರೆ. ಅಂತಹವರು ಇಂತಹ ಸಂಸ್ಥೆಯ ಉದ್ದಿಮೆಯ ಬಗ್ಗೆ ಸಾಕಷ್ಟು ಲಕ್ಷ್ಯ ಹಾಗೂ ಉತ್ತೇಜನ ಕೊಡದೇ ಇರತಕ್ಕಂಥಾದ್ದು ಸ್ವಾಭಾವಿಕ. ಆದ್ದರಿಂದ ಅವರು ಈ ವಿಚಾರದಲ್ಲಿ ಅಷ್ಟಾಗಿ ಆಸಕ್ತಿ ವಹಿಸಿಲ್ಲವೆಂದು ನಾನು ದೃಢವಾಗಿ ಹೇಳುತ್ತೇನೆ. ಅದಕ್ಕೆ ಈಗ ಅವರಿಗಿರುವ ರಾಜಕೀಯದ್ದು ಅಡಚಣೆಗಳೇ ಜಾಸ್ತಿ. ಮೀನುಗಾರಿಕೆಯ ಬಗ್ಗೆ ಕರಾವಳಿ ಪ್ರದೇಶದ ಮೀನುಗಾರಿಕೆಯ ಬಗ್ಗೆ ಹಾಗೂ ಒಳನಾಡಿನ ಮೀನುಗಾರಿಕೆಯ ಅಭಿವೃದ್ಧಿಯ ಬಗ್ಗೆ ಸಾಕಾದಷ್ಟು ವಹಿಸಿ ಇದ್ದರೂ ಕೂಡ ಇವುಗಳ ಬಗ್ಗೆ ಹೆಚ್ಚಿಗೆ ಅಭಿವೃದ್ಧಿಪಡಿಸಲು ಅವರು ನಿಜವಾಗಿಯೂ ಹೆಚ್ಚಿನ ಗಮನ ವಹಿಸಿಲ್ಲವೆಂದು ನಾನು ಹೇಳುತ್ತೇನೆ.

ಇನ್ನೊಂದು ಮಾತು. ಅದನ್ನು ನಾನು ಹೇಳುವುದಕ್ಕೆ ವ್ಯಥೆಯಾಗುತ್ತದೆ. ಇಂತಹ ಒಂದು ಮಂಡಲಿಗೆ ಶಾಸಕರಾದವರನ್ನು ಅಧ್ಯಕ್ಷರನ್ನಾಗಿ ಮಾಡುವುದು ಸರಿಯಲ್ಲ. ಏಕೆಂದರೆ ಈ ಸದನದಲ್ಲಿ ಇಂತಹ ಒಂದು ಸಂಸ್ಥೆಗಳ ಆಡಳಿತವನ್ನು ಟೀಕೆ ಮಾಡುವಾಗ ನೇರವಾಗಿ ಸದನದ ಸದಸ್ಯರ ಎದುರಿಗೆ ಅವೆಲ್ಲವನ್ನೂ ಹೇಳಬೇಕಾದ ಪ್ರಸಂಗ ಬರುತ್ತದೆ. ಇಂತಹ ಒಂದು ವಿವಾದಾಸ್ಪದವಾದ ಪ್ರಸಂಗವನ್ನು ತಂದೊಡ್ಡುವುದಕ್ಕೆ ಸರ್ಕಾರವೂ ಕೂಡ ಹೊಣೆಗಾರಿಕೆ ಯಾಗುತ್ತದೆಂದು ಹೇಳಿದರೆ ಅದೇನೂ ತಪ್ಪಾಗಲಾರದು. ಹಿಂದೆ ಒಂದು ಸಾರಿ ಇಂತಹ ಒಂದು ಕಾರಣದಿಂದ ಅವರನ್ನು ಕೈಬಿಟ್ಟಿದ್ದರು. ಮತ್ತೆ ಇಂತಹ ಒಂದು ಸಂಸ್ಥೆಗೆ ಅವರನ್ನೇ ಈಗ ಅಧ್ಯಕ್ಷರನ್ನಾಗಿ ಮಾಡಿ ಒಂದು ಸಂದಿಗ್ಧ ಪರಿಸ್ಥಿತಿಯನ್ನೂ ಈ ಸದನದ ಸದಸ್ಯರಿಗೆ ತಂದೊಡ್ಡಿರುವುದು ಬಹಳ ವಿಷಾದವಾಗಿದೆ. ಇದನ್ನು ಈಗ ಸರ್ಕಾರ ತಿದ್ದಿಕೊಳ್ಳಬೇಕಾಗಿದೆ. ಏಕೆಂದರೆ ಮಾನ್ಯ ಮುಖ್ಯಮಂತ್ರಿಗಳು ಯಾವತ್ತಾದರೂ ಅವರ ಅಧಿಕಾರವನ್ನು ಕಳೆದುಕೊಳ್ಳುವ ಪರಿಸ್ಥಿತಿಗೆ ಬಂದಿದ್ದಾರೆ. ಅವರು ತಮ್ಮ ಅಧಿಕಾರವನ್ನು ಉಳಿಸಿಕೊಳ್ಳುವುದಕ್ಕೆ ಇಂತಹ ಕೆಲವಾರು ಮಂಡಲಿಗಳನ್ನು, ಕಾರ್ಪೊರೇಷನ್‌ಗಳನ್ನು ಸ್ಥಾಪಿಸಿ ಅವರಿಗೆ ಅವುಗಳ ಅಧ್ಯಕ್ಷ ಗಿರಿಯನ್ನು ಈಗ ಕೊಡುತ್ತಿದ್ದಾರೆ.

ಇವತ್ತು ಆಗಲೇ ಪ್ರಕಟಣೆ ಯಾಗಿದೆ, ಯಾವುದೇ ಒಂದು ಉದ್ಯಮ ಉದ್ದೇಶಿಸಿರುವ ಉದ್ದಿಶ್ಯ ಸಾಧನೆಯಾಗಬೇಕಾದರೆ, ಅದು ಅಭಿವೃದ್ಧಿಯಾಗುತ್ತದೆ ಎನ್ನುವ ಭಾವನೆ ಬರಬೇಕಾದರೆ ಸಾಧ್ಯವಾದಷ್ಟು ಮಟ್ಟಿಗೆ ಶಾಸನ ಸಭಾಸದಸ್ಯರನ್ನು ಮತ್ತು ಲೋಕಸಭಾಸದಸ್ಯರನ್ನು ದೂರವಾಗಿರಿಸತಕ್ಕಂಥಾದ್ದು ಸೂಕ್ತ ಎನ್ನುವುದು ನನ್ನ ಅಭಿಪ್ರಾಯವೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇನ್ನು ಕರಾವಳಿಯಲ್ಲಿ ದೊರೆಯತಕ್ಕ ಮೀನನ್ನು ಹಿಡಿದು ಬದುಕತಕ್ಕಂಥವರು ಬಹಳ ಜಾಸ್ತಿ ಜನ ಇದ್ದಾರೆ. ಮೀನನ್ನು ಹಿಡಿಯುವುದರಲ್ಲಿ ಬಹಳಷ್ಟು ಮುಂದುವರಿದ ಯಾತ್ರಿಕ ದೋಣಿಗಳು ಬಂದಿವೆ. ಮೀನನ್ನು ಹಿಡಿಯುವ ಜನರಿಗೆ ತರಬೇತಿ ಕೊಡತಕ್ಕಂಥ ಕೇಂದ್ರಗಳು ಇವೆ. ಅದರ ಬಗ್ಗೆ ನಾನು ಒಂದು ಕಾಗದವನ್ನು ಸಂಬಂಧಪಟ್ಟ ಮಂತ್ರಿಗಳಿಗೆ ಬರೆದಿದ್ದೇನೆ. ಯಾವ ತಾಂತ್ರಿಕ ದೋಣಿಗಳನ್ನು ಸಬ್ಸಿಡಿ ರೇಟಿನಲ್ಲಿ ಕೊಟ್ಟಿದ್ದರೋ ಅವನ್ನು ಹೆಚ್ಚು ಕಡಿಮೆ 100ಕ್ಕೆ 50ರಷ್ಟು ಸಬ್ಸಿಡಿ ಯಾಗಿ ಕೊಟ್ಟಿದ್ದರು. ಈಗ ಆ ಸಬ್ಸಿಡಿಯನ್ನು 50 ಪರ್ಸೆಂಟ್‌ನಿಂದ 25 ಪರ್ಸೆಂಟ್‌ಗೆ ಮಾಡಿದ್ದೇವೆಂದು ಹೇಳಿ ಉಳಿದ 25 ಪರ್ಸೆಂಟ್‌ನ್ನು ಅವರು ವಾಪಸ್ ಕೊಡಬೇಕೆಂದು ಮೀನುಗಾರರಿಗೆ ನೋಟೀಸ್ ಕೊಟ್ಟಿದ್ದಾರೆ. ಹಣವನ್ನು ವಾಪಸ್ ಕೊಡಬೇಕೆಂದು ಹೇಳಿದ್ದಾರೆ. ಅದರ ಬಗ್ಗೆ ವರದಿಯಲ್ಲಿ ಹೇಳಿದೆ. ಇದರಲ್ಲಿ ಸುಮಾರು 300ಕ್ಕಿಂತ ಹೆಚ್ಚು ಜನರು ಯುವಕರು ಇದ್ದಾರೆ. ಅದರಲ್ಲೂ ತರಬೇತಿ ಹೊಂದಿದ ಜನ ಯುವಕರು ಇದ್ದಾರೆ. ಆ ಯುವಕರು ಏನು ಹೇಳುತ್ತಾರೆಂದರೆ ಯಾವುದಾದರೂ ಸಹಕಾರ ಸಂಘಗಳಲ್ಲಿ ನಮಗೆ ಸಾಲ ಕೊಡಿಸಿದ್ದೇ ಆದರೆ ಅಥವಾ ಸಾಲದ ರೂಪದಲ್ಲಿ ದೋಣಿಗಳನ್ನು ಕೊಡಿಸುವುದಾದರೆ ನಾವು ಮೀನನ್ನು ಹಿಡಿದು ಜೀವನವನ್ನು ಮಾಡುವುದಕ್ಕೆ ಸಹಾಯ ಮಾಡಿದಂತಾಗುತ್ತದೆಂದು ಹೇಳುತ್ತಿದ್ದಾರೆ. ಆದರೆ ಇಲ್ಲಿಯವರೆಗೆ ಅದರ ಬಗ್ಗೆ ಯಾವ ವ್ಯವಸ್ಥೆಯನ್ನು ಸರ್ಕಾರದವರೇ ಆಗಲಿ ಅಥವಾ ಕಾರ್ಪೊರೇಷನ್ ನವರಾಗಲಿ ಮಾಡಿಲ್ಲ. ಈ ಕರಾವಳಿ ಪ್ರದೇಶಗಳಲ್ಲಿ ಹೆಚ್ಚು ಪ್ರಮಾಣದಲ್ಲಿ ಮಾಡತಕ್ಕಂಥ ಕಸಬು ಮೀನು ಹಿಡಿಯುವುದು. ಈ ರೀತಿ ತರಬೇತಿ ಕೊಡಬೇಕಾದರೆ ಇದಕ್ಕೆ ಹೆಚ್ಚಿನ ಹಣವೂ ಕೊಡಬೇಕಾಗಿಲ್ಲ. ತರಬೇತಿ ಪಡೆದಂತಹವರಿಗೆ ಹಣಕಾಸಿನ ಸಾಲದ ನೆರವು ಕೊಡುವುದಾದರೆ ಮೀನನ್ನು ಹಿಡಿದು ಬದುಕುವುದಕ್ಕೆ ಸಾಧ್ಯವಿದೆ. ಸುಮಾರು 200ಮೈಲಿ ಕರಾವಳಿ ಪ್ರದೇಶ ಇರುವುದರಿಂದ ಸಾಕಷ್ಟು ಜನರು ಇದನ್ನೆ ಅವರ ಜೀವನದ ಕಸಬನ್ನಾಗಿ ಮಾಡಿಕೊಂಡು ಜೀವನವನ್ನು ಸಾಗಿಸಲು ಸಾಧ್ಯವಿದೆ. ಹೀಗೆ ಇದ್ದಾಗ್ಯೂ ಕೂಡ ಅವರಿಗೆ ಸಾಲದ ಸೌಲಭ್ಯಗಳನ್ನು ಉತ್ತಮಪಡಿಸಲು ಸರ್ಕಾರದವರು ಮುಂದೆ ಬಂದಿಲ್ಲವೆಂದರೆ ಹೇಗೆ? ಅವರಿಗೆ ಉತ್ತಮವಾದ ತಾಂತ್ರಿಕ ದೋಣಿಗಳನ್ನು ಒದಗಿಸುವುದಕ್ಕೆ ಪ್ರಯತ್ನ ಮಾಡದೆ ಇರುವುದರಿಂದ ಅವರಿಗೆ ಉದ್ಯೋಗ ಕೊಡುವುದಕ್ಕೆ ಆಗಲಿಲ್ಲವೆಂದು ಬಹಳ ವಿಷಾದದಿಂದ ಹೇಳುತ್ತಿದ್ದೇನೆ. ಈ ರೀತಿ ನಿರುದ್ಯೋಗಿ ಯುವಕರು ಜಾಸ್ತಿಯಾಗಿದ್ದಾರೆ. ಆದ್ದರಿಂದ ಅವರಿಗೆ ಸಾಲದ ಸೌಲಭ್ಯಗಳನ್ನು ತತ್‌ಕ್ಷಣ ಯಾವುದಾದರೂ ಕಮರ್ಷಿಯಲ್ ಬ್ಯಾಂಕುಗಳ ಮುಖಾಂತರ ಕೂಡಲೇ ಮಾಡಬೇಕೆಂದು ಈ ಸಂದರ್ಭದಲ್ಲಿ ಒತ್ತಾಯಪಡಿಸುತ್ತೇನೆ. ಕರಾವಳಿ ಪ್ರದೇಶದಲ್ಲಿ

ಇತ್ತೀಚೆಗೆ ಮೀನಿಗೆ ಬರಗಾಲ ಉಂಟಾಗಿದೆ. ಆದ್ದರಿಂದ ಹಿಂದೆ ಮೀನಿಗೆ ಬರಗಾಲ ಬಂದಾಗ ಸಹಕಾರಸಂಘದ ಮುಖೇನ ಸಾಲದ ರೂಪದಲ್ಲಿ ಕೆಲವು ಜನರಿಗೆ ಸಹಾಯ ಮಾಡಿದರು ಅದು ಕೇವಲ ಚುನಾವಣೆಯ ದೃಷ್ಟಿಯಿಂದ ಎಂದು ಹೇಳದೆ ವಿಧಿಯಿಲ್ಲ. ಅದರಲ್ಲೂ ನಮ್ಮ ಮಹಿಳಾ ಮಂತ್ರಿಗಳು ಇಲ್ಲೇ ಇದ್ದಾರೆ ಅವರು ಕೂಡ ಆ ಭಾಗದಿಂದ ಬಂದವರು. ಯಾವುದೇ ರೀತಿಯ ಸೌಲಭ್ಯವನ್ನು ಬರಗಾಲ ಬಂದಾಗ ಸಾಲ ಕೊಟ್ಟಂಥಾದ್ದನ್ನು ನಾವು ನೋಡಿರಲಿಲ್ಲ ಕೇವಲ ಚುನಾವಣೆಯ ಸಂದರ್ಭದಲ್ಲಿ ಕೊಟ್ಟಿದ್ದರು. ಅವತ್ತು ಮೀನಿಗೆ ಬರಗಾಲ ಬಂದಾಗ ಆ ಚುನಾವಣೆಯ ಸಂದರ್ಭದಲ್ಲಿ ಕೊಟ್ಟಿರತಕ್ಕಂಥ ಋಣ ಎಷ್ಟು ಎಂದರೆ ಕೇವಲ 18 ಲಕ್ಷರೂಪಾಯಿಗಳು. ಅದು ಕೇವಲ ಸ್ವಲ್ಪ ಜನರಿಗೆ ಕೊಟ್ಟಿದ್ದಾರೆ. ಅದೇನು ವ್ಯಾಪಕವಾಗಿ ಕೊಟ್ಟಿದ್ದಲ್ಲ. ಕರಾವಳಿ ಪ್ರದೇಶದಲ್ಲಿ ಮೀನು ಹಿಡಿದು ಜೀವನ ನಡೆಸುವ ಜನರು ಸುಮಾರು 5 ಸಾವಿರ ಜನರು ಇದ್ದಾರೆ. ಇವತ್ತು ಅವರಿಗೆ ವ್ಯಾಪಕವಾದ ವ್ಯವಸ್ಥೆಯನ್ನು ಮಾಡಿಲ್ಲ. ಇವರು ಕೊಟ್ಟದ್ದು ಅವರನ್ನು ತೃಪ್ತಿ ಪಡಿಸುವುದಕ್ಕೆ ಕೊಟ್ಟಿಲ್ಲ. ಅವರು ಏನು ಮೀನು ಹಿಡಿಯುತ್ತಾರೆ ಅದನ್ನು ದಾಸ್ತಾನು ಮಾಡಲು ಯಾವರೀತಿಯ ಸೌಲಭ್ಯಗಳು ಇಲ್ಲ. ಆದ್ದರಿಂದ ಅವರು ಮೀನನ್ನು ಒಣಗಿಸಿ ನಮ್ಮ ಸಾಗರ, ಮುಂತಾದ ಒಳನಾಡಿಗೆ ತಂದು ಮಾರಾಟ ಮಾಡುತ್ತಿದ್ದಾರೆ. ಅವನ್ನು ದಾಸ್ತಾನು ಮಾಡಲು ಯಾವರೀತಿಯ ಮಳಿಗೆಗಳನ್ನು ಮಾಡಿಲ್ಲ. ಆದ್ದರಿಂದ ಅವುಗಳನ್ನು ಶುದ್ಧೀಕರಣ ಮಾಡಿದೆ ಮಾರಾಟ ಮಾಡುತ್ತಿದ್ದಾರೆ. ಕೆಲವು ಸಂದರ್ಭಗಳಲ್ಲಿ ಹೆಚ್ಚಿನ ಮಟ್ಟದಲ್ಲಿ ಮೀನುಗಳನ್ನು ಹಿಡಿದರೆ ಅವನ್ನು ಕಾಪಾಡತಕ್ಕಂಥ ಶೀತಲಗೃಹಗಳು ಮತ್ತು ದಾಸ್ತಾನು ಮಳಿಗೆಗಳು ಇಲ್ಲದೆ ಇರುವುದರಿಂದ ದಾಸ್ತಾನು ಮಾಡಲು ಅವರಿಗೆ ಬಹಳ ತೊಂದರೆಯಾಗಿದೆ. ಅದಕ್ಕೆ ಕಾರ್ಪೊರೇಷನ್ ನವರು ಯಾವರೀತಿಯ ಸೌಲಭ್ಯಗಳನ್ನು ಕೊಟ್ಟಿಲ್ಲ. ಆದ್ದರಿಂದ ದಯಮಾಡಿ ಕಾರ್ಪೊರೇಷನ್ ನವರೇ ಆಗಲಿ ಅಥವಾ ಸರ್ಕಾರದವರೇ ಆಗಲಿ ಈಗ ಮೊದಲು ಹೇಳಿದ ಕನಿಷ್ಟ ಸೌಭ್ಯಗಳನ್ನು ಒದಗಿಸಿಕೊಟ್ಟರೆ ನಮಗೆ ಬೇಕಾಗುವಷ್ಟು ಮೀನಿನ ಬೇಡಿಕೆಯನ್ನು ಪೂರೈಸುವುದಕ್ಕೆ ಸಾಧ್ಯತೆ ಇದೆ. ಕರಾವಳಿ ಪ್ರದೇಶಗಳಲ್ಲಿ ಹೆಚ್ಚು ಮೀನನ್ನು ಹಿಡಿಯುವುದಕ್ಕ ಸಾಧ್ಯತೆಯಿದೆ. ಸಂಗ್ರಹಿಸುವುದಕ್ಕೆ ಅವಕಾಶ ಮಾಡಿಕೊಟ್ಟರೆ ಹೆಚ್ಚುಕಾಲ ಅವನ್ನು ದಾಸ್ತಾನುಮಾಡಿ ವ್ಯಾಪಾರ ಮಾಡಬಹುದು. ಆ ಪ್ರದೇಶದಲ್ಲಿ ಸಿಕ್ಕತಕ್ಕಂಥ ಮೀನನ್ನು ದಾಸ್ತಾನು ಮಾಡಲು ಮೀನು ಅಭಿವೃದ್ಧಿ ಕಾರ್ಪೊರೇಷನ್‌ನವರು ಶೀತಲಗೃಹಗಳನ್ನು ಸಾಕಷ್ಟು ಪ್ರಮಾಣದಲ್ಲಿ ಒದಗಿಸಬೇಕು. ಆದರೆ ಈಗಲಾದರೂ ಸರ್ಕಾರದವರು ಕೂಡ ಮೀನು ಸಿಕ್ಕತಕ್ಕಂಥ ಸಂದರ್ಭದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಸಂಗ್ರಹಮಾಡಲಿಕ್ಕೆ ಅವರಿಗೆ ಸೌಲಭ್ಯ ಮತ್ತು ಸೌಲತ್ತನ್ನು ಕೊಡುವುದಕ್ಕೆ ಪ್ರಾರಂಭಮಾಡತಕ್ಕಂಥ ವ್ಯವಸ್ಥೆಯನ್ನು ಬೇಗ ಮಾಡಬೇಕೆಂದು ಹೇಳುತ್ತೇನೆ, ಕರಾವಳಿ ಪ್ರದೇಶದಲ್ಲಿ ಹಿಡಿದಂತಹ ಮೀನನ್ನು ಒಳನಾಡಿಗೆ ಸಾಗಿಸುವಂತಹ ಸಂದರ್ಭವಿದೆ. ಆದ್ದರಿಂದ ಅವನ್ನು ಸಾಗಿಸಲು ಉತ್ತಮವಾದ ವಾಹನಗಳನ್ನು ಒದಗಿಸಬೇಕು. ಹಾಲಿ ಅವರು ಲಾರಿಗಳಲ್ಲಿ ರಾಸಿ ಹಾಕುತ್ತಾರೆ ಅದರ ಮೇಲೆ ಐಸ್ ಹಾಕುತ್ತಾರೆ. ಒಂದೊಂದು ಲೋಡು ನಮ್ಮ ಸಿರಸಿ, ಸಿದ್ದಾಪುರ ಮುಂತಾದ ಪ್ರದೇಶಗಳಿಗೆ ಬರುತ್ತದೆ. ಅದು ನೆನ್ನೆ ಸಾಯಂಕಾಲ ಹಿಡಿದರೂ ಸುಮಾರು 12 ಗಂಟೆ ಮೇಲೆ ಬರುತ್ತದೆ. ಅದು ನಾಲ್ಕೈದು ಗಂಟೆಗಳಿಗೆ ಸರಬರಾಜು ಮಾಡಿದರೆ ಒಳ್ಳೆಯದು. ಆದರೆ ಅನೇಕ ಸಂದರ್ಭಗಳಲ್ಲಿ 24 ಗಂಟೆಗಳ ಮೇಲೆ ಬರುವುದರಿಂದ ಅದರ ಸ್ವಾಭಾವಿಕವಾದ ಸತ್ವ ಅದರಲ್ಲಿ ಇರುವುದಿಲ್ಲ ವ್ಯತ್ಯಾಸವಾಗುತ್ತದೆ. ಕರಾವಳಿಯಿಂದ ನಮ್ಮ ಒಳನಾಡಿಗೆ ಸರಬರಾಜು ಮಾಡಬೇಕಾದರೆ ಸರಿಯಾದ ವಾಹನ ವ್ಯವಸ್ಥೆ ಇರಬೇಕಾಗುತ್ತದೆ. ಕಾರವಾರ್, ಕುಮುಟ, ಕುಂದಾಪುರ ಮತ್ತು ಉಡುಪಿ ಹಾಗೂ ಮಲ್ಪೆ ಇಂತಹ ಕಡೆಗಳಲ್ಲಿ ಶೀತಲಗೃಹಗಳಿಂದ ಕೂಡಿದ ವ್ಯಾನ್‌ಗಳನ್ನು ಇಟ್ಟರೆ ಕೇವಲ ಮೂರು ನಾಲ್ಕು ಗಂಟೆಗಳಲ್ಲಿ ಬಳಕೆದಾರರಿಗೆ ಒದಗಿಸುವುದಕ್ಕೆ ಸಾಧ್ಯವಾಗುತ್ತದೆ ಜೊತೆಗೆ ನೂರಾರು ಮೈಲಿಗಳಾದರೂ ತಲುಪಿಸುವುದಕ್ಕೆ ಸಾಧ್ಯವಾಗುತ್ತದೆ.

3-30 ಪಿ.ಎಂ.

ಶಿವಮೊಗ್ಗ ಮತ್ತು ಭದ್ರಾವತಿಯಲ್ಲಿ ದೊಡ್ಡ ಮಾರ್ಕೆಟ್ ಇವೆ. ಹಾಗೂ ಕರಾವಳಿ ಪ್ರದೇಶದಲ್ಲಿರತಕ್ಕಂಥ ಪ್ರಾಜೆಕ್ಟ್‌ಗಳಲ್ಲಿ ಕೂಡ ದೊಡ್ಡ ದೊಡ್ಡ ಮಾರ್ಕೆಟ್‌ಗಳು ಇವೆ. ಅಲ್ಲೆಲ್ಲಾ ಜನರು ಮೀನನ್ನು ತಿನ್ನತಕ್ಕಂಥ ಜನರಿದ್ದಾರೆ. ಅಂಥವರಿಗೆ ಉತ್ತಮವಾದ ಹಸಿ ಮೀನನ್ನು ಸರಬರಾಜು

ಮಾಡುವುದಕ್ಕೆ ಸಾಧ್ಯತೆ ಇರುವುದರಿಂದ ಅದನ್ನು ಮಾಡಬೇಕು. ಅಧ್ಯಕ್ಷರೇ ಇವತ್ತು ಮಾಂಸಗಳ ಬೆಲೆ ಬಹಳ ದುಬಾರಿ ಆಗಿದೆ, ಆದರೆ ಇವತ್ತು ಮೀನನ್ನು ಮಾತ್ರ ಸಾಮಾನ್ಯ ಜನರು ಕೂಡ ತರಕಾರಿ ತೆರಹ ಉಪಯೋಗಿಸುತ್ತಿದ್ದಾರೆ. ಇವತ್ತು ಒಂದು ಬೆಂಗಾಡಿ ಮೀನು ಸಿಕ್ಕರೆ 2–3 ಜನ ಸುಖವಾಗಿ ಊಟ ಮಾಡುತ್ತಾರೆ. ಇಂಥಾ ಉತ್ತಮವಾದ ಕೆಲಸವನ್ನು ನಮ್ಮ ಮೀನುಗಾರಿಕೆ ಇಲಾಖೆಯವರು ಆಗಲೀ ಮೀನುಗಾರಿಕೆಯ ಅಭಿವೃದ್ಧಿಯ ಸಂಸ್ಥೆಯವರು ಆಗಲೀ ಮಾಡಿಲ್ಲ. ಇದರಲ್ಲಿ ಅವರು ಏನೇನೂ ಉತ್ತಮವಾದಂಥ ಕೆಲಸವನ್ನು ಮಾಡಿಲ್ಲವೆಂದರೆ ಅತಿಶಯೋಕ್ತಿ ಇಲ್ಲ. ಆದುದರಿಂದ ಇನ್ನು ಮೇಲಾದರೂ ಹಸಿ ಮೀನು ಮತ್ತು ಒಣಗಿದ ಮೀನು ಈ ಎರಡೂ ಕೂಡ ಮಾರ್ಕೆಟ್ಟಿಗೆ ಸರಿಯಾದ ವೇಳೆಗೆ ಒದಗಿಸತಕ್ಕಂಥ ವ್ಯವಸ್ಥೆ ಮಾಡಬೇಕು. ಮತ್ತೆ ಒಳನಾಡಿನಲ್ಲಿ ಮೀನನ್ನು ಸಂಗ್ರಹಣೆ ಮಾಡುತ್ತಾರೆ, ಆ ರೀತಿ ಸಂಗ್ರಹಣೆ ಮಾಡಿದಂಥ ಮೀನನ್ನು ದೊಡ್ಡ ಮಾರ್ಕೆಟ್ಟಿನ ಮುಖಾಂತರ ವಿತರಣೆ ಮಾಡುವುದಕ್ಕೆ ಅಲ್ಲಿ ಏನಾದರೂ ಒಂದು ಸಹಕಾರ ಸಂಘಗಳನ್ನು ಮಾಡಿದರೆ ವಿತರಣೆ ಮಾಡುವುದಕ್ಕೆ ಅನುಕೂಲವಾಗುತ್ತದೆ. ಈಗ ಅಲ್ಲಿ ಏನಾಗಿದೆ ಎಂದರೆ ಲಾರಿಗಳಲ್ಲಿ ಮೀನನ್ನು ತರುತ್ತಾರೆ; ಆ ಲಾರಿ ಬರುವುದನ್ನು ಕಾಯ್ದುಕೊಂಡು ಕೆಲವರು ಬೈಸಿಕಲ್ ತಂದು ಕಾಯ್ದುಕೊಂಡಿರುತ್ತಾರೆ. ಮೀನು ಬಂದ ಕೂಡಲೇ ಸೈಕಲ್ ಮೇಲಿರುವ ಬಾಕ್ಸ್‌ನಲ್ಲಿ ಮೀನು ಐಸ್ ಹಾಕಿಕೊಂಡು 3–4 ಮೈಲಿ ದೂರದವರೆಗೂ ಹೋಗಿ ಮಾರಾಟ ಮಾಡುತ್ತಾರೆ. ಅದರಿಂದ ಬರತಕ್ಕಂಥ ಹಣದಿಂದ ಇವತ್ತು ಅವರು ಜೀವನ ಮಾಡುತ್ತಿದ್ದಾರೆ. ಹೀಗೆ ಕೆಲವರು ಅಲ್ಲಿ ಅವಿದ್ಯಾವಂತರು ತಮ್ಮ ಜೀವನವನ್ನು ನಡೆಸುತ್ತಿದ್ದಾರೆ. ಆದುದರಿಂದ ತಾವು ಇವತ್ತು ವಿದ್ಯಾವಂತರಿಗಲ್ಲದಿದ್ದರೂ ಅವಿದ್ಯಾವಂತರಿಗೆ ಉದ್ಯೋಗವನ್ನು ಒದಗಿಸಿಕೊಡತಕ್ಕಂಥ ಒಂದು ಸೌಲಭ್ಯವಿರುವುದರಿಂದ ಇದರ ಬಗ್ಗೆ ತಾವು ಸರಿಯಾದ ವ್ಯಾಪಕವಾದಂಥ ಕಾರ್ಯಕ್ರಮವನ್ನು ಮಾಡದೇ ಇರುವುದರಿಂದ ನಮ್ಮ ರಾಜ್ಯದಲ್ಲಿ ಈ ಮೀನುಗಾರಿಕೆಯಿಂದ ಸರಿಯಾದ ಆದಾಯ ಬರುತ್ತಿಲ್ಲ. ಹಾಗೂ ತಾವು ಆ ರೀತಿ ಆದಾಯವನ್ನು ಹೆಚ್ಚಿಸಲಿಕ್ಕೆ ಸರಿಯಾದ ವ್ಯವಸ್ಥೆಯನ್ನು ಮಾಡಿಲ್ಲ. ಈ ಕಾರಣದಿಂದ ಮೀನುಗಾರಿಕೆಯ ಇಲಾಖೆಯು ತೀರಾ ಹಿಂದುಳಿದಿದೆ ಎಂದು ಹೇಳಿದರೆ ಅದು ತಪ್ಪಾಗಲಿಕ್ಕೆ ಇಲ್ಲ. ಮಾನ್ಯ ರಾಥೋಡ್ ಸಾಹೇಬರ್‌ರವರಿಗೆ ಕ್ಯಾಬಿನೆಟ್ ದರ್ಜೆಯನ್ನು ಹೊಸದಾಗಿ ಕೊಟ್ಟಿದ್ದಾರೆ. ಅವರಿಗೆ ಇರತಕ್ಕಂಥ ಹೆಚ್ಚಿನ ಅಧಿಕಾರದಿಂದ ಈಗಿರತಕ್ಕಂಥ ಹಣದ ಕೊರತೆ ಕೂಡ ನೀಗಿರಬಹುದು. ಅವರು ಇದರ ಅಭಿವೃದ್ಧಿಗಾಗಿ ಎಷ್ಟು ಹಣವನ್ನಾದರೂ ಖರ್ಚು ಮಾಡಿ ಅಭಿವೃದ್ಧಿಪಡಿಸಬಹುದಾಗಿತ್ತು, ಆದರೆ ಅವರು ಅಷ್ಟು ಪರಿಣಾಮಕಾರಿಯಾಗಿ ಕೆಲಸ ಮಾಡಿಲ್ಲ ಎನ್ನತಕ್ಕಂಥ ಮಾತನ್ನು ಹೇಳಬೇಕಾಗಿದೆ. ಇವತ್ತು ನಮ್ಮ ಒಳನಾಡಿನ ಪ್ರದೇಶದಲ್ಲಿ ಹೇರಳವಾಗಿ ಕೆರೆಗಳು ಇವೆ. ಕೆರೆಗಳಲ್ಲಿ ಮೀನನ್ನು ಬೆಳೆಸತಕ್ಕಂಥ ಯೋಜನೆ ಕೂಡ ಸಮರ್ಪಕವಾಗಿಲ್ಲ. ಅನೇಕ ಕಡೆಗಳಲ್ಲಿ ಮೀನಿನ ಮರಿಗಳು ಸಾಕಷ್ಟು ಪ್ರಮಾಣದಲ್ಲಿ ಸಿಕ್ಕಿದರೂ ಕೂಡ ಅಷ್ಟು ಪ್ರಮಾಣದಲ್ಲಿ ಮೀನನ್ನು ಬೆಳೆಸುವುದಕ್ಕೆ ಪ್ರಯತ್ನ ಮಾಡಿಲ್ಲ. ಆದುದರಿಂದ ಅಂಥಾ ಕಡೆಗಳಲ್ಲೆಲ್ಲಾ ಮೀನನ್ನು ಬೆಳಸಿ ಅಲ್ಲಿಯ ಜನರಿಗೆ ಒದಗಿಸಿ ಕೊಡುವುದಕ್ಕೆ ಮೀನುಗಾರಿಕೆಯ ಇಲಾಖೆಯವರು ಅಭಿವೃದ್ಧಿಪಡಿಸಬೇಕೆಂದು ಈ ಸಂದರ್ಭದಲ್ಲಿ ಒತ್ತಾಯ ಪಡಿಸುತ್ತೇನೆ. ಇದರ ಜೊತೆಗೆ ಇದೆಲ್ಲದಕ್ಕಿಂತ ಹೆಚ್ಚಾಗಿ ಇವತ್ತು ಯಾರು ಮೀನುಗಾರಿಕೆಯಲ್ಲಿ ತರಬೇತಿ ಪಡೆದಂಥ ಯುವಕರು ಇದ್ದಾರೆ ಅವರಿಗೆ ತಕ್ಷಣ ದೋಣಿಗಳನ್ನು ಕೊಳ್ಳಲು ಸಾಲವನ್ನು ಕೊಡಿಸಿ ಅವರಿಗೆ ಉದ್ಯೋಗಾವಕಾಶವನ್ನು ಕಲ್ಪಿಸಿ ಕೊಡತಕ್ಕಂಥ ಒಂದು ಕಾರ್ಯವನ್ನು ಕೂಡಲೇ ಕೈಕೊಳ್ಳಬೇಕು ಎಂದು ಈ ಸಂದರ್ಭದಲ್ಲಿ ಒತ್ತಾಯ ಪಡಿಸುತ್ತೇನೆ. ಹಾಗೆಯೇ ಇವತ್ತು ಸಮುದ್ರದ ಆಳದಲ್ಲಿ ಮೀನನ್ನು ಹಿಡಿಯುವುದರ ಬಗ್ಗೆ ಹೇಳುವುದಾದರೆ ಇತ್ತೀಚೆಗೆ ನಾನು ತಜ್ಞರು ಬರೆದಂಥ ಲೇಖನವನ್ನು ಓದಿದೇನೆ ಹಾಗೂ ಕೆಲವು ತಜ್ಞರೊಡನೆ ಮಾತನಾಡಿದ್ದೇನೆ. ಇವತ್ತು ಕುದುರೆ ಮುಖ ಗಣಿ ಯೋಜನೆ ಏನಿದೆ, ಆದರಿಂದ ಮಂಗಳೂರಿಗೆ ಅದಿರನ್ನು ಸಾಗಿಸಬೇಕಾದರೆ ಏನೊಂದು ಸೈಂಟಿಫಿಕ್ ಪ್ರೋಸೆಸ್ ಆಗುತ್ತದೆ ಅದರಿಂದ ನೀರು ಮಲೀನತೆಗೊಳ್ಳುತ್ತದೆಂದು ಅವರು ಹೇಳಿದ್ದಾರೆ. ಇದರ ಪರಿಣಾಮವಾಗಿ ಸಮುದ್ರದ ಕರಾವಳಿ ಪ್ರದೇಶದ ನೀರೆಲ್ಲಾ ಮಲೀನತೆಯಿಂದಾಗಿ ಅಲ್ಲಿ ಮೀನುಗಳು ಸಾಯುವ ಸಂಭವ ಹೆಚ್ಚಾಗಿ ಇನ್ನು ಕೆಲವು ವರ್ಷಗಳಾದ ಮೇಲೆ ಅಲ್ಲಿ ಮೀನು ದೊರೆಯದೇ ಇರುವಂಥಾ ಸಂದರ್ಭ ಉಂಟು ಎಂದು ತಿಳಿಸಿದ್ದಾರೆ. ಇಂಥ ಒಂದು ಅಂಜಿಕೆಯನ್ನು ಅನೇಕ ತಜ್ಞರು ವ್ಯಕ್ತಪಡಿಸಿದ್ದಾರೆ. ಅದಕ್ಕಾಗಿ ತಾವು ಇದರ ಬಗ್ಗೆ ಮುಂಜಾಗರೂ

ಕತೆಯ ಕ್ರಮವನ್ನು ವಹಿಸಬೇಕು. ತಮಗೆಲ್ಲಾ ಗೊತ್ತಿರುವ ಹಾಗೆ ಹರಿಹರ ಪಾಲಿಫೈಬರ್ಸ್‌ನಿಂದ ಬಿಟ್ಟಂಥ ಮಲೀನ ನೀರಿನಿಂದ ತುಂಗಭದ್ರ ನೀರು ಮಲೀನತೆ ಹೊಂದಿ ಅಲ್ಲಿಯ ಮೀನು ಸಾಯುತ್ತಿರುವ ವಿಷಯ ತಮಗೆಲ್ಲಾ ಗೊತ್ತೇ ಇದೆ. ಇವತ್ತು ಕಬ್ಬಿಣದ ಅದಿರು, ಗೊಬ್ಬರದ ಕಾರ್ಖಾನೆ ಮುಂತಾದವುಗಳಿಂದ ನೀರು ಮಲೀನತೆ ಹೊಂದಿ ಮೀನುಗಳು ಸಾಯುವಂಥಾ ಪರಿಸ್ಥಿತಿ ಒದಗಿ ಬಂದಿದೆ. ಇದರ ಬಗ್ಗೆ ಮಂಗಳೂರಿನ ಜನರು ಹಾಗೂ ಅಲ್ಲಿಯ ಪತ್ರಿಕಾ ಕರ್ತರು ಮತ್ತು ಟಿ. ಎ. ಪೈ ರವರು ಕೂಡ ಇದರ ಬಗ್ಗೆ ಹೇಳಿದ್ದಾರೆ. ಆದುದರಿಂದ ಇವತ್ತು ಮಾಲೀನತೆಯಿಂದ ಆಗತಕ್ಕಂಥ ದುಷ್ಪರಿಣಾಮವನ್ನು ತಪ್ಪಿಸುವುದಕ್ಕೆ ತಜ್ಞರನ್ನು ನೇಮಿಸಿ, ಅದನ್ನು ವಿಚಾರಣೆಗೆ ಒಳಪಡಿಸಿ. ಇವತ್ತು ವಿಧಾನಸೌಧದ ಒಳಗಡೆಯೆಲ್ಲಾ ತಾಪೇ ಮಲೀನತೆಯ ಪರಿಸರದ ಬಗ್ಗೆ ದೊಡ್ಡ ದೊಡ್ಡ ಬೋರ್ಡ್‌ಗಳನ್ನು ಹಾಕಿದ್ದೀರಿ. ಇದು ಸಹ ಅದಕ್ಕೇ ಸಂಬಂಧಪಟ್ಟದ್ದಾದುದರಿಂದ ಇದರ ಬಗ್ಗೆ ಒಂದು ತಜ್ಞರ ಸಮಿತಿಯನ್ನು ನೇಮಿಸಿ, ಕರಾವಳಿ ಪ್ರದೇಶದಲ್ಲಿ ಇರತಕ್ಕಂಥ ಕಾರ್ಖಾನೆಗಳಿಂದ ಎಷ್ಟರ ಮಟ್ಟಿಗೆ ಮೀನುಗಾರಿಕೆಯ ಮೇಲೆ ದುಷ್ಪರಿಣಾಮ ಆಗಬಹುದು ಎನ್ನುವ ಬಗ್ಗೆ ದಯವಿಟ್ಟು ಸರ್ವೆಯನ್ನು ಮಾಡಿಸಿ, ಅದಕ್ಕೆ ಶಾಶ್ವತವಾದ ಪರಿಹಾರವನ್ನು ಕಂಡು ಹಿಡಿಯುವುದಕ್ಕೆ ವ್ಯವಸ್ಥೆಯನ್ನು ಏರ್ಪಾಡು ಮಾಡಿ.

ಅಧ್ಯಕ್ಷರೇ. ಇನ್ನು ಹೈನುಗಾರಿಕೆಗೆ ಸಂಬಂಧಪಟ್ಟ ವಿಷಯ. ನಮ್ಮ ತೋಟಗಾರಿಕೆ ಇಲಾಖೆಯ ಬಗ್ಗೆ ಸಂಬಂಧಪಟ್ಟ ವಿಷಯವೇನಿದೆ ಇದಕ್ಕೆ ನಮ್ಮ ಪಶ್ಚಿಮ ಘಟ್ಟಗಳ ಬಗ್ಗೆ ಕಾರ್ಯಕ್ರಮವನ್ನು ಹಾಕಿ ಹಣವನ್ನು ಕೊಟ್ಟಿದ್ದೀರಿ. ಆದರೆ ವಿಶಾದ ಪಡತಕ್ಕಂಥ ವಿಷಯ ಇವತ್ತು ಏನೆಂದರೆ...

ಅಧ್ಯಕ್ಷರು.—3-4 ಜನ ಮಾನ್ಯ ಸಚಿವರು ಉತ್ತರ ಕೊಡಬೇಕಾಗಿರುವುದರಿಂದ ಹಾಗೂ ಸುಮಾರು 8 ಜನ ಸದಸ್ಯರು ಮಾತನಾಡುವವರಿರುವುದರಿಂದ ದಯವಿಟ್ಟು 5¼ ಘಂಟೆಯೊಳಗೆ ಮಾನ್ಯ ಸದಸ್ಯರೆಲ್ಲರೂ ಇರತಕ್ಕ ಕಾಲವನ್ನು ಹೊಂದಾಣಿಕೆ ಮಾಡಿಕೊಂಡು ಮುಗಿಸಬೇಕು.

(ಚೇರ್ಮನ್ ಶ್ರೀಮತಿ ರೇಣುಕಾ ರಾಜೇಂದ್ರನ್ ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಶ್ರೀ ಕಾಗೋಡು ತಿಮ್ಮಪ್ಪ.—ಪಶ್ಚಿಮ ಘಟ್ಟದ ಯೋಜನೆಗೆ ತೋಟಗಾರಿಕೆ ಇಲಾಖೆಯವರು ಕೆಲವೊಂದು ಹಣವನ್ನು ಕೊಟ್ಟಿದ್ದಾರೆ. ಮಲೆನಾಡು ಪ್ರದೇಶದಲ್ಲಿ ತೋಟಗಾರಿಕೆಯನ್ನು ಅಭಿವೃದ್ಧಿಪಡಿಸಬೇಕೆಂದು ವಿಶೇಷವಾದ ಕಾರ್ಯಕ್ರಮವನ್ನು ರೂಪಿಸಬೇಕೆಂದು ತೀವ್ರವಾಗಿ ಒತ್ತಾಯ ಪಡಿಸುತ್ತೇನೆ. ಆದರೆ ಇವತ್ತು ನಮ್ಮ ಸಚಿವರು ಇದರ ಬಗ್ಗೆ ಒಳ್ಳೆಯ ಕೆಲಸವನ್ನು ಮಾಡಿಲ್ಲ. ಇದರ ಬಗ್ಗೆ ದೂರದೃಷ್ಟಿಯನ್ನು ಇಟ್ಟುಕೊಳ್ಳದೆ ಒಳ್ಳೆಯ ಯೋಜನೆಗಳನ್ನು ಹಾಕಿಕೊಳ್ಳದೆ ಇಷ್ಟು ಹಣಬೇಕೆಂದು ಕೇಳಿ ಪಡೆಯುವುದಕ್ಕೆ ಆಗುವುದಿಲ್ಲ. ಇವತ್ತು ಮಲೆನಾಡು ಪ್ರದೇಶದಲ್ಲಿ ಅನಾನಸ್ ಬೆಳೆಯತಕ್ಕಂಥ ಪ್ರದೇಶವಿದೆ. ಕಿತ್ತಳೆ ಬೆಳೆಯತಕ್ಕಂಥ ಕ್ಷೇತ್ರವಿದೆ ಮತ್ತು ಮೆಣಸು ಬೆಳೆಯುವುದಕ್ಕೆ ಅವಕಾಶವಿದೆ. ಹಾಗೂ ಬಾಳೆಹಣ್ಣು ಬೆಳೆಯುವುದಕ್ಕೆ ಅವಕಾಶವಿದೆ. ಆದರೆ ಇದನ್ನು ಬೆಳೆಯುವುದಕ್ಕೆ ಒಂದೊಂದು ತಾಲ್ಲೂಕಿನಲ್ಲಿ ಒಂದೊಂದು ತರಹದ ವಾತಾವರಣವಿರಬಹುದು. ಮಲೆನಾಡಿನ ಮಧ್ಯ ಭಾಗದಲ್ಲಿರತಕ್ಕಂಥ ಪ್ರದೇಶದಲ್ಲಿ ವಿಶೇಷ ಪರಿಸ್ಥಿತಿಯಾಗಿರಬಹುದು. ಆದರೆ ಇವತ್ತು ತೋಟಗಾರಿಕೆ ಇಲಾಖೆಯವರು ಮಲೆನಾಡು ಪ್ರದೇಶದಲ್ಲಿ ವಿಶೇಷವಾಗಿ ವ್ಯಾಪಕವಾಗಿ ಈ ಮೇಲೆ ಹೇಳಿದ ಬೆಳೆಗಳನ್ನು ಬೆಳೆಯುವುದಕ್ಕೆ ಒಳ್ಳೆಯ ವಾತಾವರಣವಿರುವುದರಿಂದ ಯಾವ ಯಾವ ಜಾಗದಲ್ಲಿ ಎಂಥೆಂಥಾ ಬೆಳೆಯನ್ನು ಬೆಳೆಯಬಹುದು ಎನ್ನುವ ಬಗ್ಗೆ ಸರ್ವೆ ಮಾಡಿಸಿ ಒಂದು ಒಳ್ಳೆಯ ಯೋಜನೆಯನ್ನು ಸರ್ಕಾರದವರು ಸಿದ್ಧಪಡಿಸಬೇಕು. ಅದು ಇಲ್ಲದೆ ಸುಮ್ಮನೇ. Dont prepare the hotch potch plan.

ಶ್ರೀ ಕೆ. ಟಿ. ರಾಥೋಡ್.—ಪಶ್ಚಿಮ ಘಟ್ಟ ಎಂದರೆ ಅದಕ್ಕೆ ಒಂದು ಸ್ಕೀಮು ಇದೆ. ಅದಕ್ಕೆ ಒಂದು ಸಮಿತಿ ಮಾಡಿದ್ದಾರೆ. ಮಹಾರಾಷ್ಟ್ರದ ಮುಖ್ಯ ಮಂತ್ರಿಗಳವರು ಅಲ್ಲಿಯ ಅಭಿವೃದ್ಧಿಗೆ ಹಣವನ್ನು ಅಲಾಟ್ ಮಾಡುತ್ತಾರೆ. ಅದಕ್ಕಾಗಿ ಮಲೆನಾಡಿನ ಕೆಲವು ತಾಲ್ಲೂಕ್‌ಗಳನ್ನು ಕೂಡ ಸೆಲೆಕ್ಟ್ ಮಾಡಿದ್ದು ಆಗಿದೆ.

ಶ್ರೀ ಕಾಗೋಡು ತಿಮ್ಮಪ್ಪ.—ಅವರು ಸೆಲೆಕ್ಟ್ ಮಾಡಿಕೊಂಡರೆ ಮಾಡಿಕೊಳ್ಳಲಿ. ತಾವು ನಮ್ಮ ಹಣವನ್ನು ಖರ್ಚು ಮಾಡಿ ಕೆಲಸ ಮಾಡಿಸುವುದಕ್ಕೆ ಸಾಧ್ಯತೆ ಇರುವುದರಿಂದ ಅಲ್ಲಿ ಕೆಲಸ ಮಾಡಿಸಿ. ಈಗ ಉದಾಹರಣೆಗೆ ತೀರ್ಥಹಳ್ಳಿಯ ತಾಲ್ಲೂಕಿನಲ್ಲಿ ಬಾಳೆ ಹಣ್ಣು ಏಲಕ್ಕಿ. ಮೆಣಸು ಬೆಳೆಯಬಹುದು ಈ ತರಹದ ಕೆಲವು ಕ್ಷೇತ್ರಗಳನ್ನು ಆರಿಸಿ ಅಲ್ಲಿ ಅನೇಕ ತರಹದ ಬೆಳೆಗಳನ್ನು ಬೆಳೆಯುವುದಕ್ಕೆ ಸಾಧ್ಯವಾಗುತ್ತದೆ. ಜೊತೆಗೆ ಅಲ್ಲಿರತಕ್ಕಂಥ ವಾತಾವರಣಕ್ಕೆ ಅನುಸಾರವಾಗಿ ತಾವು ಅಭಿವೃದ್ಧಿಯನ್ನು ಪಡಿಸುವುದಕ್ಕೆ ಸಾಧ್ಯವಾಗುತ್ತದೆ. ಇದರಲ್ಲಿ ಮಹಾರಾಷ್ಟ್ರದ ಮುಖ್ಯ ಮಂತ್ರಿಗಳು ಅಧ್ಯಕ್ಷರಾಗಿದ್ದಾರೆ, ನಮ್ಮ ರಾಜ್ಯದ ಹಣಕಾಸಿನ ಸಚಿವರು ಸದಸ್ಯ ರಾಗಿದ್ದಾರೆ. ನಮ್ಮ ಹಣಕಾಸಿನ ಸಚಿವರಿರುವುದು ಸೊಂಡೂರಿನಲ್ಲಿ, ಅವರಿಗೆ ಮಲೆನಾಡಿನ ಬಗ್ಗೆ ಹೆಚ್ಚಿಗೆ ಗೊತ್ತಿಲ್ಲ. ಇಂಥವರು ಸದಸ್ಯರಾದರೆ ನಮ್ಮ ಮಲೆನಾಡು ಪ್ರದೇಶ ಉದ್ಧಾರವಾಗುವುದು ಯಾವಾಗ? ಯೋಜನೆಗಳನ್ನು ರೂಪಿಸುವ ಕಾಲದಲ್ಲಿ ಈ ಮಂಡಲಿಯವರು ಎಷ್ಟೆಷ್ಟು ತಾಲ್ಲೂಕುಗಳಲ್ಲಿ ಸಣ್ಣ ಸಣ್ಣ ಸಮ್ಮೇಳನಗಳನ್ನು ಮಾಡಿದ್ದಾರೆ? ನಮ್ಮ ಸಮಸ್ಯೆಗಳೇನು? ನಮ್ಮ ಬೇಡಿಕೆಗಳೇನು? ಯಾವ ರೀತಿ ಅಲ್ಲಿ ಅಭಿವೃದ್ಧಿ ಮಾಡಬಹುದು? ಯಾವ ರೀತಿ ಅಭಿವೃದ್ಧಿ ಮಾಡುವುದಕ್ಕೆ ಅವಕಾಶವಿದೆ ಎಂದು ತಿಳಿದು ಕೊಳ್ಳಲು ಬಂದ ಒಬ್ಬ ಅಧಿಕಾರಿಯನ್ನೂ ನಾನು ನೋಡಿಲ್ಲ. ಒಬ್ಬನೂ ಬಂದು ನನ್ನನ್ನೂ ನೋಡಿಲ್ಲ ನಾನು ಮೊನ್ನೇ ಒಂದು ಕಾಗದ ಬರೆದಿದ್ದೇನೆ. ತೋಟಗಾರಿಕೆಯ ಇಲಾಖೆಯೊಂದು ಒಹು ಅಂತಸ್ತಿನ ಕಟ್ಟಡದಲ್ಲಿದೆ. ಅಲ್ಲಿ ಕುಳಿತು ವಿಸ್ತರಣಾಧಿಕಾರಿಯಿಂದ ವರದಿ ತರಿಸಿ ಯೋಜನೆಗಳನ್ನು ಮಾಡುತ್ತಿದ್ದಾರೆ ಇವೆಲ್ಲಾ ಯೋಜನೆಗಳಾಗುವುದಿಲ್ಲ. ಮಾದರಿ ಯೋಜನೆಗಳೆಂದರೆ. ಜನತಾ ಯೋಜನೆಗಳಾಗಬೇಕು. ಹಿಂದೆ ಮಾಡುತ್ತಿದ್ದ ಹಾಗೆ ಈಗ ಮಾಡುವುದಕ್ಕಾಗುವುದಿಲ್ಲ. ಪ್ರತಿಯೊಂದು ಯೋಜನೆ ವಿಚಾರವಾಗಿಯೂ ಜನರ ಬಳಿ ಹೋಗಬೇಕು; ಅವರನ್ನು ಕೇಳಬೇಕು; ಅವರ ಸಮಸ್ಯೆಯನ್ನು ನಾವು ಅರಿಯಬೇಕು, ಆಲೋಚನೆ ಮಾಡಬೇಕು. ಅನಂತರ ಯೋಜನೆಯ ಪ್ರತಿಫಲವನ್ನು ಆ ಜನರು ಪಡೆಯುವಂತೆ ನಾವು ಯೋಜನೆಗಳನ್ನು ತಯಾರಿಸಬೇಕು. ಇಂಥ ಯೋಜನೆಗಳನ್ನು ಸಿದ್ಧ ಮಾಡಬೇಕಾಗಿ ಬಂದಾಗ ಯೋಜನೆಗಳನ್ನು ಹಿಂದೆ ತಯಾರಿಸಿದವರು ಆಯಾ ತಾಲ್ಲೂಕುಗಳಲ್ಲಿನ ವಾಸ್ತವಿಕ ಪರಿಸ್ಥಿತಿಯನ್ನು ಗಮನಿಸಲಿಲ್ಲ; ಮತ್ತು ವಾಸ್ತವಿಕ ಪರಿಸ್ಥಿತಿಗೆ ಆದ್ಯತೆಯನ್ನು ನೀಡಲಿಲ್ಲ. ತೋಟಗಾರಿಕೆ ಇಲಾಖೆ ನಮ್ಮ ರಾಜ್ಯದಲ್ಲಿ ಸಾವಿರಾರು ಕೆಲಸಗಳನ್ನು ಮಾಡುವುದಿದೆ. ಇಂದು ನಮ್ಮ ರಾಜ್ಯದಲ್ಲಿ ಅನೇಕ ಜನ ವಿದ್ಯಾವಂತ ನಿರುದ್ಯೋಗಿಗಳಿದ್ದಾರೆ. ನಿಮ್ಮ ತೋಟಗಾರಿಕೆ ಇಲಾಖೆಯಲ್ಲಿ ಅವರಿಗೆಲ್ಲಾ ಉದ್ಯೋಗವನ್ನು ಕೊಡಬಹುದು. ಕೇರಳದಿಂದ ಬಂದು ನಮ್ಮ ಪಶ್ಚಿಮ ಘಟ್ಟಗಳಲ್ಲಿ ಜೀವನ ಮಾಡುತ್ತಿರುವವರನ್ನು ಉದಾಹರಿಸಿ ತಮಗೆ ಹೇಳುತ್ತೇನೆ ನಮ್ಮ ಸಾಗರ ತಾಲ್ಲೂಕಿನಲ್ಲಿ ಪಶ್ಚಿಮ ಘಟ್ಟದ ಗುಡ್ಡಗಳಿವೆ. ಅಲ್ಲಿಗೆ ಕೇರಳದಿಂದ ಸುಮಾರು ಐವತ್ತು ಕುಟುಂಬಗಳು ಬಂದು ಸೇರಿಕೊಂಡಿವೆ. ಆ ಗುಡ್ಡಗಳಲ್ಲಿ ಅವರು ಗೆಣಸು, ಬಾಳೆಹಣ್ಣು ಮುಂತಾಗಿ ಬೆಳೆಯುತ್ತಿದ್ದಾರೆ; ಸಣ್ಣ ಸಣ್ಣ ತರಕಾರಿ ಬೆಳೆಯುತ್ತಿದ್ದಾರೆ. ಅವರು ಅವುಗಳನ್ನು ಬೆಳೆದೇ ಜೀವನ ಸಾಗಿಸುತ್ತಿದ್ದಾರೆ. ಕೆಲವು ಮರಾಠಿ ಜನರು ಬಂದು, ಕೇರಳದವರು ಇಲ್ಲಿಗೆ ಬಂದು ಗಲಾಟೆ ಮಾಡುತ್ತಿದ್ದಾರೆ ಎಂದು ನನ್ನಲ್ಲಿ ದೂರಿದರು. ಸರಿ; ನೋಡೋಣ ಎಂದು ನಾನು ಆ ಗುಡ್ಡಗಳನ್ನು ಏರಿ, ಕೇರಳದವರು ಇರುವ ಕಡೆ ಹೊರಟೆ ಅಲ್ಲಿ ಅವರು ಸಣ್ಣ ಸಣ್ಣ ಮನೆಗಳನ್ನು ಮಾಡಿಕೊಂಡಿದ್ದಾರೆ; ಅದರ ಸುತ್ತಲೂ ಒಂದೊಂದು ಎಕರೆ ಪ್ರದೇಶವನ್ನು ಕೃಷಿ ಯೋಗ್ಯವನ್ನಾಗಿ ಮಾಡಿ ಅದರಲ್ಲಿ ಬೆಳೆ ಬೆಳೆಯುತ್ತಿದ್ದಾರೆ. ಇಷ್ಟೆಲ್ಲಾ ಮಾಡಿದರೂ ಅವರು ಶುಭ್ರವಾಗಿದ್ದ ಬಿಳಿ ಬಟ್ಟೆಯನ್ನು ಹಾಕಿಕೊಂಡು ರಸ್ತೆಯಲ್ಲಿ ಓಡಾಡುತ್ತಾರೆ ಬಹಳ ಅಚ್ಚುಕಟ್ಟಾಗಿಯೂ ಇರುತ್ತಾರೆ. ಆ ಗುಡ್ಡದ ಮೇಲೆ ಬೆಳೆಯುವ ಮರಗೆಣಸೇ ಅವರ ಊಟ. ಐವತ್ತು ಅವರು ಒಂದು ಎಕರೆ ಜಮೀನನ್ನು ಸಾಗುವಳಿ ಮಾಡಿಕೊಂಡು ಗಂಡ ಹೆಂಡಿರಿಬ್ಬರು ಮೂರು ಜನ ಮಕ್ಕಳೊಂದಿಗೆ ಸುಖವಾಗಿ ಜೀವನ ಮಾಡಿಕೊಂಡು ಬರುತ್ತಿದ್ದಾರೆ. ಅವರು ಅಲ್ಲಿ ವ್ಯವಸಾಯ ಮಾಡಿದರೂ, ಪೇಟೆ ಕಡೆ ಬರುವಾಗ ಬಹಳ ಶುಭ್ರವಾದ ಬಟ್ಟೆಗಳನ್ನು ಧರಿಸಿರುತ್ತಾರೆ. ಇಂಥಾ ಭೂಮಿ ಮಲೆನಾಡಿನ ಪ್ರದೇಶದಲ್ಲಿ ಬಹಳವಾಗಿದೆ. ಅಲ್ಲಿ ಯಾವ ಯಾವ ಬೆಳೆಯನ್ನು ಉತ್ತಮವಾಗಿ ಬೆಳೆಯುವುದಕ್ಕೆ ಸಾಧ್ಯವೆನ್ನುವುದನ್ನು ಕಂಡು ಹಿಡಿಯಬೇಕು. ಕಂಡು ಹಿಡಿದು, ಸಾವಿರಾರು ಜನ ವಿದ್ಯಾವಂತ ಯುವಕರಿಗೆ ಒಬ್ಬೊಬ್ಬರಿಗೆ ನಾಲ್ಕು ನಾಲ್ಕು

ಎಕರೆ ಜಮೀನು ಕೊಟ್ಟು, ಅದರಲ್ಲಿ ಶುಂಠಿ, ಬಾಳೆ, ಕಿತ್ತಳೆ, ಮರಗೆಣಸು ಮುಂತಾದ ಬೆಳೆಯನ್ನು ಬೆಳೆಯುವ ಮಾರ್ಗ ತೋರಿಸಿದರೆ, ಅವರಿಗೆ ಉದ್ಯೋಗವನ್ನು ಕೊಟ್ಟಂತಾಗುತ್ತದೆನ್ನುವುದು ನನ್ನ ಅಭಿಪ್ರಾಯ. ಆದುದರಿಂದ ಇದನ್ನೆಲ್ಲಾ ಒಳಗೊಂಡಂತೆ ಮಾನ್ಯ ತೋಟಗಾರಿಕಾ ಸಚಿವರು ಪಶ್ಚಿಮ ಘಟ್ಟದ ಒಂದು ಯೋಜನೆಯನ್ನು ತಯಾರಿಸಿ, ಅದನ್ನು ಅಲ್ಲಿ ಮಂಡಿಸಬೇಕು. ನಾವು ಕೇಳುವುದು ಕೇಳೋಣ; ಅವರು ಈ ಯೋಜನೆಗೆ ಹಣ ಎಷ್ಟಾದರೂ ಕೊಡಲಿ ಆದುದರಿಂದ, ಇದನ್ನು ಮಾಡಬೇಕೆಂದು ಮಾನ್ಯ ತೋಟಗಾರಿಕಾ ಇಲಾಖಾ ಸಚಿವರಲ್ಲಿ ನಾನು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ.

ತೋಟಗಾರಿಕೆ ಇಲಾಖೆಯಲ್ಲಿ ಅನೇಕ ನರ್ಸರಿಗಳಿವೆ ಆದರೆ, ಇವೊಂದೂ ಲಾಭದಾಯಕವಾಗಿ ನಡೆಯುತ್ತಿಲ್ಲ. ಅಲ್ಲಿನ ಅಧಿಕಾರಿಗಳು ಮಂತ್ರಿಗಳು ಬಂದಾಗ ಅಲ್ಲಿಗೆ ಕರೆದುಕೊಂಡು ಹೋಗಿ ಅದೂ ಇದೂ ನೋಡಿಸಿ, ಆಮೇಲೆ ಸುಮ್ಮನಾಗಿಬಿಡುತ್ತಾರೆ ಪ್ರತಿಯೊಂದು ತಾಲ್ಲೂಕಿನಲ್ಲಿ ಒಬ್ಬ ಅಧಿಕಾರಿ ಕೈಕೆಳಗೆ ನಾಲ್ಕೆಂಟು ಜನ ಕೆಲಸ ಮಾಡುತ್ತಿರುತ್ತಾರೆ. ಆದರೆ, ಒಂದೂ ಲಾಭದಾಯಕವಾಗಿ ನಡೆಯುತ್ತಿಲ್ಲ. ನಾವು ಖರ್ಚು ಮಾಡಿದ್ದಕ್ಕೆ ಪ್ರತಿಫಲವಾಗಿ ಆದಾಯ ಬರುವ ರೀತಿಯ ವಿಧಾನವನ್ನನುಸರಿಸಿ, ಯೋಜನೆಗಳನ್ನು ತೀವ್ರಗತಿಯಿಂದ ಮುಂದುವರಿಸಬೇಕಾಗಿದೆ ಆದರೆ, ತೋಟಗಾರಿಕೆ ಇಲಾಖೆಯಲ್ಲಿ ಇಲ್ಲಿಯವರಿಗೆ ಯೋಜನೆಗಳಿಂದ ಮಾಡಿದ ಅಭಿವೃದ್ಧಿ ಏನೇನೂ ಸಾಲದು. ಸಿದ್ದಾಪುರದಲ್ಲೊಂದು ತೋಟಗಾರಿಕೆ ಇಲಾಖೆಯ ನರ್ಸರಿ ಅಲ್ಲಿ ಇದೆ. ಸಸಿ ಇಲ್ಲ, ದುಡ್ಡೆಲ್ಲವನ್ನೂ ತಿಂದು ಹಾಕಿ ಈಗ ಸುಮ್ಮನೆ ಕುಳಿತುಕೊಂಡಿದ್ದಾರೆ. ಇದರ ಬಗ್ಗೆ ಇಲಾಖೆಯವರು ಏನು ಕ್ರಮ ತೆಗೆದುಕೊಂಡಿದ್ದಾರೆ? ಸಿರಸಿ ಊರಿನಲ್ಲಿ ಅನಾನಸ್ ಬೆಳೆಯನ್ನು ಚೆನ್ನಾಗಿ ಬೆಳೆಯುತ್ತಾರೆ; ಆದರೆ ಅದಕ್ಕೆ ಇಂದು ಮಾರುಕಟ್ಟೆಯೇ ಇಲ್ಲ. ಇದರ ಬಗ್ಗೆ ಇಲಾಖೆಯವರು ಆಲೋಚನೆ ಮಾಡಿದ್ದಾರೆಯೇ? ಏನೂ ಮಾಡಿದ ಹಾಗೆ ಕಾಣಲಿಲ್ಲ. ಸಾಗರ, ಕಾರ್ಕಳ ಮತ್ತು ಕುಂದಾಪುರ ತಾಲ್ಲೂಕುಗಳಲ್ಲಿ ಹೇರಳವಾಗಿ ಅನಾನಸನ್ನು ಬೆಳೆಯುವುದಕ್ಕೆ ಸಾಧ್ಯವಿದೆ. ಆದರೆ, ಅವುಗಳಿಗಿಂದು ಮಾರ್ಕೆಟ್ ಇಲ್ಲ. ಮಾನ್ಯ ಮೊಯಿಲಿಯವರು ಅನಾನಸ್ ದಾರದಲ್ಲಿ ಚಾಪೆ ಎಣೆಯುವುದಕ್ಕೆ ಸಾಧ್ಯವೆಂದು ಹೇಳಿದ್ದಾರೆ. ಇಂದು ಶಾಲಾ ಕಾಲೇಜಿನ ಮಕ್ಕಳಿಗೆ ಕೇರ್ ಫುಡ್ ಕೊಡುವುದಕ್ಕಾಗಿ ಸರ್ಕಾರದವರು ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದಾರೆ. ಇದರ ಬದಲು ಶಾಲಾ ಕಾಲೇಜಿನ ಮಕ್ಕಳಿಗೆ ಎರಡೆರಡು ಚೂರು ಅನಾನಸ್ ಹಣ್ಣು ಕೊಡಿ. ಇದು ಹತ್ತಿಪ್ಪತ್ತು ಪೈಸೆಯೊಳಗೇ ಮುಗಿಯುತ್ತದೆ; ಮಕ್ಕಳಿಗೆ ತಿಂಡಿ ಕೊಟ್ಟಂತೆಯೂ ಆಗುತ್ತದೆ. ಇದೇನು ಯಾವ ಪೌಷ್ಟಿಕಾಂಶಕ್ಕೂ ಕಡಿಮೆಯಿಲ್ಲ. ಅನಾನಸ್ ಅನ್ನು ಮಾರಾಟ ಮಾಡುವುದಕ್ಕೆ ಸರ್ಕಾರದವರು ಒಂದು ಉತ್ತಮ ಮಾರುಕಟ್ಟೆಯನ್ನು ಸಿದ್ಧಪಡಿಸಬೇಕು. ಅನಾನಸ್ ಹೆಚ್ಚಿಗೆ ಬೆಳೆಯುವ ಕಡೆ ಶೀತಲ ಗೃಹಗಳಿಲ್ಲ. ಹೇರಳವಾಗಿ ಬೆಳೆವ ಕಡೆ ಅವುಗಳನ್ನು ಒಂದೆರಡು ದಿನ ಕೆಡದಂತೆ ಇಟ್ಟುಕೊಳ್ಳುವುದಕ್ಕೆ ಜಾಗವಿಲ್ಲ. ಸಿರಸಿ, ಸಿದ್ದಾಪುರ, ಸಾಗರ ಮತ್ತು ಇನ್ನಿತರ ಅನಾನಸ್ ಬೆಳೆಯುವ ಪ್ರದೇಶಗಳಲ್ಲಿ ಉತ್ತಮವಾದ ಶೀತಲ ಗೃಹಗಳನ್ನು ನಿರ್ಮಿಸಿ, ಅನಾನಸ್ ಹಣ್ಣನ್ನು ರಕ್ಷಿಸಿ, ಸಂಗ್ರಹಿಸಿಡುವುದಕ್ಕೆ ಸರ್ಕಾರದವರು ಪ್ರಯತ್ನ ಮಾಡಬೇಕು. ಅಷ್ಟೇ ಅಲ್ಲದೆ, ತೋಟಗಾರಿಕೆ ಇಲಾಖೆ ತನ್ನ ಯೋಜನೆಗಳನ್ನು ಕಾರ್ಯರೂಪಕ್ಕೆ ತರಲು ಆಸಕ್ತಿ ವಹಿಸಬೇಕು ಮಾನ್ಯ ಮಂತ್ರಿಗಳು ವಿಜಾಪುರದ ಕಡೆಗೆ ಓಡಾಡುತ್ತಿದ್ದರೆ ತೋಟಗಾರಿಕೆ ಬೆಳೆಯುವುದಿಲ್ಲ; ಅವರು ಇದರ ಬಗ್ಗೆ ಹೆಚ್ಚು ಹೆಚ್ಚು ಆಸಕ್ತಿವಹಿಸಬೇಕೆಂದು ಹೇಳುತ್ತೇನೆ.

ಇನ್ನು ಕೃಷಿ ಸಚಿವರಿಗೆ ಸಂಬಂಧಪಟ್ಟ ಬೇಡಿಕೆಯಿದೆ ನಾನು ಕೃಷಿ ಸಚಿವರಿಗೆ ಇತ್ತೀಚೆಗೊಂದು ಕಾಗದ ಬರೆದಿದ್ದೆ. ಮಾನ್ಯ ಚನ್ನಬಸಪ್ಪನವರು ಎಂ.ಬಿ.ಬಿ ಎಸ್. ಆದವರಿಗೆ ಹೌಸ್ ಸರ್ಜನ್‌ಶಿಪ್ ಕೊಡುತ್ತಾರೆ ಅವರಿಗೆ ನಾನೂರು ರೂಪಾಯಿ ಸ್ಟೈಫಂಡ್ ಸಹ ಕೊಡುತ್ತಾರೆ. ಅದೇ ರೀತಿ ವ್ಯವಸಾಯ ಇಲಾಖೆಯವರು ಗ್ರಾಮ ಸೇವಕ ತರಬೇತಿದಾರರಿಗೆ ಎರಡು ವರ್ಷಗಳ ಕಾಲ ತರಬೇತಿ ಕೊಟ್ಟು, ನೂರು ರೂಪಾಯಿ ಸ್ಟೈಫಂಡ್ ಕೊಡುತ್ತಾರೆ. ಈ ತರಬೇತಿಗೆ ಚಿಕ್ಕೇಗೌಡರ ಮನೆಯವರು ಬರುವುದಿಲ್ಲ: ದೊಡ್ಡ ದೊಡ್ಡ ಮಂತ್ರಿಗಳ ಮಕ್ಕಳು ಬರುವುದಿಲ್ಲ, ಶಾಸಕರ ಮಕ್ಕಳು ಬರುವುದಿಲ್ಲ. ಕಾರಣ ಇದೊಂದು ಸಣ್ಣ ಕೆಲಸ. ಅಲ್ಲಿಗೆ ಬರುವ ಹುಡುಗರು ಬಡವರು, ಸಾಮಾನ್ಯ ಜನರ ಮಕ್ಕಳು. ಅವರಿಗೆ ಇಲಾಖೆಯವರು ಕೊಡುವ ನೂರು ರೂಪಾಯಿ,

ಅವರಿರುವ ತರಬೇತಿ ಕೇಂದ್ರದಲ್ಲಿ ಊಟ ಮಾಡುವುದಕ್ಕೆ ಸಾಕಾಗುವುದಿಲ್ಲ. ಆ ಹುಡುಗರಿಗೆ ಮನೆಯಿಂದಲೂ ಹಣ ಬರುವುದಿಲ್ಲ. ಏಕೆಂದರೆ ಇವರೆಲ್ಲ ಬರುವಾಗ ಕೆಲಸ ಸಿಕ್ಕಿದೆ ಎಂದು ಮನೆಯಲ್ಲಿ ಹೇಳಿ ಬಂದುಬಿಟ್ಟಿರುತ್ತಾರೆ. ಹೀಗಾಗಿ, ಇತ್ತ ಮನೆ ದುಡ್ಡೂ ಇಲ್ಲ; ಅತ್ತ ಸರ್ಕಾರ ಕೊಡುವ ಹಣವೂ ಸಾಕಾಗುವುದಿಲ್ಲ. ಡಾಕ್ಟರುಗಳಿಗೆ ನಾನೂರು ರೂಪಾಯಿ ಕೊಡುವಾಗ ಇವರಿಗ್ಯಾತಕ್ಕೆ ನೂರು ರೂಪಾಯಿ ? ನಾನೇ ರಿಯಾಯತಿ ದರ ಹೇಳುವುದಾದರೆ, ಅವರಿಗೆ ಇನ್ನೂರು ರೂಪಾಯಿ ಕೊಟ್ಟು, ಆ ಪರದೇಶಿಗಳು ತರಬೇತಿಯಲ್ಲಿ ಯಾವ ತೊಂದರೆ ತಾಪತ್ರಯವಿಲ್ಲದೆ ಜೀವನ ಸಾಗಿಸುವುದಕ್ಕೆ ಅನುವು ಮಾಡಿಕೊಡಬೇಕು. ತರಬೇತಿ ಪಡೆಯುವವರೇನೂ ಬಹಳ ವರ್ಷಗಳಿರುವುದಿಲ್ಲ; ಕೇವಲ ಒಂದೂ ಒಂದೂವರೆ ವರ್ಷಗಳಿರುತ್ತಾರೆ. ಆದುದರಿಂದ, ಇದೇನು ಇಲಾಖೆಯ ಮೇಲೆ ದುಬಾರಿ ಖರ್ಚು ಬೀಳುವುದಿಲ್ಲ ಇದನ್ನು ದಯಮಾಡಿ, ಅವರಿಗೆ ನೀಡುತ್ತಿರುವ ಸ್ಟೈಫಂಡ್‌ನ್ನು ಇನ್ನೂರು ರೂಪಾಯಿಗಳಿಗೆ ಏರಿಸಬೇಕೆಂದು ಕೇಳಿಕೊಳ್ಳುತ್ತೇನೆ

ಗ್ರಾಮ ಸೇವಕರು ಹೆಚ್ಚೂ ಕಡಿಮೆ ಗ್ರಾಮಾಂತರ ಪ್ರದೇಶಗಳಲ್ಲಿ ವ್ಯವಸಾಯ ಮಾಹಿತಿಯನ್ನು ಕೊಡುವ ಜನರು. ಎಲ್ಲ ಕ್ಷೇತ್ರಕ್ಕಿಂತ ವ್ಯವಸಾಯ ಕ್ಷೇತ್ರ ದೊಡ್ಡದು. ಇಂಥಾ ಗ್ರಾಮ ಸೇವಕರು ಇಂದು ಬಹಳ ಕಡಮೆ ಸಂಖ್ಯೆಯಲ್ಲಿದ್ದಾರೆ. ಪ್ರತಿಯೊಂದು ತಾಲ್ಲೂಕಿನಲ್ಲಿ ಒಂದೊಂದು ಸರ್ಕಲ್ ಎಂದು ಮಾಡಿ, ಆ ಸರ್ಕಲ್‌ಗೆ ನಾಲ್ಕೈದು ಗ್ರಾಮ ಪಂಚಾಯತಿಗಳನ್ನು ಸೇರಿಸಿರುತ್ತಾರೆ. ಇಂಥಾ ಒಂದು ಸರ್ಕಲ್‌ಗೆ ಒಬ್ಬ ಗ್ರಾಮಸೇವಕನಿರುತ್ತಾನೆ. ಈ ಸರ್ಕಲಿನ ಕೇಂದ್ರದಲ್ಲಿಯೇ ಗ್ರಾಮ ಸೇವಕ ವಾಸ ಮಾಡಬೇಕೆಂದು ಸರ್ಕಾರದ ಸೂಚನೆ ಇದೆ. ಆದರೆ, ಇಂಥಾ ಅನೇಕ ಕೇಂದ್ರಗಳಲ್ಲಿ ಮನೆಗಳು ಸಿಕ್ಕುವುದಿಲ್ಲ. ಇದರಿಂದಾಗಿ, ಅನೇಕ ಗ್ರಾಮ ಸೇವಕರು ಗ್ರಾಮಗಳಲ್ಲಿ ಇಂದು ವಾಸ ಮಾಡುತ್ತಿಲ್ಲ. ಗ್ರಾಮ ಸೇವಕರು ಗ್ರಾಮಗಳಲ್ಲಿ ವಾಸ ಮಾಡದೆಯಿರುವುದರಿಂದ, ಅವರು ವ್ಯವಸಾಯಕ್ಕೆ ಸಂಬಂಧಪಟ್ಟ ಯಾವುದೇ ಕೆಲಸವನ್ನು ಸಕ್ರಿಯವಾಗಿ ಮಾಡುವುದಕ್ಕಾಗದ ಪರಿಸ್ಥಿತಿ ಬಂದುಬಿಟ್ಟಿದೆ.

ಆದ್ದರಿಂದ ಗ್ರಾಮ ಸೇವಕರು ಪೇಟೆಗಳಲ್ಲಿ ಇರುತ್ತಾರೆಯೇ ವಿನಹ ಹಳ್ಳಿಗಳಲ್ಲಿ ಇರುವುದಿಲ್ಲ. ಮಂತ್ರಿಗಳು ಬರತಕ್ಕ ಸಂದರ್ಭದಲ್ಲಿ ಕ್ಷೇತ್ರಾಭಿವೃದ್ಧಿಕಾರಿಯವರು ಬರತಕ್ಕ ಸಂದರ್ಭದಲ್ಲಿ ಹಳ್ಳಿಗಳಿಗೆ ಬರುತ್ತಾರೆ, ಇವರನ್ನು ಹಳ್ಳಿಗಳಲ್ಲಿಯೇ ಉಳಿಯುವ ರೀತಿಯಲ್ಲಿ ವ್ಯವಸ್ಥೆ ಮಾಡಬೇಕು, ಗ್ರಾಮಸೇವಕರುಗಳಿಗೆ ಕಟ್ಟಡಗಳನ್ನು ಕಟ್ಟಿಸಿಕೊಡತಕ್ಕ ವ್ಯವಸ್ಥೆ ಮಾಡಬೇಕು. ವಿಲೇಜ್ ಅಕೌಂಟ್ಸ್‌ರುಗಳಿಗೆ ಆಫೀಸ್ ಕಂ ರೆಸಿಡೆನ್ಷಿಯಲ್ ಕ್ವಾರ್ಟರ್ಸ್‌ಗಳನ್ನು ಕಟ್ಟುವ ಯೋಜನೆಯನ್ನು ಹುಚ್ಚಮಾಸ್ತಿಗೌಡರು ಮಾಡಿದ್ದಾರೆಂದು ಕೇಳಿದ್ದೇನೆ. ಅದೇ ರೀತಿ ಗ್ರಾಮ ಸೇವಕರುಗಳಿಗೂ ರೆಸಿಡೆನ್ಷಿಯಲ್ ಕಂ ಆಫೀಸ್ ಕ್ವಾರ್ಟರ್ಸ್‌ಗಳನ್ನು ಮಾಡಬೇಕು. ಇದಕ್ಕಾಗಿ 10 ಸಾವಿರ ರೂಪಾಯಿಗಳನ್ನು ಖರ್ಚುಮಾಡಬೇಕಾಗಿಲ್ಲ. 5—6 ಸಾವಿರ ರೂಪಾಯಿಗಳನ್ನು ಖರ್ಚುಮಾಡಿದರೆ ಸಾಕು, ಇದರಿಂದ ಗ್ರಾಮಸೇವಕರುಗಳು ಗ್ರಾಮಾಂತರ ಪ್ರದೇಶಗಳಲ್ಲಿ ವಾಸಮಾಡುವುದಕ್ಕೆ ಅನುಕೂಲವಾಗುತ್ತದೆ. ಒಬ್ಬ ಗ್ರಾಮಸೇವಕನಿಗೆ 5-6 ಹಳ್ಳಿಗಳನ್ನು ಸೇರಿಸಿ ಒಂದು ಪಂಚಾಯ್ತಿ ಸೇರಿಸಿ ಒಂದು ಸರ್ಕಲ್ ಮಾಡಿ ಕೊಟ್ಟಿರುತ್ತಾರೆ. ಒಂದು ತಿಂಗಳಿಗೆ ಒಂದೂ ಸಾರಿಯೂ ಒಂದು ಊರಿಗೆ ಹೋಗುವುದಕ್ಕೆ ಆಗುವುದಿಲ್ಲ. ಬೈಸಿಕಲ್ ಇಲ್ಲದೇ ಓಡಾಡುವ ಪರಿಸ್ಥಿತಿ ಇರುತ್ತದೆ. ಹೆಚ್ಚೆಂದರೆ ಯಾವುದೇ ಸಂದರ್ಭದಲ್ಲಿಯೂ ಮೂರು ಮೈಲಿ ಫಾಸಲೆ ಮೇಲೆ ಇರಬಾರದೆಂದು, ಒಬ್ಬ ಗ್ರಾಮಸೇವಕನಿಗೆ ಮೂರು ಹಳ್ಳಿಗಳಿಗಿಂತ ಜಾಸ್ತಿ ಕೊಡುವುದಕ್ಕೆ ಹೋಗಬಾರದು. ಅವನಿಗೆ ಬೀಜಗಳನ್ನು ಸರಬರಾಜು ಮಾಡತಕ್ಕ ಕೆಲಸ, ಸುಗ್ಗಿಯ ಕಾಲದಲ್ಲಿ ಮೇಲ್ವಿಚಾರಣೆ ಮಾಡತಕ್ಕ ಕೆಲಸ ಇರುತ್ತದೆ ಗ್ರಾಮ ಸೇವಕ ನಾನು ಒಬ್ಬ ಅಧಿಕಾರಿ ಎಂದು ಇರುತ್ತಾನೆಯೇ ಹೊರತು ಅವನಿಂದ ವ್ಯವಸಾಯಗಾರನಿಗೆ ಯಾವುದೇ ರೀತಿಯ ಸಹಾಯ ಸಿಗುವುದಿಲ್ಲ. ಸಣ್ಣ ಸಣ್ಣ ಸರ್ಕಲ್‌ಗಳಾಗಿ ಮಾಡಿ, ಸಣ್ಣ ಪ್ರದೇಶಗಳಾಗಿ ಮಾಡಿ ಪ್ರತಿಯೊಬ್ಬ ಗ್ರಾಮಸೇವಕನೂ ಅವನ ಪ್ರದೇಶದಲ್ಲಿ ಸುತ್ತಾಡಿ ಬರತಕ್ಕ ವ್ಯವಸ್ಥೆ ಮಾಡಿದರೆ ಕೆಲಸ ಕೊಡುವುದಕ್ಕೆ ಸಾಧ್ಯವಾಗುತ್ತದೆ. ಗ್ರಾಮ ಸೇವಕರುಗಳು ಗ್ರಾಮದಲ್ಲಿ ವಾಸಮಾಡಿ, ನೇರವಾಗಿ ವ್ಯವಸಾಯಗಾರನಿಗೆ ಸೇವೆಸಲ್ಲಿಸುವ ವಿಚಾರದಲ್ಲಿ ಪುನರ್‌ಪರಿಶೀಲನೆ ಮಾಡಬೇಕೆಂದು ಈ ಸಂದರ್ಭದಲ್ಲಿ ಒತ್ತಾಯ ಪಡಿಸುತ್ತೇನೆ.

ಅಗ್ರಿಕಲ್ಚರ್ಸ್ ಫಾರ್ಮ್ಸ್‌ಗಳ ಬಗ್ಗೆ ಒಂದು ಮಾತು ಹೇಳಬೇಕಾಗಿದೆ; ಇವತ್ತಿನ ಪ್ರತಿಕೆಯಲ್ಲೂ ಕೂಡ ಬಂದಿದೆ, ಆಚೆ ಮನೆಯಲ್ಲೂ ಕೂಡ ಪ್ರಶ್ನೆ ಬಂದಿತ್ತು. ಈ ಫಾರ್ಮ್ಸ್‌ಗಳು ಬಹಳ ಲುಕ್ಸಾನಿನಲ್ಲಿ ನಡೆಯುತ್ತಿವೆ, ಮೈಸೂರು ಜಿಲ್ಲೆಯಲ್ಲಿ ಫಾರ್ಮ್ಸ್‌ಗಳು ಜಾಸ್ತಿ ಇವೆ. ಇವತ್ತು ಅಗ್ರಿಕಲ್ಚರ್ ಫಾರ್ಮ್ಸ್‌ಗಳು ಸಮರ್ಪಕವಾಗಿ ಕೆಲಸ ಮಾಡಬೇಕಾದರೆ ಅವುಗಳಿಗೆ ಉತ್ತಮವಾದ ವ್ಯವಸ್ಥೆಯನ್ನು ಮಾಡಬೇಕಾಗಿದೆ. ನಾನು ಬಿಜಾಪುರಕ್ಕೆ ಹೋಗಿದ್ದಾಗ ಹಾಗೆಯೇ ಬಾದಾಮಿಗೆ ಹೋಗಿ ಅರಕೇರಿಯವರ ಊರಿನಲ್ಲಿರುವ ಜಾಯಿಂಟ್ ಫಾರ್ಮ್‌ಗೆ ಹೋಗಿದ್ದೆ, ಆ ಫಾರ್ಮ್‌ಗೆ ಭೂಮಿ ಕೊಟ್ಟಿದ್ದಾರೆ, ಮನೆ ಕೊಟ್ಟಿದ್ದಾರೆ ಅದರಿಂದ ಪ್ರತಿಫಲ ಇನ್ನೂ ಬಂದಿಲ್ಲ ಪ್ರತಿಫಲ ಇನ್ನೂ ಏತಕ್ಕೆ ಆಗಿಲ್ಲ ಅಂದರೆ, ಭೂಮಿ ಕೊಟ್ಟವರು ಉಳುವುದಕ್ಕೆ ಎತ್ತುಗಳನ್ನು ಕೊಡಲಿಲ್ಲ, ಕೃಷಿ ಮಾಡಿ ಪ್ರತಿಫಲ ಪಡೆಯಬೇಕಾದರೆ ಕನಿಷ್ಟ ಪಕ್ಷ 6 ತಿಂಗಳು ಬೇಕಾಗುತ್ತದೆ, ಆದರೆ ಇವತ್ತಿನವರೆವಿಗೂ ಉತ್ಪತ್ತಿಯನ್ನು ತೆಗೆಯುವುದಕ್ಕೆ ವ್ಯವಸ್ಥೆ ಮಾಡಿಲ್ಲ. ಮಾನ್ಯ ಅಧ್ಯಕ್ಷರೇ, ಕೃಷಿ ಫಾರ್ಮ್ಸ್‌ಗಳನ್ನು ವ್ಯವಸಾಯ ಫಾರ್ಮ್ಸ್‌ಗಳನ್ನು ಬಲಪಡಿಸಬೇಕಾದರೆ, ಅವುಗಳಿಗೆ ಬೇಕಾದ ಸವಲತ್ತುಗಳನ್ನು ಕೊಟ್ಟು ಆದಷ್ಟು ಬೇಗ ವ್ಯವಸ್ಥೆ ಮಾಡಬೇಕು.

ಶ್ರೀ ಎನ್. ಚಿಕ್ಕೇಗೌಡ —ಫಾರ್ಮ್‌ಗಳಲ್ಲಿ ಎರಡು ವಿಧ ಇದೆ, ನೀವು ಹೇಳತಕ್ಕದ್ದು ಸೀಡ್ಸ್ ಫಾರ್ಮ್‌ಗೆ ಸಂಬಂಧಪಟ್ಟದ್ದು.

ಶ್ರೀ ಕಾಗೋಡು ತಿಮ್ಮಪ್ಪ.—ಜಾಯಿಂಟ್ ಫಾರ್ಮ್ ಎಂದು ಮಾಡಿದ್ದಾರೆ, ಏತಕ್ಕೆಂದರೆ ಸಹಕಾರ ಕ್ಷೇತ್ರದಲ್ಲಿ ವ್ಯವಸಾಯ ಮಾಡತಕ್ಕದ್ದು ಮತ್ತು ಜಂಟೀ ಕ್ಷೇತ್ರದಲ್ಲಿ ವ್ಯವಸಾಯ ಮಾಡತಕ್ಕದ್ದು ಇನ್ನೂ ಬಹಳ ಕಾಲ ಮುಂದಿದೆ, ಸಣ್ಣ ಪ್ರಮಾಣಲ್ಲಿ ಸಣ್ಣ ಜನರು ಕೆಲಸ ಮಾಡತಕ್ಕ ಸಣ್ಣ ಫಾರ್ಮ್‌ಗಳು ಏನು ಇವೆ, ಅವುಗಳನ್ನು ಬಲಪಡಿಸುವುದಕ್ಕೆ ವ್ಯವಸಾಯ ಇಲಾಖೆ ಇನ್ನೂ ಏನು ವ್ಯವಸ್ಥೆ ಮಾಡಲಿಲ್ಲ. ಬಾದಾಮಿ ಕೃಷಿ ಫಾರ್ಮ್‌ನ ಮೇಲ್ವಿಚಾರಣೆಯನ್ನು ಒಬ್ಬ ಗ್ರಾಮ ಸೇವಕನಿಗೆ ಕೊಟ್ಟಿದ್ದಾರೆ, ಆದರೆ ಕೃಷಿ ಇಲಾಖೆಯವರು ಅದರ ಮೇಲೆ ಮಾಡತಕ್ಕ ಕೃಷಿಯನ್ನು ಮಾಡಲಿಲ್ಲ, ಕೃಷಿ ಫಾರ್ಮ್‌ಗಳನ್ನು ಅಭಿವೃದ್ಧಿ ಪಡಿಸುವ ಕೆಲಸದಲ್ಲಿ ಕೃಷಿ ಇಲಾಖೆ ಆಸಕ್ತಿವಹಿಸಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಇವತ್ತು ನಮ್ಮ ವ್ಯವಸಾಯಗಾರನಿಗೆ ಅನೇಕ ಕಡೆಗಳಲ್ಲಿ ಅನುಕೂಲವಾಗುವಂತ ಉತ್ತಮವಾದ ಬೀಜದ ತಳಿಗಳು ಬಂದಿವೆ. ನಮ್ಮ ಗ್ರೀನ್ ರೆವಿಲ್ಯೂಷನ್ ಇವತ್ತು ನಡೆಯುತ್ತದೆ. ಉತ್ತಮವಾದ ತಳಿಗಳು ಬಂದಷ್ಟು ರೋಗಗಳು ಕೂಡ ಜಾಸ್ತಿಯಾಗಿವೆ. ವ್ಯವಸಾಯಗಾರನಿಗೆ ಗೊಬ್ಬರ ಔಷಧಿಗಳು ಬಹಳ ದುಬಾರಿ ಬೆಲೆಯಾಗಿ ಇವತ್ತು ಅವುಗಳು ಸಿಗತಕ್ಕದ್ದು ಕಷ್ಟವಾಗಿದೆ. ವ್ಯವಸಾಯಗಾರನಿಗೆ ಕೃಷಿ ಕ್ಷೇತ್ರದಲ್ಲಿ ಸುಲಭವಾದ ಬೆಲೆಗೆ ಗೊಬ್ಬರ ಔಷಧಿ ಸಿಗತಕ್ಕ ವ್ಯವಸ್ಥೆ ಮಾಡಬೇಕು. ಇದು ಕೇಂದ್ರ ಸರ್ಕಾರಕ್ಕೆ ಸಂಬಂಧಪಟ್ಟದ್ದು ಎಂದು ಹೇಳುತ್ತಾರೆ ಇವತ್ತು ವ್ಯವಸಾಯ ಕ್ಷೇತ್ರದಲ್ಲಿ ಉತ್ತಮವಾದ ಬೀಜಗಳನ್ನು ಅಳವಡಿಸಿದ್ದಾರೆ. ಅನೇಕ ಸಂದರ್ಭದಲ್ಲಿ ವ್ಯವಸಾಯಗಾರ ಔಷಧಿ ಕೊಳ್ಳುವುದಕ್ಕೆ ಆಗದೆ ಲುಕ್ಸಾನಿಗೆ ಒಳಗಾಗಿದ್ದಾನೆ ನಮ್ಮ ಕೃಷಿ ಪದ್ಧತಿಯಲ್ಲಿ ಬೆಳೆಯ ಮೇಲೆ ಇನ್ಶೂರೆನ್ಸ್ ಮಾಡುವ ಯೋಜನೆ ತರುವುದಕ್ಕೆ ಆಗಿಲ್ಲ. ಕೃಷಿ ಇಲಾಖೆಯವರೇ ಔಷಧಿ ತಯಾರು ಮಾಡತಕ್ಕ ವ್ಯವಸ್ಥೆ ಮಾಡಬೇಕು ಇದಕ್ಕಾಗಿ ಹೆಚ್ಚಿಗೆ ಬಂಡವಾಳ ಬೇಕಾಗಿಲ್ಲ, ಸರ್ಕಾರಿ ಕ್ಷೇತ್ರದಲ್ಲಿ ಒಂದು ರಾಜ್ಯಮಟ್ಟದಲ್ಲಿ, ಒಂದು ಡಿವಿಜನಲ್ ಮಟ್ಟದಲ್ಲಿ ಸಣ್ಣಪುಟ್ಟ ಔಷಧಿಗಳನ್ನು ತಯಾರು ಮಾಡತಕ್ಕ ಸಣ್ಣಪುಟ್ಟ ಘಟಕಗಳನ್ನು ತೆರೆಯಬೇಕೆಂದು ಕೇಳಿಕೊಳ್ಳುತ್ತೇನೆ. ಕೃಷಿ ಇಲಾಖೆಗೆ ಸಂಬಂಧಪಟ್ಟಂತೆ ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ ಇದೆ, ಈ ಕಾರ್ಪೊರೇಷನ್ನಿನವರ ಔಷಧಿಗಳನ್ನು ತಯಾರು ಮಾಡುವ ಯೋಜನೆಯನ್ನು ಕೈಗೊಂಡರೆ ವ್ಯವಸಾಯಗಾರನಿಗೆ ಸುಲಭ ದರದಲ್ಲಿ ಔಷಧಿ ಸಿಗುವುದಕ್ಕೆ ಸಾಧ್ಯವಾಗುತ್ತದೆ. ಆದುದರಿಂದ ಈ ದಿಶೆಯಲ್ಲಿ ಕೃಷಿ ಇಲಾಖೆಯವರು ಆಲೋಚನೆ ಮಾಡಬೇಕೆಂದು ಹೇಳುತ್ತೇನೆ. ನಾನು ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್‌ನವರು ಏನು ಮಾಡುತ್ತಾರೆಂದು ತಿಳಿದುಕೊಂಡಿದ್ದೆ ಅಂದರೆ, ವ್ಯವಸಾಯಗಾರನಿಗೆ ವ್ಯವಸಾಯವನ್ನು ಆಧರಿಸಿದಂತ ಕಾರ್ಖಾನೆಗಳನ್ನು ಮತ್ತು ಉದ್ದಿಮೆಗಳನ್ನು ಪ್ರಾರಂಭ ಮಾಡುತ್ತಾರೆಂದು ತಿಳಿದುಕೊಂಡಿದ್ದೆ. ಅವರು ಈ ಕಸಬು ಮಾಡುತ್ತಾ ಇಲ್ಲ, ಇವರು ಮಾಡತಕ್ಕ ಸಾಮಾನುಗಳು ಯಾವುವೆಂದರೆ, ಬುಲ್ಡೋಜರ್‌ಗಳು, ಟ್ರಾಕ್ಟರ್‌ಗಳು, ಯಾವುದೇ

ಬುಲ್ಡೋಜರ್ ಆಗಲೀ, ಟ್ರ್ಯಾಕ್ಟರ್ ಆಗಲೀ ಇವತ್ತಿನವರೆವಿಗೂ ಕೂಡ ಒಂದು ದಿವಸಕ್ಕೆ ಎಷ್ಟು ಗಂಟೆಗಳ ಕಾಲ ಕೆಲಸ ಮಾಡಬೇಕೆಂಬ ಟಾರ್ಜೆಟ್ ಇದೆಯೋ ಕ್ಯಾಪಾಸಿಟಿ ಇದೆಯೋ ಅದರಂತೆ ಕೆಲಸ ಮಾಡದೇ ಇವತ್ತು ಲುಕ್ಸಾನು ಆಗುತ್ತಾ ಇದೆ. ಮಾನ್ಯ ಸಚಿವರು ಇವತ್ತು ವಿಚಾರ ಮಾಡಿದ್ದರೆ ತಿಳಿದಿರುತ್ತೆ, 1973–74ರ ಆಡಿಟ್ ವರದಿಯುಲ್ಲಿ ಇದರ ಬಗ್ಗೆ ಸ್ಪಷ್ಟವಾಗಿ ಉಲ್ಲೇಖ ಮಾಡಿದ್ದರೆ. ನಾನು ಮತ್ತು ಬೈರೇಗೌಡರು, ಒಂದು ಸನ್ನಿವೇಶದಲ್ಲಿ ಆಗ್ರೋ ಇಂಡಿಸ್ಟ್ರೀಸ್ ಕಾರ್ಪೋರೇಷನ್ನಿಗೆ ಹೋಗಬೇಕಾಗಿ ಬಂತು, ಒಂದು ದೊಡ್ಡ ಮಣ್ಣು ಎತ್ತುವ ಯಂತ್ರ ಇದೆ. "ಕ್ರೇಟರ್'' ಎಂದು ಮಾಡಿದ್ದಾರೆ. ಅದನ್ನು ಕೃಷಿ ಕ್ಷೇತ್ರದಲ್ಲಿ ಬಳಸುವ ಬದಲು ಯಾರೋ ಒಬ್ಬರಿಗೆ ಗುತ್ತಿಗೆದಾರರಿಗೆ ಕೊಟ್ಟಿದ್ದಾರೆ. ಅದು ಲೇಟಸ್ಟ್ ಮಾಡೆಲು ಅದು ಇವತ್ತು ಒಂದು ದಿವಸಕ್ಕೆ ಎಷ್ಟು ಗಂಟೆಗಳ ಕಾಲ ಕೆಲಸ ಮಾಡಬೇಕು, ಎಂದು ಟಾರ್ಜೆಟ್ ಏನಾದರೂ ಫಿಕ್ಸ್ ಮಾಡಿದ್ದಿರಾ? ಈ ವಿಚಾರದಲ್ಲಿ ಸಂಬಂಧಪಟ್ಟವರು ಯಾರು ಎಂಬುದನ್ನು ದಯವಿಟ್ಟು ಪರಿಶೀಲನೆ ಮಾಡಬೇಕು. ಆಗ್ರೋ ಇಂಡಿಸ್ಟ್ರೀಸ್ ಕಾರ್ಪೋರೇಷನ್‌ನವರು ಯಂತ್ರಗಳ ಉಪಯೋಗವನ್ನು ಹುಚ್ಚಾಪಟ್ಟೆ ಮಾಡುತ್ತಿದ್ದಾರೆ. ಆ ಬಗ್ಗೆ ನಿಯಂತ್ರಣ ಕೂಡ ಇವರಿಗೆ ಇಲ್ಲ. ಟಿಲ್ಲರ್ಸ್‌ಗಳನ್ನು ಕೊಡತಕ್ಕ ಸಂಧರ್ಭದಲ್ಲಿ ಹಣವನ್ನು ಅಡ್ವಾನ್ಸ್ ಮಾಡಿದ್ದಾರೆ, ದುಡ್ಡು ಇಲ್ಲ, ಟಿಲ್ಲರ್ಸ್ ಇಲ್ಲ.

4–00 P M.

ಇವೊತ್ತು ಬೆಂಗಳೂರಿನಲ್ಲಿ ಯಾವುದೋ ಕಾರ್ಖಾನೆಯಲ್ಲಿ ಪವರ್ ಟಿಲ್ಲರ್ಸ್ ಕೊಡುವ ಬಗ್ಗೆ ಸರ್ಕಾರದಿಂದ ಅಡ್ವಾನ್ಸ್ ಹಣ ಪಡೆದಿದ್ದಾರೆ, ಆದರೆ ಟಿಲ್ಲರ್ಸ್ ಇದುವರೆಗೂ ಬಂದಿಲ್ಲ. ಅದರ ಬಗ್ಗೆ ಏನು ಕ್ರಮತೆಗೆದುಕೊಂಡಿದ್ದಾರೋ ಗೊತ್ತಿಲ ಆಗ್ರೋ ಇಂಡಸ್ಟ್ರೀಸ್ ಕಾರ್ಪೋರೇಷನ್ ಅವರ ಉದ್ದೇಶ ಏನು ಇತ್ತು ಅದನ್ನು ಇವೊತ್ತಿನ ದಿವಸದವರೆಗೂ ಮಾಡಿಲ್ಲ. ಕೊಟ್ಟಂತ ಹಣವನ್ನೆಲ್ಲಾ ದುರುಪಯೋಗ ಮಾಡಿದ್ದಾರೆ. ಅದರ ಆಡಳಿತ ಹದಗೆಟ್ಟು ಹೋಗಿದೆ, ಅದನ್ನು ನೋಡತಕ್ಕವರು ಗತಿ ಇಲ್ಲದಂತಾಗಿದೆ. ಆದ್ದರಿಂದ ಅದನ್ನು ಪುನರುಜೀವನಗೊಳಿಸುವುದಕ್ಕೆ, ಆಗ್ರೋ ಇಂಡಸ್ಟ್ರೀಸ್ ಕಾರ್ಪೋರೇಷನ್ ಅವರ ಉದ್ದೇಶ ಏನು ಇತ್ತು, ಅದನ್ನು ಮಾಡಲಿಕ್ಕೆ ತಾವು ಏನಾದರೂ ಈ ಕಡೆಯಿಂದ ಒಂದು ಇಂಜೆಕ್ಷನ್ ಕೊಟ್ಟರೆ ಮಾಡಬಹುದು. ಆ ರೀತಿ ಮಾಡಬೇಕು ಎಂದು ಹೇಳಿ ಕೇಳಿಕೊಂಡು ಇಷ್ಟು ಕಾಲ ಮಾತನಾಡಲು ಅವಕಾಶ ಕೊಟ್ಟಂತ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಬಿ. ಭಾಸ್ಕರಶೆಟ್ಟಿ (ಕಾಪು).—ಮಾನ್ಯ ಅಧ್ಯಕ್ಷರೆ. ಈಗಾಗಲೇ ಈ ಸಭೆಯ ಮುಂದೆ ಮಂಡಿಸಿರುವ ಡಿಮ್ಯಾಂಡ್ ನಂಬರ್ 39. 40, 42, 45 ಮತ್ತು 46ನ್ನು ಅನುಮೋದಿಸುತ್ತಾ ಕೇವಲ ಕಡಲ ತೀರದ ಮೀನುಗಾರಿಕೆ ವಿಚಾರಕ್ಕೆ ಮಾತ್ರ ಸೀಮಿತಗೊಳಿಸಿ ಒಂದೆರಡು ಸಲಹೆಗಳನ್ನು ನಾನು ಇಲ್ಲಿ ಕೊಡಲಿಕ್ಕೆ ಇಚ್ಛಿಸುತೇನೆ. ನಮಗೆ ದೈವದತ್ತವಾಗಿ ಸುಮಾರು 300 ಕಿಲೋಮೀಟರ್ ಉದ್ದದ ಸಮುದ್ರ ಬಂದಿದೆ. ಅದೂ ಕೂಡ ಭಾಷವಾರು ಪ್ರಾಂತ್ಯ ರಚನೆಯಾದ ಮೇಲೆ ಮದ್ರಾಸ್ ಪ್ರಾಂತ್ಯದಿಂದ, ಬಾಂಬೆ ಪ್ರಾಂತ್ಯದಿಂದ ನಮ್ಮ ಕರ್ನಾಟಕ ರಾಜ್ಯಕ್ಕೆ ಬಂದಿದೆ. ಈ ಮೀನುಗಾರಿಕೆ ವಿಷಯದಲ್ಲಿ ಹೆಚ್ಚಿನ ಸಹಾಯಧನವನ್ನು ಮತ್ತೆ ತಾಂತ್ರಿಕ ತರಬೇತಿಯನ್ನು ಕೊಡಲಿಕ್ಕೆ ಆಗಿಲ್ಲ ಎಂದು ಮಾನ್ಯ ಸದಸ್ಯರಾದ ಕಾಗೋಡು ತಿಮ್ಮಪ್ಪನವರು ಹೇಳಿದರು. ಇನ್ನೂ ಮುಂದೆ ಹೋಗಿ ಮೀನುಗಾರಿಕೆ ಅಭಿವೃದ್ಧಿ ನಿಗಮ ಏನು ಕೆಲಸ ಮಾಡುತ್ತಿಲ್ಲ, ನಾವು ಭಾಸ್ಕರ ಶೆಟ್ಟಿಯವರು ಅಧ್ಯಕ್ಷರಾದ ಮೇಲೆ ಏನೋ ಆಸೆ ಇಟ್ಟುಕೊಂಡಿದ್ದೆವು, ಬಹಳ ಚುರುಕಿನಿಂದ ಜನರಿಗೆ ಅನುಕೂಲವಾಗುವ ರೀತಿಯಲ್ಲಿ ಆಗಬಹುದು ಎಂದು ಆಶೆ ಇಟ್ಟುಕೊಂಡಿದ್ದೆವು ಎಂದು ಹೇಳಿದರು.

ಶ್ರೀ ಕೋಣಂದೂರು ಲಿಂಗಪ್ಪ.—ಅಧ್ಯಕ್ಷರೇ, ಮಾನ್ಯ ಸದಸ್ಯರಾದ ಭಾಸ್ಕರಶೆಟ್ಟಿಯವರು ಸದಸ್ಯರಾಗಿ ಮಾತನಾಡುತ್ತಿದ್ದಾರೋ ಅಥವಾ ಮಾನ್ಯ ಸದಸ್ಯರಾದ ಕಾಗೋಡು ತಿಮ್ಮಪ್ಪನವರಿಗೆ ಅಧ್ಯಕ್ಷರಾಗಿ ಉತ್ತರ ಕೊಡುತ್ತಿದ್ದಾರೋ ?

ಶ್ರೀ ಬಿ. ಭಾಸ್ಕರಶೆಟ್ಟಿ.—ಸದಸ್ಯನಾಗಿಯೂ ಹೌದು, ಅಧ್ಯಕ್ಷನಾಗಿಯೂ ಹೌದು.

ಶ್ರೀ ಕೋಣಂದೂರು ಲಿಂಗಪ್ಪ.—ಅಧ್ಯಕ್ಷರೇ ಟೂರಿಸಮ್ ಡಿಪಾರ್ಟ್‌ಮೆಂಟ್ ಮೇಲೆ ಮಾತನಾಡುವಾಗ ಅಜೀಜ್ ಸೇಠ್ ಅವರು ಈ ರೀತಿ ಹೇಳುವುದಕ್ಕೆ ಹೊರಟರು. ಆದ್ದರಿಂದ ಮಾನ್ಯ ಸದಸ್ಯರಾದ ಭಾಸ್ಕರಶೆಟ್ಟಿಯವರು ಅಧ್ಯಕ್ಷರಾಗಿ ಹೇಳುವ ಆವಶ್ಯಕತೆ ಇಲ್ಲ, ಅದರ ಅಭಿವೃದ್ಧಿ ವಿಷಯ ಹೇಳಲಿ.

ಚೇರ್‌ಮನ್.—ಮಾನ್ಯ ಸದಸ್ಯರು ತಮ್ಮ ಭಾಷಣವನ್ನು ಮುಂದುವರೆಸಿ.

ಶ್ರೀ ಬಿ. ಭಾಸ್ಕರಶೆಟ್ಟಿ.—ಇವೊತ್ತು ಮುಖ್ಯಮಂತ್ರಿಗಳು ಭಾಸ್ಕರಶೆಟ್ಟಿಯವರನ್ನು ಅಧ್ಯಕ್ಷರನ್ನಾಗಿ ಮಾಡುವ ಸಂದರ್ಭದಲ್ಲಿ, ಅವರು ನಮ್ಮ ಗದ್ದುಗೆ ಭದ್ರವಾಗಿರಬೇಕು, ನಮಗೆ ಸದಸ್ಯರು ಇರಬೇಕು ಎಂದು ಮಾಡಿಲ. ನನ್ನನ್ನು ಅಧ್ಯಕ್ಷನನ್ನಾಗಿ ಮಾಡುವಂಥ ಸಂದರ್ಭದಲ್ಲಿ ಕರಾವಳಿ ವಿಚಾರದಲ್ಲಿ ತಿಳುವಳಿಕೆ ಇದೆ ಎಂದು ಮಾಡಿರುತ್ತಾರೆಯೇ ಹೊರತು ಬೇರೆ ಏನೂ ಇಲ್ಲ ಎಂದು ಹೇಳುತ್ತೇನೆ.

ಶ್ರೀ ಕೋಣಂದೂರು ಲಿಂಗಪ್ಪ.—ತಮ್ಮನ್ನು ಮಂತ್ರಿಗಳಾಗಿ ಮಾಡಬಹುದಿತ್ತಲ್ಲ.

ಶ್ರೀ ಬಿ. ಭಾಸ್ಕರಶೆಟ್ಟಿ.—ಎಲ್ಲರೂ ಮಂತ್ರಿಗಳಾದರೆ ಅಲ್ಲಿ ಕೆಲಸ ಮಾಡುವವರು ಬೇಕಾಗುತ್ತದೆ. ಮಾನ್ಯ ಸದಸ್ಯರಾದ ಕಾಗೋಡು ತಿಮ್ಮಪ್ಪನವರು ಮೀನುಗಾರಿಕೆ ವಿಚಾರದಲ್ಲಿ ಅದರಲ್ಲೂ ಕೂಡ ಈ ಮೀನುಗಾರಿಕೆ ಅಭಿವೃದ್ಧಿ ನಿಗಮ ಏನು ಇದೆ ಇದರ ವಿಚಾರದಲ್ಲಿ ಆಳವಾಗಿ ವಿಚಾರ ಮಾಡಿಲ್ಲ, ಅವರಿಗೆ ವಿಚಾರ ಗೊತ್ತಾಗಲಿಲ್ಲ ಎಂದು ಹೇಳಬೇಕಾಗುತ್ತದೆ. ಈ ಒಂದು ಕಾರ್ಪೊರೇಷನ್ 1970ನೇ ಇಸವಿಯಲ್ಲಿ ಅಂದರೆ 7 ವರ್ಷದ ಕೆಳಗೆ ಅಸ್ತಿತ್ವಕ್ಕೆ ಬಂದಿದ್ದು ಸರ್ಕಾರದವರು ಸಾಧಾರಣವಾಗಿ 3 ಕೋಟಿ ರೂಪಾಯಿ ಪಾಲಿನ ಬಂಡವಾಳ ವೆಚ್ಚದಲ್ಲಿ ಈ ಕಾರ್ಪೊರೇಷನ್ ಸ್ಥಾಪನೆ ಮಾಡಿದರು. ಇದನ್ನು ಮಾಡಿದ ಉದ್ದೇಶ ಏನು ಎಂದರೆ, ನಾವು ಯಾವುದೇ ಒಕ್ಕಣೆ ಇಲ್ಲದೇ ಕೆಲಸಕಾರ್ಯಗಳನ್ನು ಸುಲಭವಾಗಿ ಮಾಡಬಹುದು ಎಂದು ಸರ್ಕಾರದವರು ಈ ಒಂದು ಕಾರ್ಪೊರೇಷನ್ ಮಾಡಿದರು. ಈ ಕಾರ್ಪೊರೇಷನ್ ಅಸ್ತಿತ್ವಕ್ಕೆ ಬಂದ ಮೇಲೆ ಸರ್ಕಾರದವರ ಪಾಲು ಬಂಡವಾಳವಾಗಿ 24 ಲಕ್ಷದ 75 ಸಾವಿರ ರೂಪಾಯಿ ಕಾರ್ಪೊರೇಷನ್‌ಗೆ ಕೊಟ್ಟಿದ್ದಾರೆ. ಮಾನ್ಯ ಸದಸ್ಯರಾದ ಕಾಗೋಡು ತಿಮ್ಮಪ್ಪನವರು ಮಾತನಾಡುವಾಗ ಮೀನುಗಳನ್ನು ಒಯ್ಯಲಿಕ್ಕೆ ವಾಹನ ಇಲ್ಲ, ಬೇರೆ ವ್ಯವಸ್ಥೆ ಇಲ್ಲ ಎಂದು ಎಲ್ಲಾ ವಿಚಾರ ಹೇಳಿದರು. ಈಗ ಕಾರ್ಪೊರೇಷನ್ ಪ್ರಕೃತವಾಗಿ 7 ಇನ್‌ಸೊಲೇಟೆಡ್ ವ್ಯಾನ್‌ಗಳನ್ನು ಹೊಂದಿ 3 ರೆಫ್ರಿಜರೇಟರ್ ವ್ಯಾನ್‌ಗಳನ್ನು ಇಟ್ಟುಕೊಂಡಿದೆ, ಅದು ಹೊರದೇಶದಿಂದ ತರಿಸಿದಂತ ವ್ಯಾನುಗಳು, ಅದರ ಸ್ಪೇರ್ ಪಾರ್ಟ್ಸ್ ಸಿಕ್ಕದೇ ಇದ್ದು 2 ವ್ಯಾನ್‌ಗಳನ್ನು ಇನ್‌ಸೊಲೇಟೆಡ್ ವ್ಯಾನ್‌ಗಳಿಗೆ ಕನವರ್‌ಷನ್ ಮಾಡಿ ಅದನ್ನು ನಾವು ಇಟ್ಟುಕೊಂಡಿದ್ದೇವೆ. ಇನ್ನು ಗಂಗೊಲ್ಲಿ, ಉಲ್ಲಾಳ್, ಮಂಗಳೂರು, ಕಾರ್‌ವಾರ್, ಮತ್ತೊಂದು ಪ್ರದೇಶ ಸೇರಿ ಒಟ್ಟು ಐದು ಉತ್ಪಾದನಾ ಕೇಂದ್ರಗಳನ್ನು ಮಾಡಿದ್ದೇವೆ. ಮೊನ್ನೆ ನಾವು ತೆರೆದಿರುವ ಕೇಂದ್ರವನ್ನು ಸೇರಿ ರಾಜ್ಯದ 19 ಕೇಂದ್ರಗಳಲ್ಲಿ ನಾವು ಮೀನುಗಳ ಶಿಥಿಲೀಕರಣಕ್ಕೆ ಒಳಗೊಂಡಿಂತೆ ಮಾಡಿದ್ದೇವೆ. ನಾನು ಅಧ್ಯಕ್ಷನಾದ ಮೇಲೆ ಸಾಧಾರಣವಾಗಿ ಇಂತಹ 7 ಕೇಂದ್ರಗಳನ್ನು ನಾವು ಹೆಚ್ಚಿಗೆ ತೆರೆದಿದ್ದೇವೆ.

ಆದರೆ ದುರ್ದೈವದಿಂದ ಏನಾಗಿದೆ ಎಂದರೆ ಈ ಮೀನಿನ ವ್ಯಾಪಾರ ಎನ್ನುವುದು ಈ ದಿವಸ ಗ್ಯಾಂಬ್ಲಿಂಗ ಇದ್ದಹಾಗೆ, ಒಂದು ರೀತಿಯ ಜೂಜು ಇದ್ದಹಾಗೆ. ಏಕೆಂದರೆ ಈ ಮೀನು ಸಿಕ್ಕಿದರೆ ಸಿಕ್ಕಿತು, ಇಲ್ಲದಿದ್ದರೆ ಇಲ್ಲ. ಒಂದೊಂದು ಸಾರಿ ಈ ಮೀನು ರಾತ್ರಿ ಬಂದರೆ ಬಂತು, 4 ಗಂಟೆಗೆ ಬಂದರೆ ಬಂತು, ಸಾಯಂಕಾಲ ಬಂದರೆ ಬಂತು. ಆದರೆ ಯಾವಾಗ ಬರುತ್ತವೆ ಎಂದು ನಿರ್ದಿಷ್ಟವಾಗಿ ಹೇಳುವುದಕ್ಕಾಗುವುದಿಲ್ಲ. ಹೋದ ವರ್ಷ ಈ ನಮ್ಮ ಕರಾವಳಿ ತೀರದಲ್ಲಿ ಮೀನಿಗೆ ಕ್ಷಾಮ ಬಂದಿತು ಎಂದು ಮಾನ್ಯ ಶ್ರೀ ಕಾಗೋಡು ತಿಮ್ಮಪ್ಪನವರು ಹೇಳಿದರು. ಈ ಮೀನಿನ ಕ್ಷಾಮ ಬರುವುದಕ್ಕೂ, ಈ ಸಂಸ್ಥೆಯ ಅಧ್ಯಕ್ಷ ಸ್ಥಾನಕ್ಕೆ ನಾನು ಹೋಗುವುದಕ್ಕೂ ಒಂದೇ ಆಯಿತು. ಈ ಒಂದು ಕಾರಣದಿಂದಾಗಿ ನಾವು ನಮ್ಮ ರಾಜ್ಯದ ಜನರಿಗೆ ಹಸಿ ಮೀನನ್ನು ಒದಗಿಸುವ ಪ್ರಯತ್ನದಲ್ಲಿ ನಾವು ಸ್ವಲ್ಪ ಹಿಂದೆ ಬಿದ್ದಿರಬಹುದೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಈಗ ನಮ್ಮ ಬಡ ಮೀನುಗಾರರಿಗೆ ಏನಾದರೂ ಒಂದು ಅನುಕೂಲ ಮಾಡಿಕೊಡಬೇಕೆಂದು ಒಂದು ಯೋಜನೆ ಹಾಕಿ ಕೊಂಡಿದ್ದೇವೆ. ಇತ್ತೀಚೆಗೆ ರಂಪಣಿ ಬಲೆಗಳಲ್ಲಿ ಬೀಳುವ ಮೀನುಗಳನ್ನು

ನಮ್ಮ ಕಾರ್ಪೊರೇಷನ್ ಮೂಲಕ ತೆಗೆದುಕೊಂಡು ಅದನ್ನು ರಾಜ್ಯದ ಬೇರೆ ಕಡೆಗಳಿಗೆ ಸಾಗಿಸಿ ಅಲ್ಲಿನ ಜನರಿಗೆ ಒದಗಿಸುವ ಒಂದು ಉದ್ದೇಶವನ್ನು ಇಟ್ಟುಕೊಂಡಿದ್ದೇವೆ. ಈ ವರ್ಷ ಗ್ಯಾಲಿವಟ್ ನಲ್ಲಿ ಬರುವ ಎಲ್ಲ ಮೀನುಗಳನ್ನೂ ಸಂಗ್ರಹಿಸಿ ಸಂದರ್ಭ ಬಂದಾಗ ಈ ಬೆಂಗಳೂರಿಗೂ ಕೂಡ ತಂದು ಜನಗಳಿಗೆ ಹಸಿ ಮೀನುಗಳನ್ನು ಒದಗಿಸಿದ್ದೇವೆ. ಈಗ ಬೆಂಗಳೂರಿನ ಕಬ್ಬನ್ ಪಾರ್ಕನಲ್ಲಿ ನಮ್ಮ ಸ್ಟಾಲ್ ಇದೆ. ಅಲ್ಲಿ ಹಸಿ ಮೀನುಗಳನ್ನು ಮಾರುವ ಒಂದು ವ್ಯವಸ್ಥೆ ಮಾಡಿದ್ದೇವೆ. ಈಗಲೂ ಕೂಡ ಅಲ್ಲೆ ಘನೀಕರಿಸಿದ ಮೀನು ಸಿಕ್ಕುತ್ತದೆ. ಆದರೆ ಇವತ್ತು ನಮ್ಮ ಜನತೆಯಲ್ಲಿ ಎಲ್ಲಿ ಹೋದರೂ ಕೂಡ ಮೀನು ತಿನ್ನುವ ಒಂದು ಅಭ್ಯಾಸ ಕಡಿಮೆಯಾಗುತ್ತಿದೆ. ಇದರಿಂದಾಗಿ ನಾವು ಹೆಚ್ಚಿಗೆ ಮೀನುಗಳನ್ನು ಒದಗಿಸುತ್ತಿಲ್ಲ ನಮ್ಮ ಜನರಲ್ಲಿ ಮೀನಿನಿಂದ ಹೆಚ್ಚಿಗೆ ತಿಂಡಿ ಪದಾರ್ಥಗಳನ್ನು ತಯಾರು ಮಾಡುವ ಒಂದು ವಿಧಾನ ಗೊತ್ತಿಲ್ಲ. ಇವರು ಕೇವಲ ಒಂದೆರಡು ತಿಂಡಿ ಪದಾರ್ಥಗಳನ್ನು ಮಾತ್ರ ತಯಾರು ಮಾಡುತ್ತಾರೆ. ಅದು ಯಾವುದೆಂದರೆ ಮೀನು ಕರಿ, ಮತ್ತು ಮೀನು ಫ್ರೈ ಇದನ್ನು ಬಿಟ್ಟು ಬೇರೆ ತಿಂಡಿ ಪದಾರ್ಥಗಳನ್ನು ಮಾಡುವುದಕ್ಕೆ ಬರುವುದಿಲ್ಲ ಆದರೆ ಅದೇ ಜಪಾನ್, ಯೂರೋಪ್ ಮುಂತಾದ ಹೊರದೇಶಗಳಲ್ಲಿ ಈ ಮೀನಿನಿಂದ ಸುಮಾರು 200 ಬಗೆಯ ವಿವಿಧ ತಿಂಡಿ ಪದಾರ್ಥಗಳನ್ನು ತಯಾರು ಮಾಡುತ್ತಾರೆ. ಹೊರದೇಶಗಳಲ್ಲಿ ಮೀನನ್ನು ಹೆಚ್ಚಿನ ರೀತಿಯಲ್ಲಿ ಉಪಯೋಗ ಮಾಡುತ್ತಾರೆ. ಉದಾಹರಣೆಗೆ ಹೇಳುವುದಾದರೆ ಜಪಾನ್‌ನಲ್ಲಿ ತಲಾ 25 ಕೆ ಜಿ ಯಷ್ಟು ಉಪಯೋಗ ಮಾಡಿದರೆ ನಮ್ಮ ರಾಜ್ಯದಲ್ಲಿ ತಲಾ 2 ಕೆ. ಜಿ. ಯಷ್ಟು ಉಪಯೋಗ ಮಾಡುತ್ತಾರೆ. ಅದೇ ಯೂರೋಪ್‌ನಲ್ಲಿ ತಲಾ 20 ಕೆ ಜಿ. ಯಷ್ಟು ಮೀನನ್ನು ಉಪಯೋಗ ಮಾಡುತ್ತಾರೆ. ನಮ್ಮ ಜನರಲ್ಲಿ ಈ ಮೀನು ತಿನ್ನುವ ಅಭ್ಯಾಸ ಬೆಳೆದು ಬಂದಿಲ್ಲವಾದ್ದರಿಂದ ಆದಷ್ಟೂ ಹೆಚ್ಚು ಹೆಚ್ಚಾಗಿ ಮೀನೂ ತಿನ್ನುವುದನ್ನು ರೂಢಿ ಮಾಡಿಕೊಳ್ಳಬೇಕು.

ಶ್ರೀ ಕಾಗೋಡು ತಿಮ್ಮಪ್ಪ.—ಸ್ವಾಮಿ, ನಮ್ಮ ರಾಜ್ಯದಲ್ಲಿ ಮೀನು ತಿನ್ನುವವರ ಸಂಖ್ಯೆ ಕಡಿಮೆ ಇದೆ ಎಂದು ತಾವು ಹೇಳುವುದನ್ನು ನಾನು ಒಪ್ಪಿಕೊಳ್ಳುವುದಿಲ್ಲ. ಕರಾವಳಿ ಪ್ರದೇಶದಲ್ಲಿ ನಿಮ್ಮ ಘಟ್ಟ ಹತ್ತಿ ಮೇಲಕ್ಕೆ ಎಲ್ಲ ಹೋಗುತ್ತದೆ. ಮೀನುಗಳು ಸಿಕ್ಕದೇ ಇರುವುದರಿಂದ ಅದನ್ನು ತಿನ್ನುತ್ತಿಲ್ಲ.

ಶ್ರೀ ಬಿ. ಭಾಸ್ಕರಶೆಟ್ಟಿ.—ಮಾನ್ಯ ಕಾಗೋಡು ತಿಮ್ಮಪ್ಪನವರಿಗೆ ಹಸಿ ಮೀನಿನ ರುಚಿ ಅಷ್ಟಾಗಿ ಗೊತ್ತಿಲ್ಲವೆಂದು ಹೇಳಬಹುದು. ಈ ಹಸಿ ಮೀನಿನ ರುಚಿ ಸಿಕ್ಕಬೇಕಾದರೆ ಅದನ್ನು ಹಿಡಿದ 24 ಗಂಟೆಗಳೊಳಗಾಗಿ ಉಪಯೋಗ ಮಾಡಬೇಕು. ಇದಕ್ಕೋಸ್ಕರ ಎಷ್ಟು ಖರ್ಚಾದರೂ ಚಿಂತೆಯಿಲ್ಲ ಹಸಿ ಮೀನನ್ನು ಒದಗಿಸಬೇಕೆಂದು ಕೇಳಿದರೆ, ನಾವು ಒದಗಿಸುತ್ತೇವೆ.

ಶ್ರೀ ಬಿ. ವಿ. ಕಕ್ಕಿಲಾಯ.—ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ನಮ್ಮ ರಾಜ್ಯದ ಜನಗಳಿಗೆ ಮೀನಿನಿಂದ ಬಗೆಬಗೆಯ ತಿಂಡಿ ಪದಾರ್ಥಗಳನ್ನು ತಯಾರು ಮಾಡುವುದಕ್ಕೆ ಬರುವುದಿಲ್ಲ ಎಂದು ಹೇಳಿದರು. ಆದರೆ ಅದು ಸರಿಯಲ್ಲ. ಏಕೆಂದರೆ ಇತ್ತೀಚೆಗೆ ನಮ್ಮ ರಾಜ್ಯದ ಫಿಷರೀಸ್ ಕಾಲೇಜ್‌ನವರು ಇದರ ಬಗ್ಗೆ ಸಂಶೋಧನೆ ನಡೆಸಿ ಅನೇಕ ರೀತಿಯ ತಿಂಡಿ ಪದಾರ್ಥಗಳನ್ನು ತಯಾರಿಸಬಹುದೆಂಬುದನ್ನು ಕಂಡುಹಿಡಿದಿದ್ದಾರೆ. ಆದರೆ ಇದನ್ನು ಪ್ರಚಾರ ಮಾಡುವುದಕ್ಕೆ ತಕ್ಕ ಕ್ರಮ ತೆಗೆದುಕೊಂಡಿಲ್ಲ.

ಶ್ರೀ ಬಿ. ಭಾಸ್ಕರ ಶೆಟ್ಟಿ.—ಈ ಹಸಿ ಮೀನನ್ನು ಹಿಡಿದ 24 ಗಂಟೆಗಳೊಳಗೆ ಉಪಯೋಗ ಮಾಡಬೇಕು, ಹಾಗೆ ಮಾಡದೇ ಹೋದರೆ ಅನಂತರ ಅವು ಪ್ರಯೋಜನಕ್ಕೆ ಬರುವುದಿಲ್ಲ. ಈ ಘನೀಕರಿಸಿದ ಮೀನನ್ನು ಕೆಲವು ದಿವಸದವರೆಗೆ ಇಡಬಹುದು. ಈಗ ನಾವು ರಾಜ್ಯದಲ್ಲಿ ಹೆಚ್ಚು ಕಡೆಗಳಿಗೆ ಘನೀಕರಿಸಿದ ಮೀನನ್ನು ಒದಗಿಸುತ್ತಿದ್ದೇವೆ ಹಸಿ ಮೀನು ಬಹಳ ರುಚಿ ಇರುತ್ತದೆ. ಇದನ್ನು ಎಲ್ಲರೂ ಉಪಯೋಗಿಸಬೇಕು. ಆದರೆ ರಾಜ್ಯದ ಎಲ್ಲ ಕಡೆಗೂ ಈ ಹಸಿ ಮೀನನ್ನು ಒದಗಿಸುವುದಕ್ಕೆ ಸಾಧ್ಯವಾಗುವುದಿಲ್ಲ ಎಂಬುದನ್ನು ಹೇಳಬಯಸುತ್ತೇನೆ. ಏಕೆಂದರೆ, ಈ ಮೀನು ಯಾವಾಗ ಬರುತ್ತವೆ ಯಾವಾಗ ಹೋಗುತ್ತವೆ ಎಂದು ಹೇಳುವುದಕ್ಕಾಗುವುದಿಲ್ಲ. ಆದುದರಿಂದ ಸಿಕ್ಕಿದ ಹಸಿ ಮೀನನ್ನು ಹಾಳು ಮಾಡದೆ ಉಪಯೋಗ ಮಾಡುವುದನ್ನು ಕಲಿಯಬೇಕು.

ಇನ್ನು ನಮ್ಮ ಮಾನ್ಯ ಸ್ನೇಹಿತರಾದ ಶ್ರೀಮಾನ್ ಕಕ್ಕಿಲಾಯ ಅವರು ಈ ಮೀನಿನಿಂದ ಬೇರೆ ಬೇರೆ ರೀತಿಯ ತಿಂಡಿ ಪದಾರ್ಥಗಳನ್ನು ತಯಾರು ಮಾಡುವುದನ್ನು ಫಿಷರೀಸ್ ಕಾಲೇಜಿನವರು ಕಂಡುಹಿಡಿದಿದ್ದಾರೆ ಎಂದು ಹೇಳಿದರು. ಇದನ್ನು ನಾನು ಒಪ್ಪುತ್ತೇನೆ. ಅದೇರೀತಿ ನಮ್ಮ ಕಾರ್ಪೊರೇಷನ್‌ನವರೂ ಕೂಡ ಈ ಮೀನಿನಿಂದ 10 12 ರೀತಿಯ ತಿಂಡಿಪದಾರ್ಥಗಳನ್ನು ತಯಾರು ಮಾಡುವ ಒಂದು ಕಾರ್ಯಕ್ರಮವನ್ನು ಇಟ್ಟುಕೊಂಡಿದ್ದೇವೆ. ಮಾನ್ಯ ಕಾಗೋಡು ತಿಮ್ಮಪ್ಪನವರು ಯಾವಾಗಲು ಕಬ್ಬನ್ ಪಾರ್ಕ್‌ನಲ್ಲಿರುವ ನಮ್ಮ ಸ್ಟಾಲಿಗೆ ಹೋಗಿಲ್ಲವೆಂದು ಕಾಣುತ್ತದೆ. ಅಲ್ಲಿ ಕೂಡ ಫ್ರೋಜನ್ ಫಿಷ್, ಫ್ರೆಷ್ ಫಿಷ್ ಎಲ್ಲಾ ಸಿಕ್ಕುತ್ತದೆ

ಇಷ್ಟೇ ಅಲ್ಲದೆ ಈ ಮೀನನ್ನು ವ್ಯಾಪಾರ ಮಾಡುವಾಗ, ಮತ್ತು ಜನರಿಗೆ ಅದನ್ನು ಒದಗಿಸುವಾಗ ಇನ್ನೊಂದು ಅಡ್ಡಿ ಆಂತಕ ಇದೆ. ಅದು ಏನೆಂದರೆ ಕೆಲವರು ಮೀನು ವ್ಯಾಪಾರ ಮಾಡುವವರು, ಮೀನು ಹಿಡಿಯುವವರಿಗೆ ಮುಂಚಿತವಾಗಿ ದುಡ್ಡನ್ನು ಅಡ್ವಾನ್ಸ್ ಆಗಿ ಕೊಟ್ಟು ಬಿಟ್ಟು ಕೊಂಡಿರುತ್ತಾರೆ. ಆ ಜನಗಳು ಅವರಿಗೇ ಹಿಡಿದು ತಂದು ಕೊಡುತ್ತಾರೆ. ಈ ಸೀಜನ್‌ನಲ್ಲಿ ಅವರಿಗೆ ಕೊಡುವ ಹಣ ನಮ್ಮ ಸರ್ಕಾರದ್ದು. ನಮ್ಮ ಇಡಿ ಕರಾವಳಿಯಲ್ಲಿ ರಂಪಾಣಿಯವರಿಗೆ, ಅಥವಾ ಬೇರೆಯವರಿಗೆ ದುಡ್ಡು ಕೊಟ್ಟು ಮೀನು ತೆಗೆದುಕೊಳ್ಳುವ ಪರಿಸ್ಥಿತಿ ಇರುವುದಿಲ್ಲ. ನಮ್ಮ ಕಾರ್ಪೊರೇಷನ್‌ನ ಆರ್ಥಿಕ ವ್ಯವಸ್ಥೆ ಹೊಂದಾಣಿಕೆ ಸರಿಯಾಗಿರುವುದಿಲ್ಲ. ಇದರಿಂದ ಕೂಡ ನಮಗೆ ಕಷ್ಟವಾಗಿದೆ. ಈ ರಂಪಾಣಿಯವರೂ ಕೂಡ ಯಾರು ಹೆಚ್ಚು ದುಡ್ಡು ಕೊಡುತ್ತಾರೆ ಅಂಥವರಿಗೆ ಹಸಿ ಮೀನು ತಂದು ಕೊಡುತ್ತಾರೆ. ಇದು ಪರಂಪರಾನುಗತವಾಗಿ ನಡೆದುಕೊಂಡು ಬಂದಿರುವ ವ್ಯಾಪಾರ ಪರಿಸ್ಥಿತಿ ಹೀಗಿರುವುದರಿಂದ ನಾವು ಅಂದರೆ ಕಾರ್ಪೊರೇಷನ್‌ನವರು ಅಥವಾ ಸರ್ಕಾರದವರು ಈ ಮೀನು ಹಿಡಿಯುವವರಿಗೆ ಹೆಚ್ಚಿಗೆ ದುಡ್ಡು ಕೊಟ್ಟು ಮೀನು ತೆಗೆದುಕೊಂಡು ಪ್ರೈವೇಟ್‌ನವರೊಂದಿಗೆ ಕಾಂಪಿಟಿ ಮಾಡುವುದೂ ಕೂಡ ಬಹಳಷ್ಟು ಕಷ್ಟವಾಗುತ್ತದೆಂದು ಹೇಳ ಬಯಸುತ್ತೇನೆ. ಇಂಥ ಒಂದು ವ್ಯವಹಾರ ಒಂದು ಮಟ್ಟಕ್ಕೆ ಬರುವವರೆಗೆ ಸರ್ಕಾರದವರು ಸಬ್ಸಿಡಿ ರೂಪದಲ್ಲಿ ಹೆಚ್ಚಿಗೆ ಹಣವನ್ನು ಒದಗಿಸಿದರೆ ಮಾತ್ರ ಸಾಧ್ಯವಾಗುತ್ತದೆ. ಇಲ್ಲದೇ ಹೋದರೆ ಈಗಿರುವ ನಮ್ಮ ಕಾರ್ಪೊರೇಷನ್‌ನಿನ ಆರ್ಥಿಕ ಪರಿಸ್ಥಿತಿಯಲ್ಲಿ ಈ ಮೀನಿನ ವ್ಯಾಪಾರ ಮಾಡುವುದಕ್ಕೆ ಸಾಧ್ಯವಿಲ್ಲವೆಂದು ಹೇಳಬಯಸುತ್ತೇನೆ. ಇದರ ಜೊತೆಗೆ 78ನೇ ಸಾಲಿಗೆ 4 ಕೋಟಿ 26 ಲಕ್ಷ ರೂಪಾಯಿಗಳನ್ನು ಮಂಜೂರು ಮಾಡಿ ಮಲ್ಪೆ ಬಂದರನ್ನು ಪೂರ್ತಿಗೊಳಿಸಿಕೊಟ್ಟರೆ ಇನ್ನೂ ಬಹಳ ಅನುಕೂಲವಾಗುತ್ತದೆ. ಈ ಮೀನುಗಾರಿಕೆಗೆ ಸಂಬಂಧಪಟ್ಟಂತಿರುವ ಕೆಲವು ಕಾರ್ಯಕ್ರಮಗಳನ್ನು ನಾವೇ ಮಾಡಿಕೊಂಡು ಹೋಗಬೇಕೆಂದು ಕೆಲವು ಯೋಜನೆಗಳನ್ನೂ ಕೂಡ ಇಟ್ಟುಕೊಂಡಿದ್ದೇವೆ. ಇದಕ್ಕೆ ಸುಮಾರು 30-35 ಲಕ್ಷ ರೂಪಾಯಿಗಳು ಬೇಕಾಗುತ್ತದೆ.

ಒಟ್ಟಾರೆ ಕಾರ್ಪೊರೇಷನ್‌ನಿನ ದುಡ್ಡಿನ ವ್ಯವಸ್ಥೆ ಸರಿಯಾಗಿದ್ದರೆ ಹಸಿಮೀನನ್ನಾಗಲಿ, ಫ್ರೋಸೆಸ್ಡ್ ಫಿಷ್ ಆಗಲಿ ಬೇರೆ ಯಾವ ಮೀನನ್ನೇ ಆಗಲಿ ನಾವು ಒದಗಿಸುವ ಕಾರ್ಯಕ್ರಮ ಮಾಡುತ್ತೇವೆ. ಈ ವಿಚಾರದಲ್ಲಿ ಖಂಡಿತವಾಗಿಯೂ ಹಿಂದೆ ಬೀಳುವುದಿಲ್ಲ. ಶ್ರೀಮಾನ್ ತಿಮ್ಮಪ್ಪನವರು ಹೇಳುತ್ತಾರೆ, ಆರ್ಥಿಕ ಪರಿಸ್ಥಿತಿ ಸುಧಾರಿಸಲು ಅವರೊಬ್ಬರೇ ಕಾರ್ಪೊರೇಷನ್‌ನಲ್ಲಿ ಕೆಲಸ ಮಾಡುತ್ತಿಲ್ಲ ಎನ್ನುವ ವಿಚಾರವಷ್ಟು ಮಾತ್ರ ಹೇಳಿದರೇ ವಿನಃ ಅದರ ಸ್ಥಿತಿಗತಿ ಏನು, ಕಾರ್ಪೊರೇಷನ್ ಯಾವ ಮಟ್ಟದಲ್ಲಿ ಇದೆ ಎನ್ನುವುದರ ಬಗ್ಗೆ ಪ್ರಸ್ತಾಪಮಾಡಲಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ —ಇದುವರೆಗೆ ಎಷ್ಟು ಲುಕ್ಸಾನಾಗಿರುತ್ತದೆ ?

ಶ್ರೀ ಬಿ. ಬಾಸ್ಕರ ಶೆಟ್ಟಿ.— ಮಹಾರಾಷ್ಟ್ರ ಕಾರ್ಪೊರೇಷನ್ ತೆಗೆದುಕೊಂಡು ನೋಡಿ, ಕೇರಳ ಕಾರ್ಪೊರೇಷನ್ ತೆಗೆದುಕೊಂಡು ನೋಡಿ, ಅವುಗಳ ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ಪ್ರಥಮ ಹಂತದಲ್ಲಿಯೇ 10–12 ಲಕ್ಷ ರೂಪಾಯಿಗಳಷ್ಟು ಲುಕ್ಸಾನಾಗಿರುವುದು ಕಂಡುಬರುತ್ತದೆ. ಇದು ಒಂದು ಗ್ಯಾಮಲಿಂಗ್ ವ್ಯವಹಾರವಿದ್ದಂತೆ. ಬೆಂಗಳೂರಿಗೆ ತಂದಂಥ ಮೀನುಗಳನ್ನು ಒಂದೇ ದಿವಸದಲ್ಲಿ ಮಾರಾಟಮಾಡುತ್ತೇವೆಂದು ಹೇಳುವುದಕ್ಕಾಗುವುದಿಲ್ಲ. ಬೇರೆ ಪದಾರ್ಥಗಳನ್ನು ತಿಂಗಳು ಗಟ್ಟಲೇ ಇಟ್ಟಂತೆ ಇದನ್ನು ಇಡಲು ಬರುವುದಿಲ್ಲ. ಇದನ್ನು ಕೂಡಲೇ ಮಾರಾಟಮಾಡಬೇಕು. ಇಂಥ ಒಂದು ಪರಿಸ್ಥಿತಿ ಇರುವುದರಿಂದ ಹಸಿ ಮೀನಿನ ವ್ಯಾಪಾರವನ್ನು ಹೆಚ್ಚಿಗೆ ಮಾಡಲಿಕ್ಕೆ ಸಾಧ್ಯವಾಗಲಿಲ್ಲ. ಶ್ರೀಮಾನ್ ಕಾಗೋಡು ತಿಮ್ಮಪ್ಪನವರಿಗೆ ತಿಳಿಸಲಿಕ್ಕೆ ಇಚ್ಛೆ

ಪಡುತ್ತೇನೆ. ನಮ್ಮ ಉತ್ತರ ಕನ್ನಡ ಜಿಲ್ಲೆ ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮೀನಿನ ಬೆಲೆ ಏನು ಇದೆ ಎನ್ನುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಆದ್ದರಿಂದ ಸರ್ಕಾರ ಈ ಒಂದು ಪರಿಸ್ಥಿತಿಯನ್ನು ನೋಡಿ ಅವರಿಗೆ 250 ರೂಪಾಯಿಗಳಷ್ಟು ಸಾಲವನ್ನು ಒಂದು ಕುಟುಂಬಕ್ಕೆ ಒದಗಿಸಿದೆ. ಈರೀತಿ ಒಂದು ಕುಟುಂಬಕ್ಕೆ 250 ರೂಪಾಯಿಗಳನ್ನು ಕೊಟ್ಟಿರುವುದು ಸಾಲದಾಗಿರುತ್ತದೆ. ಆದ್ದರಿಂದ ಇದನ್ನು 500 ರೂಪಾಯಿಗಳಿಗೆ ಏರಿಸಬೇಕೆಂದು ಒಂದು ಮನವಿಯನ್ನು ಮಾನ್ಯ ಮಂತ್ರಿಗಳಿಗೂ, ಮತ್ತು ಮುಖ್ಯ ಮಂತ್ರಿಯವರಿಗೂ ಸಲ್ಲಿಸಿದ್ದಾರೆ. ಅವರುಗಳ ಪರಿಸ್ಥಿತಿಯನ್ನು ನೋಡಿದರೆ ಒಂದು ಹೊತ್ತು ಊಟಕ್ಕೂ ಕೂಡ ಇಲ್ಲದೆ ತೊಂದರೆಯನ್ನು ಪಡುತ್ತಿದ್ದಾರೆ. ಹೀಗಿರುವಾಗ ಮಾನ್ಯ ಮಂತ್ರಿಗಳು ಇಲ್ಲಿಯೇ ಇದ್ದಾರೆ. ಅವರ ಮೇಲೆ ಕರುಣೆ ತೋರಿ 250 ರೂಪಾಯಿಗಳನ್ನು ಈಗ ಏನು ಕೊಡುತ್ತಿದ್ದಾರೆ ಅದನ್ನು ಇನ್ನೂ ಸ್ವಲ್ಪ ಹೆಚ್ಚಿಸಿ ನಗದಾಗಿ ಕೊಡುವ ವ್ಯವಸ್ಥೆಯನ್ನು ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ.—ಈ ದುಡ್ಡನ್ನು ಯಾವಾಗ ಬಂದು ಕೊಟ್ಟರು ?

ಶ್ರೀ ಬಿ. ಬಾಸ್ಕರಶೆಟ್ಟಿ.—ಎಲೆಕ್ಷನ್ ಮುಂಚಿತವಾಗಿಯೇ ಕೊಟ್ಟಿರುತ್ತಾರೆ. ಮಳೆಗಾಲ ಪ್ರಾರಂಭವಾಗುತ್ತಿದೆ, ಬಹಳಷ್ಟು ಜನರು ಕಷ್ಟದಲ್ಲಿ ಸಿಲುಕಿ ಪರಿತಪಿಸುತ್ತಿದ್ದಾರೆ ಈ ಸಂದರ್ಭದಲ್ಲಿ ಅವರ ಕಷ್ಟಪರಿಸ್ಥಿತಿಯಲ್ಲಿ ಸಹಾಯಕರಾಗಬೇಕೆಂದು ತಮ್ಮನ್ನು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ.—ಬೇಗ ಎಲೆಕ್ಷನ್ ಮಾಡಿ.

ಶ್ರೀ ಬಿ. ಬಾಸ್ಕರಶೆಟ್ಟಿ.—ತಾವು 250 ರೂಪಾಯಿಯನ್ನು ಕೊಡುತ್ತಿರುವುದು ಜಾಸ್ತಿ ಕೊಡಲು ಒತ್ತಾಯ ಮಾಡಿದರೆ ಆಗಬಹುದು. ಶ್ರೀಮಾನ್ ತಿಮ್ಮಪ್ಪನವರು ಕಾರ್ಪೊರೇಷನ್ ವಿಚಾರದಲ್ಲಿ ಸ್ವಲ್ಪ ದೀರ್ಘವಾಗಿ ಮಾತನಾಡಿದ್ದಾರೆ. ನಮ್ಮ ಮಾನ್ಯ ಮಂತ್ರಿಗಳು ಉಪಸ್ಥಿತರಿದ್ದಾರೆಂದು ಹೇಳುವ ಮಾತಲ್ಲ. ಅವರು ಮೀನಿನ ವ್ಯವಸಾಯದಲ್ಲಿ ಬಹಳಷ್ಟು ಪ್ರಗತಿಯನ್ನು ಸಾಧಿಸಿದ್ದಾರೆ. ಅದರಲ್ಲೂ ನಮ್ಮ ಕರಾವಳಿ ಪ್ರದೇಶವನ್ನು ನೋಡಿದರೆ ಬಿಜಾಪುರ, ಬೆಳಗಾವ್ ಪ್ರದೇಶಗಳಿಗೆ ಕೋಟ್ಯಾಂತರ ರೂಪಾಯಿಗಳನ್ನು ಖರ್ಚುಮಾಡಿದ್ದಾರೆ. ಆದರೆ ನಮಗೆ ದೈವದತ್ತವಾಗಿ ಬಂದಿರುವ ಈ ಸಂಪತ್ತಿಗೆ ಮಾನ್ಯ ಮಂತ್ರಿಗಳು ಇತ್ತಕಡೆ ಹೆಚ್ಚಿನ ಪ್ರಾಮುಖ್ಯತೆಯನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಈಗ ಪಡು ಕರಾವಳಿಯಲ್ಲಿ 1500 ಯಾಂತ್ರಿಕೃತ ದೋಣಿಗಳು 140 ರಂಪಣಿ ಬಲೆಗಳು ಇನ್ನೂ ಇತರೆ ಬಲೆಗಳು ಮೀನು ಹಿಡಿಯುವ ಕೆಲಸದಲ್ಲಿ ತೊಡಗಿವೆ. ಬೇರೆ ಪ್ರಾಂತ್ಯಗಳಿಗೆ ಹೋಲಿಸಿ ನೋಡಿದರೆ ನಮ್ಮ ಪ್ರಾಂತ್ಯದಲ್ಲಿ ಈ ಒಂದು ಯಾಂತ್ರಿಕೃತ ದೋಣಿಗಳಿಂದ ಸಾಧಿಸಿರುವ ಪ್ರಗತಿ ಬೇರೆ ಎಲ್ಲೂ ನಡೆದಿಲ್ಲವೆಂದು ಈ ಸಂದರ್ಭದಲ್ಲಿ ಗಂಟಾಘೋಷವಾಗಿ ಹೇಳುತ್ತೇನೆ. ಮಲ್ಪೆ ಹೊನ್ನಾವರದಲ್ಲಿ 50 ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಬಂದರುಗಳು ನಿರ್ಮಾಣವಾಗತಕ್ಕಂಥ ಕೆಲಸ ನಡೆದಿದೆ ಸಂಬಂಧಪಟ್ಟ ಮಂತ್ರಿಗಳು ಮೀನುಗಾರಿಕೆ ಬಂದರುಗಳನ್ನು ಆದಷ್ಟು ಜಾಗ್ರತೆ ಪೂರ್ತಿಗೊಳಿಸಿ, ಮೀನಿನ ವ್ಯವಸಾಯದಲ್ಲಿ ಪ್ರಗತಿಯನ್ನು ಸಾಧಿಸಲು ಅನುಕೂಲಮಾಡಕೊಡಬೇಕೆಂದು ಹೇಳುತ್ತೇನೆ. ಬೆಳಗಾವ್ ಬಿಜಾಪುರಗಳಿಗೆ ಹೆಚ್ಚಿನ ಹಣವನ್ನು ಫಿಷರೀಸ್‌ಗೆ ಖರ್ಚು ಮಾಡುತ್ತಿರುವ ವಿಷಯ ನನಗೆ ತಿಳಿದುಬಂದಿರುತ್ತದೆ. ಅದರಂತೆ ನಮಗೆ ದೈವದತ್ತವಾಗಿ ಬಂದಿರುವ ಮೀನುಗಾರಿಕೆಯ ಬಗ್ಗೆ ಹೆಚ್ಚಿನ ಮುತುವರ್ಜಿಯನ್ನು ವಹಿಸಬೇಕೆಂದು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ನಮ್ಮ ಮೀನುಗಾರಿಕೆಯಿಂದ ವರ್ಷಕ್ಕೆ 10 ಕೋಟಿ ರೂಪಾಯಿಗಳನ್ನು ವಿದೇಶಿ ವಿನಿಮಯದಿಂದ ಗಳಿಸುತ್ತಿದ್ದೇವೆ. ಇದನ್ನು ವರ್ಷಕ್ಕೆ 20 ಕೋಟಿ ರೂಪಾಯಿಗಳನ್ನು ವಿದೇಶಿ ವಿನಿಮಯವನ್ನು ಗಳಿಸುವ ಒಂದು ವ್ಯವಸ್ಥೆಯನ್ನು ಮಾಡಿ ಪಡುಕರಾವಳಿಯಲ್ಲಿ ಮೀನಿನ ವ್ಯವಸಾಯಕ್ಕೆ ಹೆಚ್ಚು ಖರ್ಚನ್ನು ಮಾಡಬೇಕೆಂದು ಈ ಸಂದರ್ಭದಲ್ಲಿ ಕಳಕಳಿಯಿಂದ ಒತ್ತಾಯ ಮಾಡುತ್ತೇನೆ.

ಇನ್ನು ಕಾರ್ಪೊರೇಷನ್ ವಿಚಾರದಲ್ಲಿಯೂ ಕೂಡ ಮಾನ್ಯ ಮಂತ್ರಿಗಳನ್ನು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಶ್ರೀಮಾನ್ ತಿಮ್ಮಪ್ಪನವರು ಹೇಳಿದ ರೀತಿಯಲ್ಲಿ ಕಾರ್ಪೊರೇಷನ್ ಒಳ್ಳೆಯ ರೀತಿಯಲ್ಲಿ ವ್ಯವಹಾರ ಮಾಡಬೇಕಾಗಿರುತ್ತದೆ. ಆದ್ದರಿಂದ ಸರ್ಕಾರದ ವತಿಯಿಂದ ಇದಕ್ಕೆ ಹಚ್ಚಿನ ಬಂಡವಾಳ ಮತ್ತು ಅಭಿವೃದ್ಧಿ ಕೆಲಸಗಳಿಗೆ ಸಬ್‌ಸಿಡಿ ಒದಗಿಸಿಕೊಡಬೇಕೆಂದು ಕಂಡಿತ

ವಾಗಿಯೂ ಹೇಳುತ್ತೇನೆ, ಈ ರೀತಿ ಸಬ್‌ಸಿಡಿಯನ್ನು ಕಾರ್ಪೊರೇಷನ್‌ಗೆ ಒದಗಿಸಿಕೊಟ್ಟರೆ ಬರುವ ವರ್ಷಗಳಲ್ಲಿ ಚೆನ್ನಾಗಿ ಕೆಲಸಮಾಡಲು ಪ್ರಯತ್ನ ಮಾಡುತ್ತದೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛಿಪಡುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ.—ಚೆನ್ನಾಗಿ ಕೆಲಸ ಮಾಡಿರುವುದರಿಂದಲೇ ಅಪ್‌ಗ್ರೇಡ್ ಮಾಡಿರುವುದು.

ಶ್ರೀ ಬಿ. ಬಾಸ್ಕರಶೆಟ್ಟಿ.—ಯಾವುದನ್ನು ಅಪ್‌ಗ್ರೇಡ್ ಮಾಡಿರುವುದು ?

ಶ್ರೀ ಎಚ್. ಡಿ. ದೇವೇಗೌಡ.—ಮಂತ್ರಿಯವರನ್ನು.

ಶ್ರೀ ಬಿ. ಬಾಸ್ಕರಶೆಟ್ಟಿ.—ಚೆನ್ನಾಗಿ ಕೆಲಸ ಮಾಡಿದ್ದಾರೆಂದು ಅಪ್‌ಗ್ರೇಡ್ ಮಾಡಬೇಕಾಗಿಲ್ಲ. ಸ್ವಾಮಿ ನಮ್ಮ ಬೇಂದ್ರೆಯಲ್ಲಿ ಪೋರ್ಟ್ ಟ್ರಸ್ಟ್‌ಗೆ ಸೇರಿದಂತೆ 5-6 ಎಕರೆ ಜಾಗವಿರುತ್ತದೆ. ಆದರಲ್ಲಿ ಮೀನುಗಾರಿಕೆ ಮಾಡತಕ್ಕಂಥ ಜನ ತಲತಲಾಂತರದಿಂದ ವಾಸವಾಗಿರುತ್ತಾರೆ. ಪೋರ್ಟ್ ಟ್ರಸ್ಟ್ ಆ ಜಾಗವನ್ನು ತನ್ನ ಸ್ವಾಧೀನಕ್ಕೆ ತೆಗೆದುಕೊಳ್ಳುತ್ತದೆಂಬ ಸುದ್ದಿಯು ತಿಳಿದುಬಂದಿರುತ್ತದೆ. ಆದರೆ ಇದು ಸರ್ವಥಾ ನ್ಯಾಯವಲ್ಲವೆಂದು ಹೇಳುತ್ತೇನೆ. ಆರೀತಿ ಬಿಡಿಸುವುದಿದ್ದರೆ ಅವರಿಗೆ ಬೇರೆ ಕಡೆ ವ್ಯವಸ್ಥೆಯನ್ನು ಮಾಡಿ ಐದು, ಐದು ಸೆಂಟ್ಸ್ ಸ್ಥಳವನ್ನು ಕೊಟ್ಟು ಅವರಿಗೆ ರಕ್ಷಣೆ ಕೊಡಬೇಕೆಂದು ಒತ್ತಾಯ ಮಾಡುತ್ತೇನೆ.

ತಮ್ಮ ತೋಟಗಾರಿಕೆ ಇಲಾಖೆಗೆ ಸೇರಿದಂತೆ "ಇಂಡೋ ಬೆಲ್ಜೇರಿಯೂ ಸ್ಕೀಮ್" ಏನಿದೆ ಈ ಒಂದು ಸ್ಕೀಮನ್ನು ಬೆಂಗಳೂರಿನಲ್ಲಿಯೇ ಮಾಡದೇ, ನಮ್ಮ ಜಿಲ್ಲೆಗೂ ವಿಸ್ತರಣೆ ಮಾಡಬೇಕೆಂದು ಹೇಳುತ್ತೇನೆ ಕಾರ್ಕಳದಲ್ಲಾಗಲೀ, ಮಂಗಳೂರಿನಲ್ಲಾಗಲೀ ಇದನ್ನು ಮಾಡಬೇಕು. ಏಕೆಂದರೆ ನಮ್ಮಲ್ಲಿ ಅನಾನಸ್ ಹಣ್ಣನ್ನು ಹೆಚ್ಚಾಗಿ ಬೆಳೆಯುತ್ತಾರೆ. ಇದನ್ನು ಬೊಂಬಾಯಿ ಮತ್ತು ಇನ್ನಿತರ ಕಡೆಗಳಿಗೆ ಕಳಿಸುವಂಥ ವ್ಯವಸ್ಥೆ ಇದೆ. ಈ ಒಂದು ಸ್ಕೀಮನ್ನು ಇಲ್ಲಿ ಮಾಡದಿದ್ದರೆ ಅವೆಲ್ಲಾ ಕೊಳೆತು ಹೋಗುವ ಪರಿಸ್ಥಿತಿ ಬರುತ್ತದೆ. ಮತ್ತೆ ಇಲ್ಲಿ ಒಂದು ಫ್ರೂಟ್ ಪ್ರೊಸೆಸಿಂಗ್ ಸೆಂಟರನ್ನು ತೆರೆಯಬೇಕೆಂದು ನಾನು ತಮ್ಮಲ್ಲಿ ಒತ್ತಾಯಪೂರ್ವಕವಾಗಿ ಕೇಳಿಕೊಳ್ಳುತ್ತೇನೆ.

4-30 P. M.

ಶ್ರೀ ಕೋಣಂದೂರು ಲಿಂಗಪ್ಪ.—ಅದರಲ್ಲಿ ಶಿವಮೊಗ್ಗವನ್ನು ಸೇರಿಸಿಕೊಂಡು ಹೇಳಿ.

ಶ್ರೀ ಬಿ. ಬಾಸ್ಕರಶೆಟ್ಟಿ.—ಶಿವಮೊಗ್ಗಕ್ಕೂ ಈ ಒಂದು ಸೆಂಟರನ್ನು ಕೊಡಲಿ, ಈ ಬಗ್ಗೆ ನಮ್ಮ ಅಭ್ಯಂತರವೇನೂ ಇಲ್ಲ. ನಮ್ಮ ಜಿಲ್ಲೆಗೆ ಮೊದಲು ಕೊಟ್ಟು ಅಮೇಲೆ ಶಿವಮೊಗ್ಗ ಜಿಲ್ಲೆಗೆ ಕೊಡಿ ಎಂದು ಹೇಳುತ್ತೇನೆ. ಇಷ್ಟು ಹೇಳಿ ಈ ಮೀನುಗಾರಿಕಾ ಇಲಾಖೆ ಮತ್ತು ಇನ್ನಿತರ ಇಲಾಖೆಗಳ ಬೇಡಿಕೆ ಏನಿದೆ, ಇದನ್ನು ಸಂಪೂರ್ಣವಾಗಿ ಅನುಮೋದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಸಿ. ಬೈರೇಗೌಡ (ವೇಮಗಲ್).—ಮಾನ್ಯ ಅಧ್ಯಕ್ಷರೇ, ಈ ದಿವಸ ಮಾನ್ಯ ವ್ಯವಸಾಯ ಸಚಿವರು, ಮಾನ್ಯ ಮೀನುಗಾರಿಕೆ ಸಚಿವರು, ಹಾಗೂ ಹೈನುಗಾರಿಕೆ ಸಚಿವರು ತಮ್ಮ ಇಲಾಖೆಗಳ ಬೇಡಿಕೆಗಳನ್ನು ಇಲ್ಲಿ ಮಂಡಿಸಿದ್ದಾರೆ. ನಾನು ಇದನ್ನು ವಿರೋಧಿಸುತ್ತಾ ಕೆಲವು ಮಾತುಗಳನ್ನು ಹೇಳಬೇಕೆಂದು ಇಚ್ಛಿಸುತ್ತೇನೆ. ಕಳೆದ 19 ತಿಂಗಳು ಅಥವಾ 20 ತಿಂಗಳುಗಳ ಕರಾಳ ದಿನಗಳಲ್ಲಿ ನಾವು ಎಲ್ಲಿ ನೋಡಿದರೂ ದೊಡ್ಡ ದೊಡ್ಡ ಬೋರ್ಡ್‌ಗಳು ನಮ್ಮ ಕಣ್ಣಿಗೆ ಬೀಳುತ್ತಿದ್ದವು. ಅದರಲ್ಲಿ ಬಹು ಮುಖ್ಯವಾದದ್ದು ಕಾರ್ಖಾನೆಗಳಲ್ಲಿ ಉತ್ಪಾದನೆ ಜಾಸ್ತಿಯಾಗಿದೆ, ಈ ಉತ್ಪಾದನೆ ಎಲ್ಲಾ ಕಡೆ ಹೆಚ್ಚಿದ್ದು, ದೇಶ ಅಭಿವೃದ್ಧಿ ಪಥದಲ್ಲಿ ಸಾಗುತ್ತಿದೆ ಎಂಬುದಾಗಿ ಬೋರ್ಡ್‌ಗಳಲ್ಲಿ ನಾವು ಕಾಣುತ್ತಿದ್ದೆವು. ಆದರೆ ಇವತ್ತಿನದಿವಸ ನಮ್ಮ ಕರ್ನಾಟಕ ರಾಜ್ಯಸರ್ಕಾರದವರು ದೊಡ್ಡ ಮನಸ್ಸು ಮಾಡಿ ಈ ಒಂದು ಪುಸ್ತಕವನ್ನು ನಮಗೆ ಕೊಟ್ಟಿದ್ದಾರೆ. ಈ ಪುಸ್ತಕದಲ್ಲಿ ವ್ಯವಸಾಯಕ್ಕೆ ಸಂಬಂಧಪಟ್ಟ ಹಾಗೆ ನೋಡಿದರೆ ಅದರ ಮೊದಲನೇ ಪ್ಯಾರಾದಲ್ಲಿ 'ನಮ್ಮ ರಾಜ್ಯದಲ್ಲಿ ಸುಮಾರು 26 ಲಕ್ಷ ಟನ್‌ನಷ್ಟು ಆಹಾರದ ಕೊರತೆ ಇದೆ' ಎಂದು ಹೇಳಿದ್ದಾರೆ. ಆದರೆ ಅಂದಿನ ಕರಾಳದಿನಗಳಲ್ಲಿ ದೊಡ್ಡದೊಡ್ಡ ಬೋರ್ಡ್‌ಗಳಲ್ಲಿ ಸತ್ಯಕ್ಕೆ ದೂರವಾದ ವಿಷಯಗಳನ್ನು ಜನತೆಗೆ ತಿಳಿಸುತ್ತಾ ಇದ್ದರು ಎಂಬುದು ಈಗ ಸರ್ಕಾರದ ಅಂಕಿಅಂಶಗಳಿಂದ ಸಾಬೀತಾಗಿದೆ. ಇದನ್ನು ನೋಡುವು

ದಾದರೆ, ಭಾರತದ ವ್ಯವಸಾಯ 'ಗ್ಯಾಂಬ್ಲಿಂಗ್ ಇನ್ ಮಾನ್‌ಸೂನ್' ಎಂದು ಏನು ಹೇಳತ್ತಿದ್ದರೋ, ಅದು ಈ ದಿವಸ ಸತ್ಯವಾಗಿ ಕಾಣುತ್ತಿದೆ. ಪ್ರಪಂಚದ ಎಲ್ಲಾ ರಾಷ್ಟ್ರಗಳೂ, ಎಲ್ಲಾ ರಂಗಗಳಲ್ಲೂ ಮುಂದುವರಿಯುತ್ತಿರುವಾಗ, ವ್ಯವಸಾಯವೇ ಮುಖ್ಯ ಕಸಬಾಗಿರತ್ಕಂಥ ನಮ್ಮ ಭಾರತ ದೇಶ ಈ ವ್ಯವಸಾಯದಲ್ಲಿ ಹಿಂದಕ್ಕೆ ಹೋಗುತ್ತಿದೆ ಎಂಬುದನ್ನು ನಾವು ಅಂಕಿಅಂಶಗಳ ಮೂಲಕ ಇಲ್ಲಿ ಕಾಣಬಹುದು. ಈ ಗ್ಯಾಂಬ್ಲಿಂಗ್ ಇನ್ ಮಾನ್‌ಸೂನ್ ಕೊರತೆಯನ್ನು ನೀಗಿಸುವುದಕ್ಕೆ ನಮ್ಮ ಸರ್ಕಾರದವರು ಯಾವ ನಿರ್ದಿಷ್ಟವಾದ ಕಾರ್ಯಕ್ರಮವನ್ನೂ ತೆಗೆದುಕೊಂಡಿಲ್ಲ. ಇಲ್ಲಿ ಡಿಪಿಎಪಿ ಮತ್ತು ಇನ್ನೂ ಕೆಲವು ಕಾರ್ಯಕ್ರಮಗಳ ಬಗ್ಗೆ ಹೇಳಿದ್ದಾರೆ. ಅವರು ಎಲ್ಲಾ ಕಾರ್ಯಕ್ರಮಗಳ ಪ್ರತಿಫಲಗಳನ್ನೂ ನಮಗೆ ಕೊಟ್ಟಿದ್ದರೆ, ನೈಸರ್ಗಿಕವಾಗಿ ನಾವು ಎಂತಹ ಕಠೋರವಾದ ದಿನಗಳನ್ನೂ ಸಹ ಧೈರ್ಯವಾಗಿ ಎದುರಿಸುವಂಥ ಶಕ್ತಿ ಬರುತ್ತಿತ್ತು. ಇವತ್ತಿನ ದಿವಸ ಮಳೆ ಇಲ್ಲದೇ ದೇವಸ್ಥಾನಗಳಲ್ಲಿ ದೇವರ ಪೂಜೆ ಮಾಡತಕ್ಕಂಥಾದ್ದನ್ನು ನಾವು ನೋಡುತ್ತಿದ್ದೇವೆ. ಸರ್ಕಾರದವರು ಎಲ್ಲಾ ವ್ಯವಸಾಯದ ಅಭಿವೃದ್ಧಿ ಕಾರ್ಯಗಳನ್ನು ತೆಗೆದುಕೊಂಡು ವ್ಯವಸಾಯ ಪ್ರಧಾನವಾದ ದೇಶವನ್ನು ವ್ಯವಸಾಯದ ಕಡೆಗೆ ತಿರುಗಿಸಿದ್ದರೆ ಪ್ರಕೃತಿಯ ವಿಕೋಪವನ್ನು ಧೈರ್ಯವಾಗಿ ಇವತ್ತಿನದಿವಸ ಎದುರಿಸ ಬಹುದಾಗಿತ್ತು. ಈ ಅಭಿವೃದ್ಧಿ ಕಾರ್ಯಗಳನ್ನು ನಮ್ಮ ಸರ್ಕಾರದವರು ಮಾಡದೇ ಇರುವುದರಿಂದ ನಮ್ಮ ಕರ್ನಾಟಕ ರಾಜ್ಯದಲ್ಲಿ 26 ಲಕ್ಷ ಟನ್ ಆಹಾರದ ಕೊರತೆಯನ್ನು ನಾವು ಇವತ್ತಿನ ದಿವಸ ಅನುಭವಿಸಬೇಕಾದ ಪರಿಸ್ಥಿತಿ ಬಂದಿದೆ. ಇನ್ನು ನಾವು ನಮ್ಮ ವ್ಯವಸಾಯಗಾರರ ಪರಿಸ್ಥಿತಿಯನ್ನು ನೋಡಬೇಕಾಗಿದೆ. ಈ ಗ್ಯಾಂಬ್ಲಿಂಗ್ ಇನ್ ಮಾನ್‌ಸೂನ್ ನಿಂದ ಎಷ್ಟು ಜನ ವ್ಯವಸಾಯಗಾರರು ಪೇಚಾಡುತ್ತಿದ್ದಾರೆ ಎಂಬುದನ್ನು ಲೆಕ್ಕ ಹಾಕುವುದಕ್ಕೆ ಆಗುತ್ತಾ ಇಲ್ಲ. ಇನ್ನು ವ್ಯವಸಾಯಗಾರರಿಗೆ ಬೇಕಾಗಿರತಕ್ಕಂಥ ಗೊಬ್ಬರ, ಯಂತ್ರೋಪಕರಣಗಳು, ಪವರ್ ಟಿಲ್ಲರ್ಸ್, ಟ್ರಾಕ್ಟರ್ಸ್‌ನಿಂದ ಹಿಡಿದು ಯಾವುದೇ ಕೆಮಿಕಲ್ಸ್, ಔಷಧಿಗಳ ಬಗ್ಗೆ ಇಂತಿಂಥಾದಕ್ಕೆ ಇಷ್ಟಿಷ್ಟು ಬೆಲೆ ಎಂದು ನಿಗದಿ ಮಾಡಿದ್ದಾರೆ. ಇವತ್ತು ಡಿಡಿಟಿಯನ್ನು ತೆಗೆದುಕೊಳ್ಳಬೇಕಾದರೆ ಕೇಜಿಗೆ ಇಷ್ಟು. ಇನ್‌ಸೆಕ್ಟಿಸೈಡ್ಸ್ ತೆಗೆದು ಕೊಳ್ಳಬೇಕಾದರೆ ಕೇಜಿಗೆ ಇಷ್ಟು, ಇಷ್ಟು ಎಕರೆಗೆ ಔಷದಿಯನ್ನು ಹೊಡೆದರೆ ಇಷ್ಟು, ಎಂದು ಒಂದು ನಿಗದಿಯಾದ ಬೆಲೆ ಇದೆ. ಒಂದು ಪವರ್ ಟಿಲ್ಲರ್ ತೆಗೆದುಕೊಳ್ಳಬೇಕಾದರೆ 26 ಸಾವಿರ ಎಂದು ಹಾಕಿರುತ್ತಾರೆ ಒಂದು ಟ್ರಾಕ್ಟರನ್ನು ತೆಗೆದುಕೊಳ್ಳಬೇಕಾದರೆ 56 ಸಾವಿರ ಎಂದು ಒಂದು ಬೆಲೆ ಇರುತ್ತದೆ. ಈ ಎಲ್ಲಾ ವಸ್ತುಗಳನ್ನು ಈ ನಿಗದಿಯಾದ ಬೆಲೆಗೆ ಕೊಡುವಂಥ ರೈತನು ತಾನು ಬೆಳೆದಂತ ರಾಗಿ ಬೆಳೆಗೆ ಕ್ವಿಂಟಾಲ್‌ಗೆ 105 ರೂಪಾಯಿಗಳಂತೆ ಮಾರಾಟ ಮಾಡಿರತಕ್ಕಂಥ ಉದಾಹರಣೆ ಇದೇ ನಮ್ಮ ಕರ್ನಾಟಕ ರಾಜ್ಯದಲ್ಲಿ ಇವತ್ತಿನದಿವಸ ಇದೆಯೇ ? ರೈತರು ತರಕಾರಿಗಳನ್ನು ಬೆಳೆಯುತ್ತಾರೆ, ದ್ರಾಕ್ಷಿ ಮುಂತಾದ ಹಣ್ಣುಹಂಪಲುಗಳನ್ನು ಬೆಳೆಯುತ್ತಿದ್ದಾರೆ. ಯಾವ ರೈತನೇ ಆಗಲಿ ತಾನು ಬೆಳೆದಂತ ಬದನೇಕಾಯಿಯನ್ನು ಕೇಜಿಗೆ 5 ರೂಪಾಯಿಯಂತೆ ಮಾರಾಟ ಮಾಡತಕ್ಕಂಥಾದ್ದು ನಮ್ಮ ದೇಶದಲ್ಲಿ ಇದೆಯೇ ? ಆದರೆ ಇವತ್ತಿನದಿವಸ ರೈತನಿಗೆ ಬೇಕಾಗಿರತಕ್ಕಂಥ ಎಲ್ಲಾ ಪದಾರ್ಥಗಳ ಬೆಲೆ ಇಷ್ಟಿಷ್ಟೇ ಎಂದು ನಿಗದಿಯಾಗಿದೆ ನಾನು ಹೇಳುತ್ತೇನೆ ಇವತ್ತಿನದಿವಸ ರೈತರು ಇನ್ನೂ ಸಂಘಟಿತರಾಗಿಲ್ಲ. ರೈತ ಈ ದೇಶದ ಬೆನ್ನುಮೂಳೆ ಎಂದು ಹೇಳತಕ್ಕಂಥಾದ್ದು ಕಳೆದ 30 ವರ್ಷಗಳಿಂದಲೂ ಇದೆ. ಆದರೆ ಆತನಿಗೆ ಒದಗಬೇಕಾದಂತ ಸೌಲಭ್ಯಗಳು ಸಿಕ್ಕಿಲ್ಲ. ಇದಕ್ಕೆ ಕಾರಣವೇನೆಂದರೆ ರೈತರ ಸಂಘಟನೆಯಾಗಿಲ್ಲ. ರೈತನಿಗೆ ಈ ಸರ್ಕಾರದ ಮೇಲೆ ತನ್ನ ಪ್ರಭಾವವನ್ನು ಬೀರುವ ಶಕ್ತಿ ಇಲ್ಲ. ರೈತರು ಏತಕ್ಕೆ ಸಂಘಟನೆಯಾಗಿಲ್ಲ ಎಂದರೆ ಒಬ್ಬ ರೈತ ಕೆಲಸ ಮಾಡತಕ್ಕಂಥ ಭಾಗ ಪೂರ್ವ ದಿಕ್ಕಿನಲ್ಲಿ ಇದ್ದರೆ ಇನ್ನೊಬ್ಬ ರೈತ ಕೆಲಸ ಮಾಡತಕ್ಕಂಥ ಭಾಗ ದಕ್ಷಿಣ ದಿಕ್ಕಿನಲ್ಲಿ ಇರುತ್ತದೆ. ಇನ್ನೊಬ್ಬನ ಹೊಲ 3 ಮೈಲಿ ದೂರದಲ್ಲಿ ಇರುತ್ತದೆ. ಇದರಿಂದಾಗಿ ರೈತರು ಸಂಘಟನೆಯಾಗದೇ ಇರತಕ್ಕಂಥ ಪರಿಸ್ಥಿತಿಯಲ್ಲಿ ರೈತರು ಬೆಳೆದಂತ ಯಾವುದೇ ಪದಾರ್ಥಗಳಿಗೆ ಒಂದು ನಿಗದಿಯಾದ ಬೆಲೆಯನ್ನು ಕೊಡುವಂಥ ವ್ಯವಸ್ಥೆಯನ್ನು ಸರ್ಕಾರದವರು ಮಾಡಿಲ್ಲ. ಈಗ ಯಾವರೀತಿ ಗ್ಯಾಂಬ್ಲಿಂಗ್ ಇನ್ ಮಾನ್‌ಸೂನ್ ಎಂದು ಹೇಳುತ್ತಿದ್ದಾರೆಯೋ ಅದೇ ರೀತಿಯಲ್ಲಿ ರೈತನ ಜೀವನ ಗ್ಯಾಂಬ್ಲಿಂಗ್ ಆಗಿದೆ. ಇವತ್ತು ರೈತನನ್ನು ಸಾಲಗಾರರು ಬಂದು ಹಣ ಕೇಳುತ್ತಾರೆ. ಅವನು ಹಣ ಕೊಡದಿದ್ದರೆ ಅವನು ಮನೆಯಲ್ಲಿ ಇಟ್ಟಿರತಕ್ಕಂಥ ಪದಾರ್ಥಗಳನ್ನು ಹರಾಜು ಹಾಕುತ್ತಾರೆ. ಇವೆಲ್ಲವೂ ನಾವು ಪ್ರತಿದಿವಸ ಕಾಣುತ್ತಾ ಇರತಕ್ಕಂಥ ದೃಶ್ಯವಾಗಿದೆ. ಇದನ್ನು ನಿವಾರಣೆ ಮಾಡಲು ಸರ್ಕಾರದವರು

ಯಾವ ಒಂದು ನಿರ್ದಿಷ್ಟವಾದ ಕಾರ್ಯಕ್ರಮವನ್ನು ಹಾಕಿಲ್ಲ. ಆದರೆ ಇವತ್ತು ರೈತನಿಗೆ ಬೇಕಾಗಿರತಕ್ಕಂಥ ಪದಾರ್ಥಗಳ ಬೆಲೆ ಯಾಶಸ್ವಿಯಾಗಿ ಗಗನಕ್ಕೆ ಮುಟ್ಟಿದೆ. ನಾವು ಇಲ್ಲಿ ಯಾವುದಾದರೊಂದು ಸಣ್ಣ ಪದಾರ್ಥದ ಬೆಲೆ ಜಾಸ್ತಿಯಾದರೂ ಗಲಾಟೆ ಮಾಡುತ್ತೇವೆ ಆದರೆ ಪಾಪ ಬಡರೈತ ಆ ಸ್ಥಿತಿಯಲ್ಲಿ ಇಲ್ಲ. ಮಾನ್ಯ ತೋಟಗಾರಿಕೆ ಮಂತ್ರಿಯವರು ಇದನ್ನು ಗಮನಿಸಬೇಕು. ಏನೆಂದರೆ ಕೆಲವು ಸಂದರ್ಭಗಳಲ್ಲಿ ಆಲೂಗೆಡ್ಡೆಯನ್ನು ಮೂಟೆಗೆ 15-20 ರೂಪಾಯಿಗಳಂತೆ ಮಾರಾಟ ಮಾಡಿರುವಂತಾದ್ದು ಇದೆ. ಈಗ ಅದರ ಬೆಲೆ ಮೂಟೆಗೆ 60 70, 100 ರೂಪಾಯಿಗಳವರೆಗೆ ಇದೆ. ಸರ್ಕಾರದವರು ರೈತನನ್ನು ಉಳಿಸುವಂಥ ವ್ಯವಸ್ಥೆ ಮಾಡಿರುವುದು ಇದೇ ಏನು ? ಲಾಲ್‌ಭಾಗ್‌ನಲ್ಲಿ ನೋಡಿದರೆ ಒಂದೊಂದು ಮರಕ್ಕೂ ಹೆಸರಿಟ್ಟು ಬೋರ್ಡ್ ಹಾಕಿದ್ದಾರೆ. ಈ ಬೋರ್ಡ್‌ಗಳನ್ನು ಜನಗಳಿಗೆ ತೋರಿಸುವುದಕ್ಕೆ ಇಟ್ಟಿದ್ದಾರೆ. ರೈತರು ಬೆಳಿಗ್ಗೆಯಿಂದ ಸಂಜೆಯವರೆಗೆ ದುಡಿಯತಕ್ಕಂಥ ಜನ ಎಂದು ತೋರಿಸುವುದಕ್ಕೆ ಏನೂ ಮಾಡಿಲ್ಲ. ಈ ಕೆಲಸವನ್ನು ಇವತ್ತು ತೋಟಗಾರಿಕೆ ಇಲಾಖೆಯಲ್ಲಿ ಮಾಡಿಲ್ಲ ಅಲ್ಲಿ ಅನೇಕ ತರಕಾರಿಗಳು ಇವೆ. ಟೊಮೊಟೋ ಬೆಳೆ ಬಂತು ಎಂದರೆ ರೈತರ ಕಣ್ಣಲ್ಲಿ ನೀರು ಬರುತ್ತದೆ. ಕಳೆದವರ್ಷ ಈ ಟೊಮಟೋ ಹಣ್ಣನ್ನು ಬೆಳೆದವರ ಗತಿ ಏನಾಯಿತು ಎಂಬುದರ ಬಗ್ಗೆ ಮಾನ್ಯ ವ್ಯವಸಾಯ ಮಂತ್ರಿಯವರಾದ ಚಿಕ್ಕೇಗೌಡರಿಗೂ ಗೊತ್ತಿದೆ. ಇಲ್ಲಿರತಕ್ಕಂಥ ಕಿಸಾನ್ ಫ್ರೂಟ್ ಜ್ಯೂಸ್ ಫ್ಯಾಕ್ಟರಿಯಲ್ಲಿ ಟೊಮೊಟೋ ಹಣ್ಣನ್ನು ತೆಗೆದುಕೊಳ್ಳದೇ ರೈತರು ಕಣ್ಣೀರು ಸುರಿಸಿಕೊಂಡು ಹೋಗಿದ್ದಾರೆ. ಈ ಬಗ್ಗೆ ಮಾನ್ಯ ವ್ಯವಸಾಯ ಮಂತ್ರಿಯವರಿಗೆ ಸ್ವತಃ ಅನುಭವ ಇದೆಯೆಂದು ನಾನು ಭಾವಿಸಿದ್ದೇನೆ. ಇಂತಹ ಪರಿಸ್ಥಿತಿಯಲ್ಲಿ ಸರ್ಕಾರದವರು ರೈತರ ಬಗ್ಗೆ ಸಹಾನುಭೂತಿ ತೋರಿಸತಕ್ಕಂಥ ಕೆಲಸವನ್ನೂ ಮಾಡಿಲ್ಲ.

ವ್ಯವಸಾಯ ರಂಗದಲ್ಲಿ ವ್ಯವಸಾಯ ಕೂಲಿಗಾರರ ಪರಿಸ್ಥಿತಿ ಕೂಡಾ ರೈತರ ಪರಿಸ್ಥಿತಿ ಯಾವ ರೀತಿ ಇದೆ ಅದೇ ಪರಿಸ್ಥಿತಿಯಲ್ಲಿದ್ದಾರೆ. ಇವರಿಗೂ ಸಂಘಟಿತರಾಗುವಂತಹ ಚೈತನ್ಯವಿಲ್ಲ. ಸಭೆಯ ಸದಸ್ಯರ ಮತ್ತು ಶ್ರಮಜೀವಿ ವರ್ಗದ ಒತ್ತಾಯಕ್ಕೆ ಮಣಿದು ಕಾಟಾಚಾರಕ್ಕೆ ಅಗ್ರಿಕಲ್ಚರಲ್ ಮಿನಿಮಂ ವೇಜಸ್ ಆಕ್ಟ್ ಎಂದು ಮಾಡಿದ್ದಾರೆ ಅದನ್ನು ಜಾರಿಗೆ ಕೊಡುವಂತಹ ಕೆಲಸ ಎಲ್ಲಿ ನಡೆಯುತ್ತಿದೆಯೋ ನನಗಂತೂ ಗೊತ್ತಿಲ್ಲ. ನನಗೆ ತಿಳಿದಮಟ್ಟಿಗೆ ಎಲ್ಲೂ ಸರಿಯಾಗಿ ಇದನ್ನು ಜಾರಿಗೆ ಕೊಟ್ಟಂತೆ ಕಾಣಲಿಲ್ಲ. ಎಲ್ಲಿ ಜಾರಿಗೆ ಕೊಡುತ್ತಿದ್ದಾರೆ ಯಾರು ಕೊಡುತ್ತಿದ್ದಾರೆ, ರಾಜ್ಯದಲ್ಲಿ ಈ ನಿಯಮವನ್ನು ಯಾರು ಪಾಲನೆ ಮಾಡಿದ್ದಾರೆ, ಎಷ್ಟು ಕಡೆ ಇದರ ಉಲ್ಲಂಘನೆಯಾಗಿದೆ ಎಂಬ ಅಂಕಿಅಂಶ ಕೂಡಾ ಎಲ್ಲೂ ಸಿಗುವುದಿಲ್ಲ. ಇದು ಕಾರ್ಮಿಕ ಇಲಾಖೆಗೆ ಬರಬಹುದು ಎಂದು ಕಾಣಿಸುತ್ತದೆ. ವ್ಯವಸಾಯ ರಂಗದಲ್ಲಿ ವ್ಯವಸಾಯಾಭಿವೃದ್ಧಿ ಆಗಬೇಕಾಗಿದ್ದರೆ ವ್ಯವಸಾಯ ಕೂಲಿಗಾರರ ಬಗ್ಗೆ ಹೆಚ್ಚು ಗಮನ ಕೊಡಬೇಕಾಗಿದೆ. ಈ ಒಂದು ವರ್ಗವನ್ನು ನಾವು ಕೈಬಿಟ್ಟಿದ್ದೇ ಆದರೆ ವ್ಯವಸಾಯಾಭಿವೃದ್ಧಿ ಕುಂಠಿತವಾಗುತ್ತದೆ ಇವತ್ತಿನ ದಿವಸ ವ್ಯವಸಾಯದಲ್ಲಿ ಸಾಯಿಲ್ ಕನ್‌ಸರ್ವೇಷನ್ ಮಾಡುತ್ತಿದ್ದಾರೆ. ದುಡ್ಡನ್ನು ಪೋಲು ಮಾಡುವ ವ್ಯವಹಾರ ಇದಕ್ಕಿಂತ ಬೇರೆ ಯಾವುದೂ ಇಲ್ಲ ಅನೇಕ ಕಡೆ ಕೆಲಸ ನಡೆಯುತ್ತಿರುವುದನ್ನು ನಾನು ನೋಡಿದ್ದೇನೆ. ಅದಕ್ಕೆ ಲಕ್ಷಾಂತರ ರೂಪಾಯಿ ಖರ್ಚಾಗುತ್ತಿದೆ. ಆ ಕೆಲಸ ನಡೆಯುತ್ತಿಲ್ಲ ಎಂದು ಹೇಳುತ್ತಿಲ್ಲ. ನಡೆಯುತ್ತಿದೆ ಆದರೆ ಮೈಂಟೆನೆನ್ಸ್ ಬಗ್ಗೆ ಯಾರೂ ಗಮನ ಕೊಟ್ಟಿಲ್ಲ. ಮಾನ್ಯ ಮಂತ್ರಿಗಳು ಪ್ರವಾಸ ಹೋದಾಗ ಇದನ್ನು ಗಮನಿಸಬೇಕು. ಮೈಂಟೆನೆನ್ಸ್ ಬಗ್ಗೆ ಗಮನ ಹರಿಸುತ್ತಿಲ್ಲ. ರೈತನಿಗೇ ಬಿಟ್ಟಿದ್ದಾರೆ. ಎಕರೆಗೆ 80 ರೂಪಾಯಿ ಅದಕ್ಕೆ ಕೊಡಬೇಕಾಗಿದೆ. ಸರ್ಕಾರದವರು ಉಚಿತವಾಗಿ ಸಾಲಭ್ಯ ಕೊಟ್ಟಿಲ್ಲ ಸಬ್ಸಿಡಿ ಇದರಲ್ಲಿಲ್ಲ ಎಂಬ ಅಂಶ ರೈತನಿಗೆ ಗೊತ್ತಿಲ್ಲ. ಯಾರೋ ಬಂದರು, ನನ್ನ ಹೊಲದಲ್ಲಿ ಏನೋ ಮಾಡಿದರು ಎಂದು ತಿಳಿದುಕೊಂಡಿರುತ್ತಾನೆಯೇ ವಿನಹ ರೈತನ ಜವಾಬ್ದಾರಿ ಏನಿದೆ ಎಂದು ಅವನು ತಿಳಿದುಕೊಂಡಿರುವುದಿಲ್ಲ ಮಾಡಿರತಕ್ಕ ಕೆಲಸ ಹಾಳಾದರೆ ರೈತನಿಗೇ ನಷ್ಟ ಎಂಬ ತಿಳುವಳಿಕೆ ರೈತನಿಗೆ ಇಲ್ಲ. ಕೆಲವು ಕಡೆ ವೇಸ್ಟ್ ವೇರ್ ಇಡಬೇಕಾಗಿತ್ತು. ಹೆಚ್ಚುವರಿಯಾಗಿರತಕ್ಕ ನೀರು ಹೊರಗಡೆ ಹೋಗಲು ವ್ಯವಸ್ಥೆ ಮಾಡಬೇಕು. ಶೇಕಡ 90 ರಷ್ಟು ಕಡೆ ವೇಸ್ಟ್ ವೇರ್ ಇಲ್ಲ. ಕಾಂಟೂರ್ ಬಂಡಿಂಗ್ ಎಂದು ಹಾಕಿ ಹಣವನ್ನು ಯಾತಕ್ಕೆ ಪೋಲು ಮಾಡಬೇಕು ಎಂದು ಪ್ರಶ್ನೆ ಮಾಡಬೇಕಾಗಿದೆ. ಈ ಕೆಲಸ ಕೋಲಾರ ಮತ್ತು ಕೆಲವು ಜಿಲ್ಲೆಗಳಲ್ಲಿ ನಡೆಯುತ್ತಿದೆ ಎಂದು ಅಲ್ಲ, ಅನೇಕ ಕಡೆ ಇದನ್ನು ಕಾಣುತ್ತಿದ್ದೇವೆ ಯಾವಕ್ಕೋ ಒಂದು ಕಾಂಟೂರ್ ಬಂಡಿಂಗ್ ನಡೆದಂತಹ ಕುರುಹು ಇದೆ. ಅದರಿಂದ ಏನೂ ಪ್ರಯೋಜನವಾಗುತ್ತಿಲ್ಲ. ಇವತ್ತು ನಮ್ಮ ರಾಜ್ಯ

ದಲ್ಲಿ ಕಬ್ಬು ಅನೇಕ ಕಡೆ ಯಥೇಚ್ಛವಾಗಿ ಬೆಳೆಯುತ್ತಿದ್ದಾರೆ. ಆದರೆ ಅದಕ್ಕೆ ಒಂದೊಂದು ಕಡೆ ಒಂದೊಂದು ರೇಟ್ ಇದೆ. ಪಾಂಡವಪುರದಲ್ಲಿ ಒಂದು ಟನ್ನಿಗೆ 170 ರಿಂದ 200 ರೂಪಾಯಿಯವರೆಗೆ ಇದೆ. ಆದರೆ ಗೌರೀಬಿದನೂರಿನಲ್ಲಿ 130 ರಿಂದ 140 ರೂಪಾಯಿ ಇದೆ. ಬೆಳಗಾಂ ಮತ್ತು ಹೊಸ ಪೇಟೆಯಲ್ಲಿ ಎಷ್ಟಿದೆಯೋ ಗೊತ್ತಿಲ್ಲ. ಪಾಂಡವಪುರದಲ್ಲಿ ಕಬ್ಬನ್ನು ಬೆಳೆದಂತಹ ರೈತ ಎಷ್ಟು ಕಷ್ಟ ಪಟ್ಟಿರುತ್ತಾನೆಯೋ ಅಷ್ಟೇ ಕಷ್ಟ ಗೌರೀಬಿದನೂರಿನಲ್ಲಿ ಕಬ್ಬನ್ನು ಬೆಳೆದಂಥ ರೈತನೂ ಪಟ್ಟಿರುತ್ತಾನೆ. ಆದರೆ ಅವನಿಗೆ ಬರತಕ್ಕ ಆದಾಯಕ್ಕೂ, ಇವನಿಗೆ ಬರತಕ್ಕ ಆದಾಯಕ್ಕೂ ಯಾತಕ್ಕೆ ವ್ಯತ್ಯಾಸ? ಇಬ್ಬರೂ ಒಂದೇ ರೀತಿ ಕಷ್ಟಪಟ್ಟಿರುತ್ತಾರೆ. ಆದರೆ ಒಬ್ಬನಿಗೆ ಹೆಚ್ಚಿಗೆ ಆದಾಯ ಮತ್ತೊಬ್ಬನಿಗೆ ಕಡಿಮೆ ಆದಾಯ ಯಾತಕ್ಕೆ? ಸಕ್ಕರೆ ಕಾರ್ಖಾನೆಗಳ ಮೇಲೆ ಸರ್ಕಾರಕ್ಕೆ ಏನೂ ಹತೋಟಿ ಇಲ್ಲವೇ? ಮಂಡ್ಯ ಅಂತಹ ಪ್ರದೇಶಗಳಲ್ಲಿ ಹೆಚ್ಚು ಬೆಲೆ ಕೊಡುವುದು, ಬೇರೆ ಕಡೆಗಳಲ್ಲಿ ಕಡಿಮೆ ಬೆಲೆ ಕೊಡತಕ್ಕದ್ದು ಯಾವ ನ್ಯಾಯ? ಖಂಡಸಾರಿ ಕಾರ್ಖಾನೆಯವರು ಒಂದು ಟನ್ ಕಬ್ಬಿಗೆ 200 ರೂಪಾಯಿಗಿಂತ ಹೆಚ್ಚಾಗಿ ಹಣ ಕೊಡುತ್ತಿದ್ದಾರೆ. ಸಣ್ಣ ಪ್ರಮಾಣದಲ್ಲಿ ವ್ಯವಹಾರ ನಡೆಸ ತಕ್ಕವರು 200 ರೂಪಾಯಿಗಿಂತ ಹೆಚ್ಚು ಕೊಡುವಾಗ ದೊಡ್ಡ ಪ್ರಮಾಣದಲ್ಲಿ ವ್ಯವಹಾರ ನಡೆಸ ತಕ್ಕವರು ಕಡಿಮೆ ಕೊಡುವುದೆಂದರೆ ಏನು ಅರ್ಥ. ರೈತನ ತಲೆಹೊಡೆಯುವ ಕೆಲಸ ಮಾಡುತ್ತಿದ್ದಾರೆ. ಇದರ ಬಗ್ಗೆ ಏನೂ ಕ್ರಮ ಕ್ರಮ ತೆಗೆದುಕೊಳ್ಳುತ್ತಿಲ್ಲ. ಮಾನ್ಯ ವ್ಯವಸಾಯ ಮಂತ್ರಿಗಳು ಅದು ನಮಗೆ ಸಂಬಂಧಪಡುವುದಿಲ್ಲ, ಕೈಗಾರಿಕಾ ಇಲಾಖೆಗೆ ಸಂಬಂಧಪಟ್ಟಿದ್ದು ಎಂದು ಹೇಳ ಬಹುದು. ಆದರೆ ನೀವು ವ್ಯವಸಾಯ ಮಂತ್ರಿಗಳಾಗಿರುವವರು, ವ್ಯವಸಾಯಗಾರರ ಮಗನಾಗಿ ಹುಟ್ಟಿರತಕ್ಕವರು ವ್ಯವಸಾಯಗಾರರ ಬಗ್ಗೆ ಆಸಕ್ತಿ ವಹಿಸಬೇಕು. ಮಾನ್ಯ ಮಂತ್ರಿಗಳು ನಿಕ್ಕರ್ ಹಾಕಿಕೊಂಡು ಕೆಲಸ ಮಾಡುತ್ತಿದ್ದುದನ್ನು ನಾನು ನೋಡಿದ್ದೇನೆ. ವ್ಯವಸಾಯಗಾರರಾಗಿ ಮಾನ್ಯ ಮಂತ್ರಿಗಳು ವ್ಯವಸಾಯಗಾರರ, ರೈತರ ಹಿತವನ್ನು ಕಾಪಾಡುವುದರಲ್ಲಿ ಮುಂದಾಗಬೇಕು ಎಂದು ಹೇಳಿ ಮಾನ್ಯ ಅಧ್ಯಕ್ಷರು ಬೆಲ್ ಬಾರಿಸುತ್ತಿರುವುದರಿಂದ ನನ್ನ ಮಾತುಗಳನ್ನು ಮುಗಿಸುತ್ತಿದ್ದೇನೆ.

ಶ್ರೀ ಕೆ.ಆರ್. ಶ್ರೀನಿವಾಸುಲು ನಾಯ್ಡು (ಶಾಂತಿನಗರ).—ಮಾನ್ಯ ಸಭಾಧ್ಯಕ್ಷಿಣಿಯವರೇ ನಮ್ಮ ಮುಂದಿರತಕ್ಕ ಬೇಡಿಕೆಗಳನ್ನು ಹೃದಯ ಪೂರ್ವಕವಾಗಿ ಸ್ವಾಗತಿಸುತ್ತಾ ಈ ಸಂದರ್ಭದಲ್ಲಿ ನಾಲ್ಕು ಮಾತುಗಳನ್ನು ಹೇಳುವುದಕ್ಕೆ ನಿಂತಿದ್ದೇನೆ. ಇವತ್ತು ಬೇಡಿಕೆಗಳನ್ನು ಮಂಡಿಸಿರತಕ್ಕ ಇಲಾಖೆಗಳೇನಿವೆ ಇವು ರೈತನಿಗೆ ನೇರವಾಗಿ ಸಹಾಯ ಮಾಡುವಂತಹ ಇಲಾಖೆಗಳು. ಹಿಂದೆ ರೈತನನ್ನು ನೇಗಿಲ ಯೋಗಿ, ಬೆನ್ನುಮೂಳೆ, ಮಣ್ಣಿನಮಗ, ಅನ್ನದಾತ, ಎಂದು ಕವಿಗಳು ಬರೆದಿದ್ದಾರೆ. ಅಂಥವನಿಗೆ ಸಹಾಯಕವಾಗಿ ಇವತ್ತು ಈ ಇಲಾಖೆಗಳಿವೆ. ಪಶುಸಂಗೋಪನಾ ಇಲಾಖೆ ಬಹಳ ಪ್ರಾಮುಖ್ಯವಾದ ಇಲಾಖೆ. ಇದರ ಬಗ್ಗೆ ಎಷ್ಟು ಹೇಳಿದರೂ ಸಾಲದು. ಈ ಇಲಾಖೆಯಲ್ಲಿ ಬೇಕಾದಷ್ಟು ಸ್ಕೀಮುಗಳಿವೆ. ಈ ಇಲಾಖೆಗೆ 12 ಕೋಟಿ ರೂಪಾಯಿಗಳನ್ನು ಸರ್ಕಾರದವರು ಕೇಳಿದ್ದಾರೆ ನನಗನ್ನಿಸುತ್ತದೆ ಈ ಇಲಾಖೆಗೆ 25 ಕೋಟಿ ರೂಪಾಯಿಗಳನ್ನು ಅದರೂ ಕೇಳಿದ್ದರೆ ಚೆನ್ನಾಗಿತ್ತು ಎಂದು. ಇವತ್ತು ರೈತನಿಗೆ ಬೆನ್ನೆಲುಬಾಗಿ ಬೇಕಾಗಿರುವುದು ದನಗಳು ಮತ್ತು ಹಣ ಅದಕ್ಕೆ ನಾವು ಪ್ರಾಮುಖ್ಯತೆ ಹೆಚ್ಚು ಕೊಡಬೇಕು. ಇಂದು ರೈತನಿಗೆ ಎತ್ತುಗಳ ಪ್ರಾಮುಖ್ಯತೆ ಹೆಚ್ಚಾಗಿ ಇದೆ. ದೊಡ್ಡ ದೊಡ್ಡ ದೇಶಗಳಲ್ಲಿ ಮಿಷನರೀಸ್ ಇರಬಹುದು. ಆದರೆ ನಮ್ಮಂಥ ಸಣ್ಣ ದೇಶಗಳಲ್ಲಿ ಪಶುಸಂಗೋಪನೆಗೆ ಹೆಚ್ಚು ಪ್ರಾಮುಖ್ಯತೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ನಮ್ಮಲ್ಲಿ Subdivision and Fragmentation of Holdings ಹೆಚ್ಚಾಗಿ ಇರುವುದರಿಂದ Mechanised farming ಮಾಡುವುದಕ್ಕಾಗುವುದಿಲ್ಲ ಆದ್ದರಿಂದ ರೈತನು ಹೆಚ್ಚಾಗಿ ಎತ್ತುಗಳನ್ನೇ ತನ್ನ ಕಸಬಿಗೆ ಅವಲಂಬಿಸಬೇಕಾಗಿದೆ. ಆದಕಾರಣ ಹೆಚ್ಚು ಹೆಚ್ಚು ಕಾರ್ಯಕ್ರಮಗಳನ್ನು ಈ ಇಲಾಖೆ ದನಗಳ ಅಭಿವೃದ್ಧಿಗೆ ಹಾಕಿಕೊಳ್ಳಬೇಕು. ಇದುವರೆಗೆ ಎಷ್ಟು Calf Rearing Centress ಗಳನ್ನು ಮಾಡಿದ್ದೀರಿ? ಎಷ್ಟು ಕರುಗಳನ್ನು ರೈತರಿಗೆ ಕೊಟ್ಟಿದ್ದೀರಿ. ಅದೇ ರೀತಿ ಎಷ್ಟು Breeding Centres open ಮಾಡಿದ್ದೀರಿ? ಅಮೃತಮಹಲ್ ಕಾವಲ್‌ನಿಂದ ಎಷ್ಟು ಹುಲ್ಲನ್ನು ಸಪ್ಲೈ ಮಾಡಿದ್ದೀರಿ? ಮೂರು ವರ್ಷಗಳಿಂದ ಬರೀ ಅಂಕಿಅಂಶಗಳನ್ನು ನೋಡಿ ನನಗೆ ಬೇಜಾರಾಗಿದೆ. ಈಗಲಾದರೂ ಈ ಇಲಾಖೆ ತ್ವರಿತಗತಿಯಿಂದ ಕಾರ್ಯಕ್ರಮವನ್ನು ಹಾಕಿಕೊಂಡು ಮುಂದುವರೆಯಬೇಕು ಎಂದು ನನ್ನ ಆಸೆ. ಹೊಸದಾಗಿ ಏನು ಕಾರ್ಯಕ್ರಮಗಳನ್ನು ಹಾಕಿಕೊಂಡಿರುವುದನ್ನು ನಾನು ನೋಡಲಿಲ್ಲ. Fodder Banks ಗಳ ಬಗ್ಗೆ ಹೇಳುವುದಾದರೆ ಅನೇಕ

ಸಂದರ್ಭಗಳಲ್ಲಿ ನೋಡಿದಾಗ ದನಗಳಿಗೆ ಮೇವು ಸರಿಯಾಗಿ ಸಿಗುತ್ತಾ ಇಲ್ಲ. ನಮ್ಮಲ್ಲಿ ಕೆಲವು ಕಡೆಗಳಲ್ಲಿ ಜಾನುವಾರುಗಳನ್ನು ನೋಡಿದಾಗ ಯಾವ ಸ್ಥಿತಿಯಲ್ಲಿವೆ ಎಂಬುದು ಚೆನ್ನಾಗಿ ಗೊತ್ತಾಗುತ್ತದೆ. ಆದ್ದರಿಂದ ಪ್ರತಿ ಜಿಲ್ಲೆಗಳಲ್ಲೂ Calf Rearing Centres ಹೆಚ್ಚು ಮಾಡಿ, ನಮ್ಮ ಪಶುಸಂಪತ್ತನ್ನು ಅಭಿವೃದ್ಧಿ ಪಡಿಸಬೇಕು. ಕರ್ನಾಟಕದಲ್ಲಿ ಅಮೃತಮಹಲ್ ವೈಶಿಷ್ಟ್ಯವೇ ಇದೆ ಅದನ್ನು ಕಾಪಾಡಿಕೊಂಡು ಬರಲೇ ಬೇಕು. ಅಜ್ಜಂಪುರದಲ್ಲಿರುವ ಅಮೃತಮಹಲ್ ಬಗ್ಗೆ ಅನೇಕರಿಗೆ ಏನೂ ಅರ್ಥವಾಗಿಲ್ಲ. ಅಲ್ಲಿ ಎರಡು ಸಾವಿರ ದನಗಳನ್ನು ಮಾತ್ರ ಇಟ್ಟಿದ್ದಾರೆ. ಅಮೃತಮಹಲ್ ಥಳಿಯನ್ನು ಅಭಿವೃದ್ಧಿ ಮಾಡುವುದಕ್ಕೆ ಸರ್ಕಾರದವರು ಪ್ರಯತ್ನ ಮಾಡಬೇಕು. ಹಾಗೆಯೇ ಹಳ್ಳಿಕಾರ್, ದಿಯೋನಿ (Deoni) ಥಳಿಗಳನ್ನೂ ಅಭಿವೃದ್ಧಿ ಪಡಿಸುವುದು ಬಹಳ ಒಳ್ಳೆಯದು. ಸುಮಾರು 3 ಲಕ್ಷ ಎಕರೆ ಇದ್ದ ಅಮೃತ್‌ಮಹಲ್ ಇವತ್ತು 60 ಸಾವಿರ ಎಕರೆಗೆ ಇಳಿದಿದೆ. ಒಳ್ಳೆಯ ಹುಲ್ಲುಗಾವಲು ಇಲ್ಲದಿದ್ದರೆ ದನಗಳು ಎಲ್ಲಿ ಮೇಯುತ್ತವೆಯೆ? ಹಿಂದೆ ಗೋಮಾಳ ಅಧಿಕವಾಗಿದ್ದುದರಿಂದ ರೈತನಿಗೆ ಬೇಕಾದಷ್ಟು ಹುಲ್ಲು ಸಿಗುತ್ತಿತ್ತು. ಅದು ಇತ್ತೀಚೆಗೆ ಕಡಿಮೆಯಾದ ಮೇಲೆ ರೈತನಿಗೆ ತೊಂದರೆಯಾಗಿದೆ. ಈಗಲಾದರೂ ಸಹ ತಮ್ಮ ಇಲಾಖೆಗೆ ಗೋಮಾಳ ಪ್ರದೇಶವನ್ನು ವಶಪಡಿಸಿಕೊಂಡರೆ ಆಗ ದನಗಳಿಗೆ ಹೆಚ್ಚಾಗಿ ಮೇವು ಸಿಗುತ್ತದೆಂದು ನಾನು ಸಲಹೆ ಮಾಡುತ್ತೇನೆ. ಮೈದಾನ ಪ್ರದೇಶಗಳಲ್ಲಿ ಕೇವಲ 20 ಇಂಚು ಮಳೆಯಾಗುವದರಿಂದ ಅಂಥಹ ಪ್ರದೇಶಗಳಲ್ಲಿ ಬಡ ದನಗಳು ಮಾತ್ರ ರೈತ ಹೇಗೆ ಬದುಕಬೇಕೆಂಬ ಸಮಸ್ಯೆ ಬರುತ್ತದೆ. ಅನೇಕ ಸಂದರ್ಭಗಳಲ್ಲಿ ನಾನು ನೋಡಿದಾಗ ಮಿಲ್ಕ್ ಬ್ರೀಡಿಂಗ್ ಸೆಂಟರ್ಸ್ ಎಂದು ಏನು ಇವೆ ಅವು ಬೆಂಗಳೂರಿಗೆ ಮಾತ್ರ ಸೀಮಿತವಾಗಿವೆ. ಅಂದರೆ Within a radius of 30 miles, you can find good milking Cows ಆದರೂ ಸಹ ಕಳೆದ 2 ತಿಂಗಳ ಹಿಂದೆ ಹಾಲು ಸಾಲದೆ, ನಾವು ಪಕ್ಕ ಪ್ರದೇಶವಾದ ತಮಿಳು ನಾಡು ಮತ್ತು ಆಂಧ್ರ ಪ್ರದೇಶದಿಂದ ತರಿಸುತ್ತಿದ್ದೆವು. ಈಗ ಮಳೆಗಾಲವಾದ್ದರಿಂದ ಸಾಕಷ್ಟು ಹಾಲು ದೊರೆಯುತ್ತಿದೆ. ಈಗ ಅಮೂಲ್ ಮತ್ತು ಬಫೆಲೋ ಮಿಲ್ಕನ್ನು ನಮ್ಮ ತಲೆ ಮೇಲೆ ಹಾಕುತ್ತಿದ್ದಾರೆ. ಈ ಮಿಲ್ಕ್ ಫೀಡರ್ ಯೋಜನೆ ಏನು ಇದೆ ಅದನ್ನು ಸಾಧ್ಯವಾದಷ್ಟು ಮಟ್ಟಿಗೆ ಅಭಿವೃದ್ಧಿಗೊಳಿಸಬೇಕೆಂದು ಒತ್ತಿ ಹೇಳುತ್ತೇನೆ. ಡೈರಿ ಡೆವಲಪ್‌ಮೆಂಟ್ ಕಾರ್ಪೊರೇಷನ್ನನ್ನು ನನ್ನ ಕ್ಷೇತ್ರದಲ್ಲಿ ಪ್ರಾರಂಭಿಸಬೇಕೆಂದು ತೀರ್ಮಾನಿಸಲಾಗಿದೆ. ಎಂದು ಕೇಳಿಬಂದಿದ್ದೇನೆ. ಆದರೆ ಅದು ಯಾವಾಗ ಕಾರ್ಯಗತವಾಗುತ್ತದೆಂದು ನನಗೆ ಸಂದೇಹ ಉಂಟಾಗಿದೆ. ಈ ಡೈರಿ ಡೆವಲಪ್‌ಮೆಂಟ್ ಕಾರ್ಪೊರೇಷನ್, ಇಂಪೀರಿಯಲ್ ಡೈರಿ ಮತ್ತು ಬೆಂಗಳೂರು ಡೈರಿ ಇವು ಮೂರು ಒಂದೇ ಜೋನ್‌ನಲ್ಲಿದ್ದರೆ Administration ದೃಷ್ಟಿಯಿಂದ ಸಹಾಯವಾಗುತ್ತದೆಂದು ನನ್ನ ಖಚಿತ ಅಭಿಪ್ರಾಯ. ಹೆಚ್ಚಾಗಿ ವಿಮಾನಗಳು ಈ ಭಾಗದಲ್ಲಿ ಓಡಾಡುವುದರಿಂದ, ಆಕ್ಷಿ ಪಕ್ಷಿಗಳಿಗೆ, ಆಕ್ಸಿಡೆಂಟ್ ಆಗಿ, ಅವುಗಳು ಸಾಯುವ ಸಂದರ್ಭಗಳು ಬಹಳವಾಗಿರುವುದರಿಂದ, ಈ ಬಗ್ಗೆ ಸರ್ಕಾರದವರು ಒಂದು ನಿರ್ದಿಷ್ಟವಾದ ನಿಲುವನ್ನು ತೆಗೆದುಕೊಳ್ಳಬೇಕೆಂದು ಹೇಳಬಯಸುತ್ತೇನೆ. ಮತ್ತು ಒತ್ತಾಯ ಮಾಡುತ್ತೇನೆ. ಈ ಬಗ್ಗೆ ನಾನು ಈಗಾಗಲೇ ರಾಜ್ಯ ಸರ್ಕಾರಕ್ಕೆ ಮತ್ತು ಕೇಂದ್ರ ಸರ್ಕಾರಕ್ಕೆ ಬರೆದಿದ್ದೇನೆ. ದನಗಳಿಗೆ, ಕುರಿಗಳಿಗೆ, ಕೋಳಿಗಳಿಗೆ ಒಳ್ಳೆಯ ಆಹಾರ ದೊರಕುವುದರಿಂದ ಎಲ್ಲರಿಗೂ ಬಹಳ ಅನುಕೂಲವಾಗಿದೆ. ಈ ಫೌಲ್ಟ್ರಿಯಿಂದ ರೈತರಿಗೆ ಸಾಧ್ಯವಾದಷ್ಟು ಯೂ-ಫಾರಂ ರೇಟಿನಲ್ಲಿ ಒಳ್ಳೆಯ ಆಹಾರ, ಅಂದರೆ ದನಕರುಗಳಿಗೆ ದೊರೆಯುವ ಹಾಗೆ ಮಾಡಬೇಕೆಂದು ಹೇಳುತ್ತೇನೆ. ಹಿಂದೆ ಸ್ಪ್ಯಾಕ್‌ವ-ನ್ ಟ್ರೈನಿಂಗ್ ಎಂದು ಒಂದು ಇತ್ತು. ಅದನ್ನು ಶ್ರೀ ಐ. ಯಂ. ಎನ್. ನಾಯ್ಡುರವರ ಕಾಲದಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿ ಕೆಲಸಮಾಡಲು ಸಹಾಯಕರಾಗಿದ್ದರು. ಆ ಪದ್ಧತಿಯನ್ನು Revise and Revitalise ರೀವೈಟಲೈಸ್ ಮಾಡಬೇಕೆಂದು ಹೇಳುತ್ತೇನೆ. ಮತ್ತೊಂದು ಮುಖ್ಯವಾದ ವಿಚಾರವೇನೆಂದರೆ ಇಡೀ ಭಾರತದಲ್ಲಿ ವೆಟರಿನರಿ ಆಸ್ಪತ್ರೆಗಳು ಜಾಸ್ತಿ ಇರುವುದು ಕರ್ನಾಟಕದಲ್ಲಿ. ಹೆಮ್ಮೆಯ ವಿಷಯ ಹೀಗಿರುವಾಗ, ನಿರುದ್ಯೋಗ ತಖ್ತೆಯಲ್ಲಿ ವೆಟರಿನರಿ ಡಾಕ್ಟರುಗಳು ಸಹ ಸೇರುತ್ತಾರೆಂಬ ಶಂಕೆ ನನಗೆ ಇದೆ. ಆದುದರಿಂದ ಈ ವೆಟರಿನರಿ ಡಾಕ್ಟರುಗಳಿಗೆ ಇನಸೆಂಟೀವ್ಸ್ ಕೊಡುವ ಉದ್ದೇಶದಿಂದ ಬ್ಯಾಂಕು ಮತ್ತು ಇತರ ಸಂಸ್ಥೆಗಳ ಮುಖಾಂತರ ಹಣ ದೊರೆಯುವಂತೆ ವ್ಯವಸ್ಥೆ ಮಾಡಬೇಕೆಂದು ಸಲಹೆ ಮಾಡುತ್ತೇನೆ. ಅವರು ಗ್ರಾಮಾಂತರ ಪ್ರದೇಶದಲ್ಲಿ ನೆಲೆಸಲು ಸರ್ಕಾರದವರು ಅನುಕೂಲ ಕಲ್ಪಿಸಬೇಕೆಂದು ಮತ್ತೊಮ್ಮೆ ಒತ್ತಿ ಹೇಳುತ್ತೇನೆ.

ಮೆಡಿಕಲ್ ಅಂದರೆ Human ಡಾಕ್ಟರ್‌ಗಳಿಗಾದರೆ 9 0 + 1000 ರೂಪಾಯಿ ಸಂಬಳವನ್ನು, ವೆಟರಿನರಿ ಡಾಕ್ಟರ್‌ಗಳಿಗಾದರೆ ಕೇವಲ 500 – 600 ರೂಪಾಯಿ ಸಂಬಳವನ್ನು ಕೊಡುತ್ತೀರಿ. Why should they not be treated on par with the Medical Department Doctors ಮೆಡಿಕಲ್ ಡಾಕ್ಟರ್‌ಗಳನ್ನು ಟ್ರೀಟ್ ಮಾಡಿದ ಹಾಗೆ ವೆಟರಿನರಿ ಡಾಕ್ಟರ್‌ಗಳನ್ನು ಟ್ರೀಟ್ ಮಾಡಬೇಕೆಂದು ಹೇಳುತ್ತೇನೆ ಇಬ್ಬರನ್ನೂ ಸಮಾನ ದೃಷ್ಟಿಯಿಂದ ಕಾಣಬೇಕು. ಈಗ ಮೆಡಿಕಲ್ ಕೌನ್ಸಿಲ್ ಇರುವ ಹಾಗೆ Veterinary Council ಒಂದು ಆಗಬೇಕಾಗಿದೆಯೆಂದು ಸರ್ಕಾರಕ್ಕೆ ಸಲಹೆ ಮಾಡುತ್ತೇನೆ. Agricultureನ ಬಗ್ಗೆ ಹೇಳುವುದಾದರೆ ರೈತನಿಗೆ ಬೇಕಾದುದು ಸಣ್ಣ ಸಣ್ಣ ಟಿಲ್ಲರುಗಳು. ಇದರ ಕಂಪನಿಗಳು ಪ್ರತಿಯೊಂದು ಜಿಲ್ಲೆಯಲ್ಲೂ ಒಂದೊಂದು ಇರಬೇಕೆಂದು ನನಗನ್ನಿಸುತ್ತದೆ. Pulses Committee ಏನಾಯಿತು ಎಷ್ಟು ಕಾಲ ಸೇರಿತ್ತು ? ಈ Committee ಇಂದ ಸರ್ಕಾರಕ್ಕೆ ಆದ ಉಪಯೋಗವೇನು ? ಈ ವಿಷಯವನ್ನು ಮಾನ್ಯ ಮಂತ್ರಿಗಳು ಗಮನದಲ್ಲಿಟ್ಟುಕೊಂಡು ತಕ್ಕ ವ್ಯವಸ್ಥೆ ಮಾಡಬೇಕೆಂದು ಹೇಳಬಯಸುತ್ತೇನೆ Pulse ತೋಟಗಾರಿಕೆ ಇಲಾಖೆಯಲ್ಲಿ ಹಣ್ಣು ಹಂಪಲು ಹೂವು ತರಕಾರಿಗಳು ಎಲ್ಲ ದೊರೆಯುತ್ತದೆ ಇದು ಕೇವಲ ಜಿಲ್ಲಾ ಮಟ್ಟದಲ್ಲಿದೆಯೇ ವಿನಹ ತಾಲ್ಲೂಕು ಮತ್ತು ಹೋಬಳಿ ಮಟ್ಟಕ್ಕೆ ಹೋಗಿಲ್ಲ. ಕೊನೇ ಪಕ್ಷ ಇದು ತಮ್ಮ ಕಾಲದಲ್ಲಾದರೂ ಜಿಲ್ಲಾ ಮಟ್ಟದಿಂದ ತಾಲ್ಲೂಕು ಮಟ್ಟಕ್ಕೆ ಹೋಗಿ ಅಲ್ಲಿ ನಿಮ್ಮ ಇಲಾಖೆಯ ಕಾರ್ಯ ವ್ಯಾಪ್ತಿ ಹರಡುವಂತಾಗಬೇಕೆಂದು ಹೇಳುತ್ತೇನೆ ವಿಶೇಷವಾಗಿ ಹಣ್ಣು ಹಂಪಲುಗಳನ್ನು ಬೆಳೆಯುವ ಪ್ರದೇಶಗಳಲ್ಲಿ ಕೋಲ್ಡ್ ಸ್ಟೋರೇಜ್ ಫೆಸಿಲಿಟೀಸ್ ಇಲ್ಲ. ಉದಾಹರಣೆಗೆ ಹೇಳುವುದಾದರೆ, ತುಮಕೂರಿನಲ್ಲಿ ಮಾವಿನ ಹಣ್ಣು, ಇನ್ನೊಂದು ಕಡೆ ಬಾಳೆ ಹಣ್ಣು, ಮತ್ತೊಂದು ಕಡೆ ಕಿತ್ತಳೆ ಹಣ್ಣು ಬೆಳೆಯುತ್ತದೆ ಆದರೆ ಇವುಗಳು ಬಹಳ ದಿನಗಳ ಕಾಲ ಕೆಡದಂತೆ ಇಡಲು ಕೋಲ್ಡ್ ಸ್ಟೋರೇಜ್ ಫೆಸಿಲಿಟೀಸ್ ಇಲ್ಲ. ಈ ಬಗ್ಗೆ what action have you taken ? ಹಾಸನದಲ್ಲಿ ಆಲೂಗೆಡ್ಡೆ ವಿಶೇಷವಾಗಿ ಬೆಳೆಯುತ್ತದೆ, ಆದರೆ ಅದನ್ನು ಸರಿಯಾಗಿ ಇಡುವುದಕ್ಕೆ ಬೇಕಾದ ಸೌಲಭ್ಯ ಸಾಲದು. ಆದುದರಿಂದ ಈ ಬಗ್ಗೆ ಸೂಕ್ತ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ

ಇನ್ನು ಗಾರ್ಡನ ಬಗ್ಗೆ ಹೇಳುವುದಾದರೆ ಸುಮಾರು 18ನೇ ಶತಮಾನದಲ್ಲಿ ದಿವಂಗತ ಟಿಪ್ಪು ಸುಲ್ತಾನನ ಕಾಲದಲ್ಲಿ ಲಾಲ್‌ಬಾಗ್ ನಿರ್ಮಾಣವಾಯಿತು, 19ನೇ ಶತಮಾನದಲ್ಲಿ ಕಬ್ಬನ್‌ಪಾರ್ಕ್ ಆಯಿತು. ಅದೇ ರೀತಿ. ಬೆಂಗಳೂರು ನಗರದ ಇನ್ನು ಇತರೇ ಭಾಗಗಳಲ್ಲೂ ಸಹ ಪಾರ್ಕ್‌ಗಳು ನಿರ್ಮಾಣವಾಗಬೇಕಾಗಿದೆ ಸಿಟಿ ಕಾರ್ಪೊರೇಷನ್ನಿನಲ್ಲಿ ಬೇಕಾದಷ್ಟು ಜಾಗವಿದ್ದರೂ ಸಹ ಪಾರ್ಕ್‌ಗಳ ನಿರ್ಮಾಣಕ್ಕೆ ಗಮನ ಸರಿಯಾಗಿ ಕೊಡುತ್ತಿಲ್ಲ. ಒಟ್ಟಿನಲ್ಲಿ ಹೇಳುವುದಾದರೆ, ಕೈಗಾರಿಕೆಗಳ ಬೆಳವಣಿಗೆಗೆ ಆದ್ಯತೆ ನೀಡಿದಷ್ಟು ವ್ಯವಸಾಯದ ಅಭಿವೃದ್ಧಿಗೆ ಗಮನ ನೀಡುತ್ತಿಲ್ಲ. ಆದ್ದರಿಂದ ಈ ಬಗ್ಗೆ ಹೆಚ್ಚಿನ ಗಮನ ನೀಡಿ ದವಸ ಧಾನ್ಯಗಳನ್ನು ಅಧಿಕವಾಗಿ ಬೆಳೆಸುವುದಕ್ಕೆ ಪ್ರಯತ್ನ ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಫಿಷರೀಸ್ ಬಗ್ಗೆ ಹೇಳುವುದಾದರೆ, Marine Fisheries ಬಗ್ಗೆ ಏನು ಕಾರ್ಯಕ್ರಮ ತೆಗೆದುಕೊಂಡಿದ್ದೀರಿ ? ಅದೇ ರೀತಿ Inland fisheries Corporation ನನ್ನು ಯಾವಾಗ ಸ್ಟಾರ್ಟ್ ಮಾಡುತ್ತೀರೆಂದು ಕೇಳಬಯಸುತ್ತೇನೆ. ರೈತನಿಗೆ ಸಂಬಂಧಪಟ್ಟದ್ದು ಮತ್ತೊಂದು ವಿಚಾರವೇನೆಂದರೆ ಸಾಯಿಲ್ ಕನ್‌ಸರ್ವೇಷನ್ ಅನೇಕ ಕಡೆ ಅನೇಕ ಕೆರೆಗಳಲ್ಲಿ ಸಿಲ್ಟ್ ತುಂಬಿಕೊಂಡು ಕೆರೆಗಳು ತಟ್ಟೆಯ ಹಾಗೆ ಆಗಿವೆ, ಹೆಚ್ಚು ನೀರು ನಿಲ್ಲುವುದಕ್ಕೆ ಏನು ಕಾರ್ಯಕ್ರಮ ತೆಗೆದುಕೊಂಡು ಇದ್ದೀರ ?

(Madam Speaker in the Chair)

ಡಿಸಿಲ್ಟ್ ಮಾಡುವ ಕೆಲಸಗಳನ್ನು ಅಲ್ಲಲ್ಲಿ ಕೆಲವು ಜಿಲ್ಲೆಗಳಲ್ಲಿ ಮಾಡುತ್ತಿದ್ದಾರೆ. ಇದರ ಅವಶ್ಯಕತೆ ಮೈದಾನ ಪ್ರದೇಶಗಳಲ್ಲಿ ಬಹಳವಾಗಿದೆ. ಸಾಯಿಲ್ ಕನ್‌ಸರ್ವೇಷನ್ ಕಾರ್ಯ ಅನೇಕ ಕಡೆಗಳಲ್ಲಿ ಚೆನ್ನಾಗಿ ಆಗಿಲ್ಲ. ಈ ಬಗ್ಗೆ ಸರ್ಕಾರದವರು ಹೆಚ್ಚಿನ ಆಸಕ್ತಿ ವಹಿಸಬೇಕೆಂದು ಹೇಳುತ್ತೇನೆ. ವೆಟರಿನರಿ ಡಿಪಾರ್ಟ್‌ಮೆಂಟಿನಲ್ಲಿ 12 ಜನ M.V.S ಗೆಜೆಟೆಡ್ ಆಫೀಸರ್ಸ್ ಏನು ಇದ್ದಾರೆ ಅವರಿಗೆ ತಕ್ಕ ಜವಾಬ್ದಾರಿ ಕೊಡಬೇಕು. ಆ ಯೋಜನೆ ವ್ಯರ್ಥವಾಗಿ ಉಳಿಯಬಾರದು. ಅದನ್ನು ಕಾರ್ಯಗತ ಮಾಡಬೇಕಾದರೆ ಅರಿತು ನುರಿತ ತರುಣರು ಬೇಕು. ತಮ್ಮ ಕಾಲದಲ್ಲಿ ಒಂದು

Veterinary Bulletin ಹೊರಡಬೇಕೆಂದು ಹೇಳಬಯಸುತ್ತೇನೆ. Veterinary ಲೈಬ್ರರಿಯಲ್ಲಿ ನೋಡಿದಾಗ, it was a poor library. I was not satisfied with it. It must be improved.

ಮಾನ್ಯ ಅಧ್ಯಕ್ಷಿಣಿಯವರೇ, ಕೊನೆಯಲ್ಲಿ ವೆಟರಿನರಿ ಕೌನ್ಸಿಲ್ ಆಗಬೇಕು, Veterinary Graduates should be treated on par with Medical Graduates, ದವಸ ಧಾನ್ಯಗಳನ್ನು ಅಧಿಕವಾಗಿ ಬೆಳೆಯುವಂತಾಗಬೇಕು. ಕ್ಯಾಟಲ್ ಮಾರ್ಕೆಟಿಂಗ್ ಯಾರ್ಡ್ ಒಂದು ಆಗಬೇಕು ಮತ್ತು ಅಮೃತ್ ಮಹಲ್ ಹಳ್ಳಿಕಾರನ ಬಗ್ಗೆ ಹೆಚ್ಚಿನ ಆಸಕ್ತಿ ವಹಿಸಬೇಕೆಂದು ಹೇಳುತ್ತಾ, ಮಾನ್ಯ ಅಧ್ಯಕ್ಷಿಣಿಯವರು ನಾಲ್ಕು ಮಾತುಗಳನ್ನು ಆಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕೆ ಅವರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

5-0 P.M.

ಶ್ರೀ ಎಂ. ವೆಂಕಟಲಿಂಗಯ್ಯ (ಕೃಷ್ಣರಾಜ). — ಮಾನ್ಯ ಅಧ್ಯಕ್ಷಿಣಿಯರೇ, ಮಾನ್ಯ ತೋಟಗಾರಿಕೆ ಸಚಿವರು ಮಂಡಿಸಿರತಕ್ಕಂಥ ಬೇಡಿಕೆಗಳನ್ನು ವಿರೋಧ ಮಾಡುತ್ತಾ ಕೆಲವು ವಿಷಯಗಳನ್ನು ಸಭೆಯ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಹಾರ್ಟಿಕಲ್ಚರ್ ಡಿಪಾರ್ಟ್‌ಮೆಂಟಿನಲ್ಲಿ ಅನೇಕ ಸ್ಕೀಂಗಳನ್ನು ಹಾಕಿಕೊಂಡಿದ್ದಾರೆ. ಫ್ರೂಟ್ಸ್ ಗಾರ್ಡನ್ ವೆಜಿಟಬಲ್ ಮತ್ತು ಬೇರೆ ಬೇರೆ ರೀತಿಯಾಗಿ ಕ್ಯಾಷ್ಯೂ ನಟ್ಸ್ ಬೆಳೆಯಬೇಕು ಎಂದು ನಾನಾ ರೀತಿಯ ಸ್ಕೀಂಗಳನ್ನು ಹಾಕಿಕೊಂಡಿದ್ದಾರೆ. ಇವುಗಳಿಗೆ ಬಡ್ಜೆಟ್ಟಿನಲ್ಲಿ ಏನು (ಪ್ರಾವಿಷನ್ ಮಾಡಿಕೊಂಡಿದ್ದಾರೋ ಅದನ್ನು) ಈ ಸ್ಕೀಂಗಳನ್ನು ಇಂಪ್ರೂವ್ ಮಾಡುವುದಕ್ಕೆ ಒಂದು ವರ್ಷದಲ್ಲಿ ಮಾಡಿ ಮುಗಿಸಿಲ್ಲ. ಎಷ್ಟೋ ಕಡೆ ಪ್ರೊವೈಡ್ ಮಾಡಿಕೊಂಡಿದ್ದ ಹಣ ಲ್ಯಾಪ್ಸ್ ಆಗಿದೆ. ಆದ್ದರಿಂದ ಇಲಾಖೆಯವರು ಇದರ ಕಡೆ ಹೆಚ್ಚಿನ ಶ್ರದ್ಧೆ ವಹಿಸಿ ಬಡ್ಜೆಟ್ಟಿನಲ್ಲಿ ಯಾವ ಯಾವ ಕೆಲಸಗಳನ್ನು ಮಾಡಬೇಕು ಎಂದು ಪ್ರಾವಿಷನ್ ಮಾಡಿಕೊಂಡಿರುತ್ತಾರೋ ಅವುಗಳನ್ನು ಆ ವರ್ಷದಲ್ಲಿಯೋ ಮಾಡಿ ಮುಗಿಸಬೇಕು. ಕೋಕನೆಟ್ ಡೆವಲಪ್‌ಮೆಂಟ್ ಮತ್ತು ವೆಜಿಟಬಲ್ಸ್ ಬೆಳೆಯುವುದು, ಫ್ರೂಟ್ಸ್ ಬೆಳೆಯುವುದು ಹೆಚ್ಚಿನ ರೀತಿಯಲ್ಲಿ ಆಗಿಲ್ಲ. ಫಿಷ್ ಮೀಲ್ ಇದುವರೆಗೂ ಡಿಸ್ಟ್ರಿಕ್ಟ್ ಆಫೀಸರ್ ಮುಖಾಂತರ ಟನ್‌ಗೆ 500-600 ರೂಗೆ ಕೊಂಡು ಕೊಳ್ಳುತ್ತಿತ್ತು. ಈಗ ಡಿಸ್ಟ್ರಿಕ್ಟ್ ಆಫೀಸರ್ ಬಿಟ್ಟು ಸ್ಟೇಟ್ ಲೆವೆಲ್‌ನಲ್ಲಿ ಡೈರೆಕ್ಟರ್‌ವರು ಡೈರೆಕ್ಟ್ ಆಗಿ ಟೆಂಡರ್ ಕರೆದು ಸುಮಾರು 1125 ರೂಪಾಯಿಗಳಿಗೆ ಕೊಟ್ಟಿದ್ದಾರೆ. ಮಂಗಳೂರಿನ ಕರ್ನಾಟಕ ಅಸಿಟೇಟ್ ಕಂಪನಿಗೆ ಡೈರೆಕ್ಟ್ ಆಗಿ ಟೆಂಡರ್ ಕರೆದು 1125 ರೂಪಾಯಿಗಳಿಗೆ ಕೊಟ್ಟಿದ್ದಾರೆ. ಬಹಳ ಕಡಿಮೆಗೆ ಸಿಕ್ಕುತ್ತಿದ್ದ ಫಿಷ್ ಮೀಲ್ ಸ್ಟೇಟ್ ಲೆವೆಲ್ ಟೆಂಡರ್ ಕರೆಯುವುದರಿಂದ ಹೆಚ್ಚಿನ ರೀತಿಯಲ್ಲಿ ಒಂದಕ್ಕೆ ಡಬಲ್ ಆಗಿ ಕೊಡಬೇಕಾದರೆ ಇದರಲ್ಲಿ ಏನೋ ಕೈವಾಡ ನಡೆದಿದೆ ಎಂದು ನಾನು ಹೇಳಬೇಕಾಗುತ್ತದೆ. ಇದು ಒಂದೇ ಸಾರಿಗೆ 500-600 ರೂಪಾಯಿಗಳಿಂದ 1125 ರೂಪಾಯಿಗಳವರೆಗೆ ಜಾಸ್ತಿಯಾಗುವುದಕ್ಕೆ ಕಾರಣ ಏನು? ಇನ್ನೂ ಲೋಯೆಸ್ಟ್ ಟೆಂಡರ್ ಕೂಡ ಇದ್ದುದನ್ನು ಇಗ್ನೋರ್ ಮಾಡಿ ಅವರಿಗೆ ಕೊಟ್ಟಿದ್ದಾರೆ. ಇದರಲ್ಲಿ ಬೇಕಾದಷ್ಟು ಅಕ್ರಮ ನಡೆದಿದೆ ಎಂದು ನನಗೆ ತಿಳಿದು ಬಂದಿದೆ. ಇದು ವಿಚಾರಣೆ ನಡೆಯಲೇಬೇಕು. ಇದರಲ್ಲಿ ಲಕ್ಷಾಂತರ ರೂಪಾಯಿಗಳ ದುರುಪಯೋಗವಾಗಿದೆ. ಆದ್ದರಿಂದ ಇದೂ ಸಹ ಕಮಿಷನ್ ಮುಂದೆ ವಿಚಾರಣೆ ಆಗಲೇಬೇಕು. ಹಾರ್ಟಿಕಲ್ಚರ್ ಮತ್ತು ಅಗ್ರಿಕಲ್ಚರ್ ಡಿಪಾರ್ಟ್‌ಮೆಂಟ್ ಎರಡೂ 1971ರಲ್ಲಿ ರೀ ಆರ್ಗನೈಸ್ ಆದಾಗ ಅಲ್ಲಿಯೂ ಅಧಿಕಾರಿಗಳ ಸೀನಿಯಾರಿಟಿ ಲಿಸ್ಟನ್ನು ಎಲ್ಲರಿಗೂ ಒಪ್ಪಿಗೆಯಾಗುವಂತೆ ಮಾಡಿದರು. ಅದನ್ನು ಬಿಟ್ಟು ಈಚೆಗೆ ಯಾವುದೋ ಒಂದು ಫೈನಲ್ ಲಿಸ್ಟ್ ಮಾಡಿ ಹಿಂದೆ ಮಾಡಿದಂಥ ಲಿಸ್ಟನ್ನು ಇಗ್ನೋರ್ ಮಾಡಿ ಅನೇಕರಿಗೆ ಪ್ರಮೋಷನ್ ಕೊಟ್ಟು ಅನುಕೂಲ ಮಾಡಿಕೊಟ್ಟಿದ್ದಾರೆ. ಈ ರೀತಿಯಾಗಬೇಕಾದರೆ ಕಾರಣ ಏನು? ಆ ಡಿಪಾರ್ಟ್‌ಮೆಂಟಿನಿಂದ, ಪ್ರಮೋಷನ್ ಕೊಟ್ಟಿರತಕ್ಕದ್ದು ಸರಿಯಲ್ಲ ಅದನ್ನು ರಿವರ್ಸ್ ಮಾಡಬೇಕು ಎಂದು ಹೇಳಿದರೂ ಕೂಡ ಕೆಲವರಿಗೆ ಪ್ರಮೋಷನ್ ಕೊಟ್ಟಿರುವುದಕ್ಕೆ ಕಾರಣ ಏನು? ಹಾರ್ಟಿಕಲ್ಚರ್ ಡಿಪಾರ್ಟ್‌ಮೆಂಟಿನವರು ಡಿವಿಷನಲ್ ಲೆವೆಲ್‌ನಲ್ಲಿ ಇರಕೂಡದು ಎಂದು ಅವರನ್ನು ಚೇಂಜ್ ಮಾಡುತ್ತಿದ್ದಾರೆ. ಈ ವಿಷಯ ತಮ್ಮ ಗಮನಕ್ಕೆ ಬಂದಿದ್ದರೂ ಕೂಡ ಇದನ್ನು ಇನ್ನೂ ಕೂಡ ಸರಿಪಡಿಸಿಲ್ಲ. ಇಲ್ಲಿ ಬಹಳ ಅನ್ಯಾಯವಾಗಿದೆ. ಹಾಗೆಯೇ

ಕೇವಲ ಕೆಲವು ಇಂಟರೆಸ್ಟೆಡ್ ಪರ್ಸನ್ಸ್‌ಗೆ ಅವರು ಒಂದು ಜಾಗಕ್ಕೆ ಬಂದು ಆರು ತಿಂಗಳಾಗಿದ್ದರೂ ಕೂಡ ಟ್ರಾನ್ಸ್‌ಫರ್ ಮಾಡಿ ಪ್ರಮೋಷನ್ ಕೊಟ್ಟಿದ್ದಾರೆ. ಮತ್ತೆ ಕೆಲವರಿಗೆ ಟ್ರಾನ್ಸ್‌ಫರ್ ಬೇಕಾಗಿದ್ದು ಅವರು ಒಂದು ಜಾಗದಲ್ಲಿ 5-6 ವರ್ಷಗಳ ಮೇಲ್ಪಟ್ಟು ಇದ್ದರೂ ಕೂಡ ಅವರನ್ನು ಟ್ರಾನ್ಸ್‌ಫರ್ ಮಾಡಿಲ್ಲ. ಬೆಂಗಳೂರಿನಿಂದ ಮೈಸೂರಿಗೆ ಒಬ್ಬ ಡೆಪ್ಯೂಟಿ ಡೈರೆಕ್ಟರನ್ನು ಟ್ರಾನ್ಸ್‌ಫರ್ ಮಾಡಿದರು ಅವರು ಆರನೆಯ ತಾರೀಖು ಮೈಸೂರಿಗೆ ಹೋಗಿ ಅಲ್ಲಿ ಖುರ್ಚಿಯ ಮೇಲೆ ಕುಳಿತುಕೊಂಡು ಅಧಿಕಾರ ಚಲಾಯಿಸುತ್ತಿದ್ದರು. ಆರ್ಡರ್ ೯ನೇ ತಾರೀಖು ಆಗಿತ್ತು. ಮೈಸೂರಿನ ಅಧಿಕಾರಿಗಳು ನಾನು ಇನ್ನೂ ಆರ್ಡರ್ ಸಹ ನೋಡಿಲ್ಲ, ನನಗೆ ತಲುಪಿಲ್ಲ ಎಂದು ಅವರು ಅಧಿಕಾರ ಚಲಾಯಿಸುತ್ತಿದ್ದರು. ಇದನ್ನು ತಮ್ಮ ಗಮನಕ್ಕೆ ತಂದರೂ ಕೂಡ ಇನ್ನೂ ಕೂಡ ಪರಿಪಾಲಿಸಿಲ್ಲ ಅಗ್ರಿಕಲ್ಚರ್ ಡಿಪಾರ್ಟ್‌ಮೆಂಟಿನವರಿಗೆ ಅನುಕೂಲ ಮಾಡಿಕೊಡಬೇಕು ಎನ್ನುವ ದೃಷ್ಟಿಯಿಂದ ಇದನ್ನು ಮಾಡಿದ್ದಾರೆ. ಉದಾಹರಣೆಗೆ ಹೇಳುವುದಾದರೆ, ಒಬ್ಬರಿಗೆ ಒಂದು ಜಾಗದಲ್ಲಿ ಎರಡು ವರ್ಷ ಸರ್ವೀಸ್ ಸಹ ಕಂಪ್ಲೀಟ್ ಆಗಿಲ್ಲ ಅಂಥವರನ್ನು ಕಿತ್ತುಹಾಕಿದ್ದಾರೆ. ಆದರೆ ಕೆಲವರು 5-6 ವರ್ಷಗಳವರೆಗೆ ಒಂದು ಜಾಗದಲ್ಲಿ ಸರ್ವೀಸ್ ಆಗಿದ್ದರೂ ಕೂಡ ಅವರನ್ನು ಡಿಸ್ಟರ್ಬ್ ಮಾಡಿಲ್ಲ. ಶ್ರೀ ಕೆ.ಎಸ್. ಚೆನ್ನಪ್ಪ ಅಸಿಸ್ಟೆಂಟ್ ಡೈರೆಕ್ಟರ್, ಇವರಿಗೆ ಪ್ರಮೋಷನ್ ಲಿಸ್ಟನ್ನು ಸೂಪರ್‌ಸೀಡ್ ಮಾಡಿಕೊಟ್ಟಿದ್ದಾರೆ. ಶ್ರೀ ಕೆ.ಆರ್. ಬೋರಯ್ಯ ಎನ್ನುವವರಿಗೆ ಸ್ಪೆಷಲ್ ಆಫೀಸರ್ ಮಾಡಬೇಕು ಎಂದು ಪ್ರಯತ್ನ ನಡೆಯುತ್ತಿದೆ ಎಂದು ಕೇಳಿದ್ದೇನೆ. ಇದು ಬಹಳ ಅಕ್ರಮ, ಒಬ್ಬರಿಗೆ ಸ್ಪೆಷಲ್ ಆಗಿ ಅನುಕೂಲ ಮಾಡಿಕೊಡುವುದು ಸರಿಯಲ್ಲ. ಇದಕ್ಕೆ ತಾವುಗಳು ಅವಕಾಶ ಕೊಡಬಾರದು ಎಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ.

ಇನ್ನು ವೆಟರನರಿ ಬಗ್ಗೆ ಒಂದೆರಡು ಮಾತುಗಳನ್ನು ಹೇಳುತ್ತೇನೆ. ಸಿಟಿಗಳಲ್ಲಿ ಸಾಮಾನ್ಯವಾಗಿ ಬೇಕಾದಷ್ಟು ಹಸುಗಳನ್ನು ಸಾಗುತ್ತಿದ್ದಾರೆ ಇದರಿಂದ ಬೇಕಾದಷ್ಟು ಹಾಲಿನ ಡೈರಿಗಳೂ ನಡೆಯುತ್ತಿವೆ. ಆದರೆ ಈ ಹಸುಗಳಿಗೆ ತಕ್ಕ ಗ್ರೇಸಿಂಗ್ ಲ್ಯಾಂಡ್ ಇಲ್ಲ ಮುಖ್ಯವಾಗಿ ನಗರಗಳಲ್ಲಿ ಹಸುಗಳಿಗೆ ಗ್ರೇಸಿಂಗ್ ಫೀಲ್ಡ್‌ಗೆ ಅನುಕೂಲ ಮಾಡಿಕೊಡಬೇಕು, ಇಲ್ಲದೆ ಹೋದರೆ ತೊಂದರೆಯಾಗುತ್ತದೆ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇದಕ್ಕೆ ಸಂಬಂಧಪಟ್ಟ ಡಾಕ್ಟರುಗಳ ಕುಂದುಕೊರತೆಗಳನ್ನು ಯಾರೂ ಕೇಳುತ್ತಿಲ್ಲ. ಈ ಡಾಕ್ಟರುಗಳು ಒಂದು ಜಾಗದಲ್ಲಿ 10—20 ವರ್ಷಗಳಿಂದ ಇದ್ದರೂ ಅಂಥವರನ್ನೂ ಕೂಡ ಬದಲಾಯಿಸುತ್ತಿಲ್ಲ ಉದಾಹರಣೆಗೆ ಮೈಸೂರು ಜೂ ಅವರು ಪ್ರೈವೇಟ್ ಆಗಿ ಪ್ರಾಕ್ಟೀಸ್ ಮಾಡುವುದಕ್ಕೆ ಸರ್ಕಾರಿ ಔಷಧಿಗಳನ್ನು ಉಪಯೋಗಿಸಿಕೊಂಡು ಅವರ ಮೇಲೆ ಕಂಪ್ಲೇಂಟ್ ಇದ್ದರೂ ಕೂಡ ಅವರನ್ನು ಬದಲಾಯಿಸುತ್ತಿಲ್ಲ ಇಂಥ ಕೆಲಸಗಳನ್ನು ಸರ್ಕಾರದವರು ಮೊದಲು ಮಾಡಬೇಕು ಎಂದು ನಾನು ಹೇಳುತ್ತೇನೆ.

ಮೈಸೂರಿನ ಜೂ ಗಾರ್ಡನ್‌ನಲ್ಲಿ ಒಬ್ಬ ಡಾಕ್ಟರು 15-20 ವರ್ಷದಿಂದ ಇದ್ದಾರೆ ಅವರನ್ನು ಈಗ ಬದಲಾಯಿಸಿದ್ದಾರೆ, ಅವರು ಮತ್ತೆ ಟ್ರಾನ್ಸ್‌ಫರ್ ಅನ್ನು ಕ್ಯಾನ್ಸಲ್ ಮಾಡಿಸುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ.

ಶ್ರೀ ಬಿ.ಜಿ. ಬಣಕಾರ್.—ನಾವು ಟ್ರಾನ್ಸ್‌ಫರ್ ಮಾಡುವಾಗ ಯಾರಿಂದ ಪ್ರೆಷರ್ ತಂದರೂ ಸಹ ಯೀಲ್ಡ್ ಆಗಿಲ್ಲ.

ಶ್ರೀ ಕೆ. ವೆಂಕಟಲಿಂಗಯ್ಯ. ಅದಕ್ಕೆ ಅವರು ಮುಖ್ಯಮಂತ್ರಿಗಳ ಹತ್ತಿರ ಹೋಗಿ ಕ್ಯಾನ್ಸಲ್ ಮಾಡಿಸಿಕೊಳ್ಳುತ್ತೇನೆಂದು ಹೇಳಿಕೊಳ್ಳುತ್ತಿದ್ದಾರೆ. ಇವರಿಂದ ಲಕ್ಷಾಂತರ ರೂಪಾಯಿಗಳ ಮೆಡಿಸಿನ್ ಮಿಸ್‌ಯೂಸ್ ಆಗಿದೆ. ಇವರಿಂದಲೇ ಅಲ್ಲಿಯ ಪ್ರಾಣಿಗಳು ಸಾಯುತ್ತಿವೆ ಇಂಥವರಿಗೆ ಅಲ್ಲಿರುವುದಕ್ಕೆ ಯಾವ ರೀತಿಯಿಂದಲೂ ಅವಕಾಶ ಮಾಡಕೊಡದು ಎಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಫಿಷರೀಸ್ ಕಾರ್ಪೊರೇಷನ್ ಬರೀ ಕರಾವಳಿ ಪ್ರದೇಶದಲ್ಲಿ ಚೆನ್ನಾಗಿ ಹಿಡಿಯುತ್ತಿದೆಯೇ ಹೊರತು ಬೇರೆ ಕಡೆಗೆ ಇದರ ಉಪಯೋಗವಾಗುತ್ತಿಲ್ಲ. ಮಾರ್ಕೆಟಿಂಗ್ ಫೆಸಿಲೀಟೀಸ್ ಮಾಡಿ ಮೀನುಗಳನ್ನು ಹೊರಗಡೆ ಮಾರುವುದಕ್ಕೆ ಹೆಚ್ಚಿಗೆ ಅವಕಾಶ ಮಾಡಿಕೊಂಡಿಲ್ಲ. ಐಸ್ ಪ್ಲಾಂಟ್, ಕೋಲ್ಡ್ ಸ್ಟೋರೇಜ್, ಪ್ಲಾಂಟುಗಳನ್ನು ಈ ಕಾರ್ಪೊರೇಷನ್ ಮುಖಾಂತರ ಮುಖ್ಯ ನಗರಗಳಲ್ಲಿ

ಓಪನ್ ಮಾಡಿ ಇದರ ಮುಖೇನ ಮೀನುಗಳನ್ನು ಮಾರಿಸಬೇಕು. ಮೈಸೂರಿನಲ್ಲಿ ಇದರ ಒಂದು ಶಾಖೆಯನ್ನು ಓಪನ್ ಮಾಡಿದ್ದಾರೆ. ಮೀನು ತಿನ್ನುವವರಿಗೆ ವೆರೈಟಿ ಮೀನನ್ನು ತರಿಸಿ ಸರಿಯಾದ ರೀತಿಯಲ್ಲಿ ಇದರ ಬಗ್ಗೆ ಪ್ರಚಾರ ಮಾಡಬೇಕು. ಮೈಸೂರು ಸಿಟಿಯಲ್ಲಿ ಇದರ ಬಗ್ಗೆ ಸರಿಯಾದ ಪ್ರಚಾರ ಆಗಿಲ್ಲ. ಇದಕ್ಕೆ ಹೆಚ್ಚಿನ ಗಮನಕೊಡಬೇಕು ಎಂದು ಹೇಳಿ. ಅಧ್ಯಕ್ಷರು ನನಗೆ ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಅವರನ್ನು ವಂದಿಸಿ ನನ್ನ ಎರಡು ಮಾತುಗಳನ್ನು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕೆ.ಎಂ. ದೊರೆಸ್ವಾಮಿ ನಾಯ್ಡು (ಬೇತಮಂಗಲ).—ಸನ್ಮಾನ್ಯ ಅಧ್ಯಕ್ಷಣಿಯವರೇ. ನಮ್ಮ ವ್ಯವಸಾಯದ ಮಂತ್ರಿಗಳು ಮಂಡಿಸಿರತಕ್ಕಂಥಾ ಬೇಡಿಕೆಗಳನ್ನು ಸ್ವಾಗತಿಸುತ್ತಾ ಕೆಲವು ಸಲಹೆಗಳನ್ನು ಕೊಡಲು ಇಚ್ಛಿಸುತ್ತೇನೆ ಮೊಟ್ಟ ಮೊದಲನೆಯದಾಗಿ ಈ ಬಗ್ಗೆ ಹೇಳುವುದಾದರೆ ಈಗ ವ್ಯವಸಾಯಕ್ಕೋಸ್ಕರ ಇಟ್ಟಿರುವ ಹಣ ಏನೇನೂ ಸಾಲದು, ಇನ್ನೂ ಹೆಚ್ಚಿಗೆ ಇಡಬೇಕೆಂದು ನಾನು ಸಲಹೆ ಮಾಡುತ್ತೇನೆ.

ಎರಡನೆಯದಾಗಿ ನಮ್ಮ ದೇಶದಲ್ಲಿ ಆಹಾರ ಅಭಾವ ನೀಗಬೇಕಾದರೆ ಕೃಷಿ ಮಾಡುವುದರಿಂದ ಮಾತ್ರ ಸಾಧ್ಯವೇ ಹೊರತು ಬೇರೆ ಯಾವುದರಿಂದಲೂ ಸಾಧ್ಯವಿಲ್ಲಾ. ಈಗ ಏನಾಗಿದೆ ಎಂದರೆ ವ್ಯವಸಾಯ ಮಾಡುವವರಿಗೆ ಇರುವ ತೊಂದರೆಗಳನ್ನು ನಮ್ಮ ಸರ್ಕಾರದವರು ಗಮನಿಸುತ್ತಾ ಇಲ್ಲ ಆದುದರಿಂದ ಈ ಸಂದರ್ಭದಲ್ಲಿ ನಾನು ರೈತರಿಗೆ ಇರತಕ್ಕಂಥಾ ತೊಂದರೆಗಳನ್ನು ತಮ್ಮ ಮೂಲಕ ತಿಳಿಸಲು ಇಚ್ಛಿಸುತ್ತೇನೆ. ಈ ಬಗ್ಗೆ ಬಹಳ ಮುಖ್ಯವಾದ ವಿಷಯಗಳನ್ನು ಹೇಳುತ್ತೇನೆ

(1) ಮೊದಲನೆಯದಾಗಿ ರೈತ ಬೆಳೆಯುತಕ್ಕಂಥಾ ಬೆಳೆಗೆ ಸರಿಯಾದ ಬೆಲೆ ಇಲ್ಲದೆ ಇರುವುದು.

(2) ಎರಡನೆಯದಾಗಿ ರೈತ ಬೆಳೆಯುತಕ್ಕಂಥಾ ಬೆಳೆಗಳು ರೈತನ ಕೈಸೇರುವವರೆಗೂ ನಂಬಿಕೆ ಇರುವುದಿಲ್ಲಾ.

(3) ಮೂರನೆಯದಾಗಿ ಕಾಲಕ್ಕೆ ಸರಿಯಾಗಿ ಮಳೆಗಳು ಬಾರದೇ ಬೆಳೆಗಳು ಒಣಗಿ ಹೋಗುವುದು.

(4) ನಾಲ್ಕನೆಯದಾಗಿ ಕೆರೆಗಳು 2—3 ಸಲ ತುಂಬಿದರೂ ಸಹ ಒಂದು ಬೆಳೆಗೂ ಸಹಾ ನೀರು ಒದಗದೇ ಇರುವುದು.

(5) ಐದನೆಯದಾಗಿ ಎಲೆಕ್ಟ್ರಿಕ್ ಛಾರ್ಜ್ ಬಿಲ್‌ಗಳು ಲೆಕ್ಕಪಕ್ಕ ಇಲ್ಲದೆ ಮಾಡುತ್ತಿರುವುದು ಇದು ತಮಗೆ ಗೊತ್ತಿರುವ ವಿಷಯವೇ ಮತ್ತು ಡಿಮ್ಯಾಂಡ್ ಛಾರ್ಜ್ ಮತ್ತು ಕೆಪಾಸಿಟರ್‌ಗೆ ಪೆನಾಲ್ಟಿ ವಗೈರೆ ಹಾಕುತ್ತಿರುವುದು.

(6) ಆರನೆಯದಾಗಿ ವಾಟರ್ ರೇಟ್, ಮೇಂಟೇನೆನ್ಸ್ ಛಾರ್ಜ್, ಅಗ್ರಿಕಲ್‌ಚರಲ್ ಇಂಕಂಟ್ಯಾಕ್ಸ್ ಹಾಕುತ್ತಿರುವುದು.

(7) ಏಳನೆಯದಾಗಿ ವ್ಯವಸಾಯ ಮಾಡತಕ್ಕಂಥಾ ಜವರು ಉದ್ಯೋಗ ಹುಡುಕಿಕೊಂಡು ಉದ್ಯೋಗಕ್ಕೋಸ್ಕರ ಕಾದುಕೊಂಡಿರುವುದು.

(8) ಎಂಟನೆಯದಾಗಿ ವ್ಯವಸಾಯಕ್ಕೆ ಉಪಯೋಗಿಸುವ ಯಂತ್ರಗಳು ಮತ್ತು ಎಣ್ಣೆ ವಗೈರೆ ಬೆಲೆಗಳು ದಿನೇ ದಿನೇ ಏರುತ್ತಾ ಇರುವುದು.

(9) ಒಂಭತ್ತನೆಯದಾಗಿ ರೈತರು ಬೆಳೆಯುತಕ್ಕಂಥಾ ಪದಾರ್ಥಗಳಿಗೆ ನಿಗದಿಯಾದ ಬೆಲೆಗಳಿಲ್ಲದೆ ಹೆಚ್ಚು ಕಡಿಮೆಯಾಗುತ್ತಾ ಇರುವುದು.

ಇಂಥಾ ತೊಂದರೆಗಳು ರೈತರಿಗೆ ಇರುವುದರಿಂದ ಈ ನಮ್ಮ ದೇಶದಲ್ಲಿ ವ್ಯವಸಾಯ ಹಿಂದೆ ಬೀಳುತಲ್ಲಿ ಇದೆ. ಈ ರೀತಿಯಾಗಿ ಮುಂದುವರೆದರೆ ನಮ್ಮ ದೇಶದಲ್ಲಿ ಆಹಾರ ಅಭಾವ ನೀಗಲು ಸಾಧ್ಯವಿಲ್ಲವಾದುದರಿಂದ ನಮ್ಮ ಸರ್ಕಾರ ವ್ಯವಸಾಯಕ್ಕೆ ಹೆಚ್ಚಾಗಿ ಗಮನ ಕೊಡಬೇಕಾದ್ದು ಸಹಜವಾಗಿರುವುದರಿಂದ ಸರ್ಕಾರದವರು ಕೃಷಿ ಕಡೆ ಹೆಚ್ಚು ಗಮನಗೊಡಬೇಕೆಂದು ತಮ್ಮ ಮೂಲಕ ಪ್ರಾರ್ಥಿಸುತ್ತೇನೆ.

ಮಾನ್ಯ ಸಭಾಧ್ಯಕ್ಷಿಣಿಯವರೇ, ಈ ಸಂದರ್ಭದಲ್ಲಿ ನಾನು ಒಬ್ಬ ಜಿರಾಯ್ತುದಾರನಾಗಿದ್ದು ನನ್ನ ಅನುಭವಕ್ಕೆ ಬಂದಿರತಕ್ಕಂಥಾ ರೈತನ ಕುಂದುಕೊರತೆಗಳು ಏನು ಇವೆ ಎಂಬುದು ಆ ಬಗ್ಗೆ ನಿವಾರಣೆ ಆಗಲು ಕೆಲವು ಸಲಹೆಗಳನ್ನು ತಮ್ಮ ಮೂಲಕ ಈ ಸಭೆಯ ಗಮನಕ್ಕೆ ತರಲು ಇಚ್ಛಿಸುತ್ತೇನೆ.

ಅದು ಯಾವುವೆಂದರೆ —

(1) ರೈತನು ಬೆಳೆದ ಬೆಳೆಗಳಿಗೆ ಇನ್‌ಷೂರೆನ್ಸ್ ಮಾಡಿಸುವುದು.—

(2) ರೈತ ಬೆಳೆಯುತಕ್ಕ ಬೆಳೆಗಳಿಗೆ ಎಲ್ಲಾ ವ್ಯವಸಾಯದ ಖರ್ಚುಗಳನ್ನು ಕೂಡ ಗಮನದಲ್ಲಿಟ್ಟುಕೊಂಡು ಒಂದು ನಿಗದಿಯಾದ ಬೆಲೆಯನ್ನು ನಿರ್ಧರಿಸುವುದು

(3) ಸಣ್ಣ ಕೆರೆಗಳಾಗಲಿ ದೊಡ್ಡ ಕೆರೆಗಳಾಗಲಿ ಕೆರೆಗಳು ಹೂತು ಹೋಗದಂತೆ ಕೆರೆಗಳ ಕಾಂಟೋರು ಲೈನಿನಲ್ಲಿ ಇರತಕ್ಕ ಹಿಡುವಳಿದಾರರು ಗಿಡಗಳು ಬೆಳೆಯಿಸಲು ಹಕ್ಕುದಾರಿ ಕೊಟ್ಟು ಪ್ರೋತ್ಸಾಹಿಸಿದರೆ ಇದರಿಂದ ವೃಕ್ಷಸಂಪತ್ತು ಹೆಚ್ಚಿ ಮಳೆಗಳು ಚೆನ್ನಾಗಿ ಬಂದು ಕೆರೆಗಳಿಗೆ ನೀರು ಬರಲು ಅನುಕೂಲವಾಗುತ್ತದೆ.

(4) ಗೊಬ್ಬರದ ಬೆಲೆಗಳನ್ನು ಎರಡು ವರ್ಷಗಳ ಕೆಳಗೆ ಇದ್ದ ಬೆಳೆಗಳಿಗೆ ಇಳಿಸುವುದು.

(5) ಎಲೆಕ್ಟ್ರಿಕ್ ಛಾರ್ಜ್, ಗಣಿಗಳಿಗೂ ಮತ್ತು ಅಲ್ಯುಮಿನಿಯಂ ಫ್ಯಾಕ್ಟರಿಗಳಿಗೂ ಕೊಟ್ಟಿರುವ ರೇಟಿನ ಪ್ರಕಾರ ಮುಖ್ಯ ಆಹಾರವನ್ನು ಬೆಳೆಯುತಕ್ಕ ರೈತರಿಗೆ ಪಂಪುಸೆಟ್ಟು ವಗೈರೆಗಳಿಗೆ ಕೊಡುವುದರಿಂದ ಹೆಚ್ಚಿಗೆ ಬೆಳೆ ಬೆಳೆಯಲು ಅವಕಾಶವಾಗುತ್ತೆ. ಅವರಿಗೆ ಯೂನಿಟ್ಟಿಗೆ 3-4 ಪೈಸೇ ಛಾರ್ಜು ಮಾಡುತ್ತಿದ್ದಾರೆ, ಅದೇ ರೀತಿ ರೈತರು ಬೆಳೆಯುತಕ್ಕಂಥಾ ಮುಖ್ಯವಾದ ಆಹಾರ ಪಧಾರ್ಥಗಳಿಗೂ ಹಾಕುವುದಕ್ಕೆ ಏರ್ಪಾಡು ಮಾಡಬೇಕೆಂದು ತಮ್ಮ ಮೂಲಕ ವಿನಂತಿ ಮಾಡಿಕೊಳ್ಳುತ್ತೇನೆ.

(6) ಡಿಮ್ಯಾಂಡ್ ಛಾರ್ಜ್ ತಿಂಗಳಿಗೆ ಒಂದು ಪಂಪುಸೆಟ್ಟಿಗೆ 10 ರೂಪಾಯಿ ಪ್ರಕಾರ ಹಾಕುತ್ತಿರುತ್ತಾರೆ ಇದು ಯಾವುದಕ್ಕಾಗಿ ರೈತನ ಮೇಲೆ ಹಾಕುತ್ತಾರೆಂಬುದು ಅರ್ಥವಾಗುತ್ತಾ ಇಲ್ಲ. ಬಾವಿಗಳಲ್ಲಿ ನೀರಿಲ್ಲದೇ ಇದ್ದು ತಿಂಗಳಿಗೆ 25 ಯೂನಿಟ್ ಕರೆಂಟ್ ಖರ್ಚಾಗಿದ್ದರೂ ಸಹ ಕನಿಷ್ಟಪಕ್ಷ 5 ಹೆಚ್ ಪಿ ಪಂಪಿಗೆ 25 ರಿಂದ 50 ರೂಪಾಯಿವರೆವಿಗೂ ಬಿಲ್ಲುಗಳು ಬರುತ್ತಿರುತ್ತೆ ಮತ್ತು ಕರೆಂಟ್ ಛಾರ್ಜ್ ಕಟ್ಟಲು ಒಂದು ದಿನ ನಿಧಾನವಾದರೆ 15 ಪರ್ಸೆಂಟ್ ಬಡ್ಡಿ ಮತ್ತು ಡಿಸ್‌ಕನೆಕ್ಷನ್ ಮತ್ತು ರೀಕನೆಕ್ಷನ್ ಮಾಡುವುದಕ್ಕೆ 10 ರೂಪಾಯಿಗಳನ್ನು ಹಾಕುತ್ತಿರುತ್ತಾರೆ. ಈ ರೀತಿ ಆದರೆ ರೈತ ಬೆಳೆ ಬೆಳೆಯಲು ಎಲ್ಲಿ ಮುಂದೆ ಬರತ್ತಾನೆ ರೈತನ ವಿಚಾರದಲ್ಲಿ ಈ ರೀತಿ ಕಠಿಣವಾಗಿ ನಡೆದರೆ ರೈತ ಹೋಗುವ ದಾರಿ ಯಾವುದು, ಇದನ್ನೆಲ್ಲಾ ಮಾನ್ಯ ಮುಖ್ಯ ಮಂತ್ರಿಗಳಿಗೆ ನಾವು ಪದೇ ಪದೇ ತಿಳಿಸುತ್ತಾ ಇದ್ದೇವೆ. ಇದನ್ನೆಲ್ಲಾ ತೆಗೆಯದ ಹೊರತು ಯಾವ ರೈತನೂ ಬೆಳೆ ಮಾಡುವುದಕ್ಕೆ ಮುಂದೆ ಬರುವುದಿಲ್ಲ. ಇದನ್ನು ಸರ್ಕಾರದವರು ಗಮನಿಸಬೇಕು.

(7) ಇನ್ನು ಇತ್ತೀಚೆಗೆ ಕೆಪಾಸಿಟರ್ ಅನ್ನು ಹಾಕಬೇಕೆಂದು ತಿಳಿಸಿ ಹಾಕದೇ ಇದ್ದವರಿಗೆ ಕರೆಂಟ್ ಛಾರ್ಜು ಖರ್ಚಾಗಿರುವುದರ ಮೇಲೆ 10 ಪರ್ಸೆಂಟ್ ಪೆನಾಲ್ಟಿ ಹಾಕುತ್ತಿರುತ್ತಾರೆ. ಈ ವಿಚಾರದಲ್ಲಿ ಮಾನ್ಯ ಮಂತ್ರಿಗಳಲ್ಲಿ ಎಷ್ಟು ಸಲ ಹೇಳಿಕೊಂಡರೂ ಕೂಡ ಅವರ ಮನಸ್ಸಿಗೆ ಬರಲಿಲ್ಲಾ. ಈಗ 5 ಹೆಚ್.ಪಿ ಗೆ ರಿಯಾಯಿತಿ ತೋರಿಸಿದ್ದಾರೆ. 10 ಹೆಚ್ ಪಿ.ಗೆ ಮೇಲೆ ಇರತಕ್ಕಂಥಾ ಪಂಪುಸೆಟ್ಟುಗಳಿಗೆ ರಿಯಾಯಿತಿ ಇಲ್ಲಾ. ಆದುದರಿಂದ ಈಗ 5 ಹೆಚ್.ಪಿ.ಗೆ ಕೊಟ್ಟಿರುವ ರಿಯಾಯಿತಿಯನ್ನು 10 ಹೆಚ್.ಪಿ.ಗೆ ಮೇಲೆ ಇರತಕ್ಕ ಪಂಪ್‌ಸೆಟ್ಟುಗಳಿಗೂ ಸಹ ಕೊಡಬೇಕೆಂದು ತಮ್ಮ ಮೂಲಕ ವಿನಂತಿ ಮಾಡಿಕೊಳ್ಳುತ್ತೇನೆ.

(8) ಕೆರೆಗಳು 2—3 ಸಲ ತುಂಬಿದರೂ ಸಹ ಒಂದು ಬೆಳೆಯೂ ಆಗುತ್ತಾ ಇಲ್ಲ. ಆ ಕೆರೆಗಳ ಕೆಳಗೆ ಬೆಳೆ ಆಗಬೇಕಾದರೆ ಬಾವಿಗಳು ಮಾಡಿಕೊಂಡು ಪಂಪುಗಳ ಮೂಲಕ ಬೆಳೆ ಆಗಿರುತ್ತೆ. ಅಂಥಾದ್ದರಲ್ಲಿ ಸಂಬಂಧಪಟ್ಟ ಅಧಿಕಾರಿಗಳಿಗೆ ಪೂರ್ತಿ ಬೆಳೆಗೆ ನೀರು ಕೊಟ್ಟರೆ ಮಾತ್ರ ವಾಟರ್ ರೇಟು ವಸೂಲು ಮಾಡಬೇಕು ನೀರು ಸಾಲದೇ ಹೋದರೆ ವಸೂಲು ಮಾಡಬಾರದು

ಎಂದು ಹೇಳಿದರೂ ಸಹ ವಸೂಲು ಮಾಡುತ್ತಾ ಇರುತ್ತಾರೆ. ಇದು ನ್ಯಾಯಸಮ್ಮತವಲ್ಲ. ಈ ಕೆರೆಗಳು ಹಳೇ ಕಾಲದಲ್ಲಿ ಕಟ್ಟಿರುವುದರಿಂದ ಇದಕ್ಕೆ ವಾಟರ್ ರೇಟು ಹಾಕುವುದನ್ನು ಬಿಟ್ಟು ಹೊಸದಾಗಿ ಕಟ್ಟುವ ಪ್ರಾಜೆಕ್ಟ್‌ಗಳಿಗೆ ಬೇಕಾದರೆ ಹಾಕಬಹುದು.

(9) ಇನ್ನು ಅಗ್ರಿಕಲ್ಚರಲ್ ಇನ್‌ಕಂಟ್ಯಾಕ್ಸ್ ವಿಚಾರ. ರೈತನಿಗೆ ಬೆಳೆ ಮಾಡಲು ಇರತಕ್ಕಂಥಾ ತೊಂದರೆಗಳನ್ನು ಅನುಭವಿಸಿ ಬೆಳೆ ಮಾಡುವುದೇ ಕಷ್ಟವಾಗಿರುವಾಗ ಅಗ್ರಿಕಲ್ಚರಲ್ ಇಂಕಂಟ್ಯಾಕ್ಸ್ ಆಫೀಸರುಗಳು ಬಂದು ನೋಟೀಸು ಕೊಡುತ್ತಾರೆ. ಹಾಗೆ ಕೊಟ್ಟ ತಕ್ಷಣ ಪಹಣಿ ಕಾಪಿಗಳಿಗೆ ನಂಬರ್ ಒಂದಕ್ಕೆ 0—50 ಪೈಸೇ ಸ್ಟ್ಯಾಂಪ್‌ಗೆ 0—0 ಪೈಸೇ, ಪಹಣಿ ಬರೆದುಕೊಡುವ ಛಾರ್ಜ್ ಇಷ್ಟು ಕೊಡುವುದೂ ಅಲ್ಲದೆ ಅದನ್ನು ಹವಣಿಸಬೇಕಾದರೆ ಬಹಳ ಕಷ್ಟ ಇದೆ. ಏತಕ್ಕೆಂದರೆ ಆ ಅಕೌಂಟೆಂಟ್‌ರವರು ಸರಿಯಾದ ಟೈಂಗೆ ಸಿಕ್ಕುವುದಿಲ್ಲ. ಒಂದು ವೇಳೆ ಅವರು ಊರು ಊರು ತಿರುಗಿ ಹಿಡಿದು ಆತನ ಹತ್ತಿರ ಕಾಪಿಗಳು ತಂದು ಹಾಜರುಪಡಿಸಿದರೂ ಸಹ ಆ ಆಫೀಸರುಗಳನ್ನು ತಾಲ್ಲೂಕಿನಲ್ಲೋ, ಡಿಸ್ಟ್ರಿಕ್ಟಿನಲ್ಲೋ, ತಮ್ಮ ಹಿಯರಿಂಗುಗಳನ್ನು ಹಾಕಿಕೊಂಡಿರುತ್ತಾರೆ, ಅಲ್ಲಿಗೆ ರೈತನು ಹೋಗಿ ಆತನು ಕೊಟ್ಟ ಲೆಕ್ಕಗಳನ್ನು ಒಪ್ಪಿಸಿದರೂ ಸಹ ಅವರು ಒಪ್ಪದೆ ಸಿಕ್ಕಾಪಟ್ಟೆ ಟ್ಯಾಕ್ಸ್‌ಗಳನ್ನು ಹಾಕುತ್ತಿದ್ದಾರೆ. ಇಂಥಾ ತೊಂದರೆಗಳನ್ನು ಪದೇ ಪದೇ ಮಾನ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಂಡರೂ ಕೂಡ ಏನೂ ಪ್ರಯೋಜನವಾಗುತ್ತಾ ಇಲ್ಲ. ಆದುದರಿಂದ ನಾನು ಈ ಸಂದರ್ಭದಲ್ಲಿ ಹೇಳುವುದೇನೆಂದರೆ ರೈತನ ಮತ್ತು ದೇಶದ ಹಿತದೃಷ್ಟಿಯಿಂದ ಈ ಅಗ್ರಿಕಲ್ಚರಲ್ ಇನ್‌ಕಂಟ್ಯಾಕ್ಸ್ ಅನ್ನು ಮನ್ನಾ ಮಾಡಿಬಿಡುವುದು ಒಳ್ಳೆಯದು. ಹಾಗೇನಾದರೂ ಒಂದು ವೇಳೆ ಹಾಕಬೇಕೆಂದರೆ 10 ಎಕರೆಗಿಂತ ಕಡಿಮೆ ಇರುವವರಿಗೆ ಬಿಟ್ಟುಬಿಟ್ಟು ಅದಕ್ಕಿಂತ ಮೇಲ್ಪಟ್ಟು ಇರುವವರಿಗೆ, ಹೆಚ್ಚಿಗೆ ಸೀಲಿಂಗ್ ಇರುವವರಿವಿಗೂ ಹಾಕಿ. ಮತ್ತು ಈ ಬಗ್ಗೆ ಇನ್ನೊಂದು ವಿಷಯ ಹೇಳುವುದೇನೆಂದರೆ ಆ ರೈತರುಗಳು ಆಫೀಸಿಗೆ ವೃಥಾ ತಿರುಗುವುದು. ಮತ್ತು ಪಹಣಿ ವಗೈರೆ ತೆಗೆಯಲು ಆಗತಕ್ಕ ಖರ್ಚುಗಳು ವಗೈರೆ ತೊಂದರೆಗಳು ನಿವಾರಣೆಯಾಗುವ ಹಾಗೆ ಎಕರೆ ಒಂದಕ್ಕೆ ಕಂದಾಯದ ಎರಡರಷ್ಟು ಇನ್‌ಕಂಟ್ಯಾಕ್ಸ್ ಅಂತ ಹಾಕಿ ರೆವಿನ್ಯೂ ಡಿಪಾರ್ಟ್‌ಮೆಂಟಿನವರೇ ಕಂದಾಯದ ಜೊತೆಯಲ್ಲಿ ವಸೂಲ್ಮಾಡುವುದರಿಂದ ರೈತರಿಗೆ ಆಗತಕ್ಕಂಥಾ ತೊಂದರೆಗಳು ಮತ್ತು ಕಾಲಹರಣ ತಪ್ಪುವುದಲ್ಲದೆ ಸರ್ಕಾರದಿಂದ ಖರ್ಚಾಗುವ ಸಿಬ್ಬಂದಿ ವಗೈರೆ ಖರ್ಚುಗಳು ಸಹ ಉಳಿಯುವುದು, ಇದಕ್ಕೆ ಬೇರೆ ಡಿಪಾರ್ಟ್‌ಮೆಂಟ್ ಬೇಕಾಗುವುದಿಲ್ಲ. ರೈತರಿಗೆ ತೊಂದರೆಗಳೂ ಸಹ ತಪ್ಪುತ್ತದೆ. ಈ ವಿಚಾರಗಳನ್ನು ಮಾನ್ಯ ಮಂತ್ರಿಗಳು ಪರಿಶೀಲನೆ ಮಾಡಿ ಈ ಡಿಪಾರ್ಟ್‌ಮೆಂಟ್ ಅನ್ನೇ ತೆಗೆಯುವುದು ಉತ್ತಮ ಎಂದು ಹೇಳುತ್ತೇನೆ.

(10) ಮಾನ್ಯ ಅಧ್ಯಕ್ಷರೇ, ಹಿಂದೆ ರೈತರುಗಳು ಎತ್ತುಗಳ ಸಹಾಯದಿಂದ ಗಾಡಿ, ನೇಗಿಲು ನಡೆಸುತ್ತಾ ಇದ್ದುದು ಸರಿಯಷ್ಟೆ. ಆದರೆ ಈಗಿನ ಕಾಲದಲ್ಲಿ ಅದಕ್ಕೆ ಬದಲಾಗಿ ಟ್ರಾಕ್ಟರುಗಳನ್ನು ಉಪಯೋಗಿಸುತ್ತಿದ್ದಾರೆ. ಎತ್ತುಗಳಿಂದ ಏನು ಕೆಲಸ ಮಾಡುತ್ತಿದ್ದಾರೋ ಆ ಕೆಲಸಗಳನ್ನು ಟ್ರಾಕ್ಟರುಗಳ ಸಹಾಯದಿಂದ ಈಗ ಮಾಡುವುದರಿಂದ ಟ್ರಾಕ್ಟರುಗಳನ್ನು ಈಗ ರೈತರುಗಳು ಕೊಂಡುಕೊಂಡಿದ್ದಾರೆ. ಆದರೆ ಈಗ ಏನಾಗಿದೆ ಎಂದರೆ ಆರ್.ಟಿ.ಓ. ಆಫೀಸಿನವರು ರೈತರು ಬೆಳೆದ ಧಾನ್ಯಗಳೇ ಆಗಲಿ ತರಕಾರಿಗಳೇ ಆಗಲಿ ಪೇಟೆಗೆ ಟ್ರಾಕ್ಟರುಗಳಲ್ಲಿ ತೆಗೆದುಕೊಂಡು ಬರಲು ಬಿಡುತ್ತಾ ಇಲ್ಲ. ಸರಕುಗಳನ್ನು ಸಾಗಿಸಲು ಎತ್ತುಗಳನ್ನು ಉಪಯೋಗಿಸಬೇಕೋ ಅಥವಾ ಟ್ರಾಕ್ಟರನ್ನು ಉಪಯೋಗಿಸಬೇಕೋ ಗೊತ್ತಿಲ್ಲ. ಇಂಥಾ ತೊಂದರೆಗಳನ್ನು ರೈತರು ಇವೊತ್ತಿನ ದಿವಸ ಅನುಭವಿಸಬೇಕಾಗಿದೆ. ಈ ಬಗ್ಗೆ ಸರ್ಕಾರದವರು ಯೋಚನೆ ಮಾಡಬೇಕು ಎಂದು ಪ್ರಾರ್ಥಿಸುತ್ತೇನೆ.

(11) ದೇಶದಲ್ಲಿ ಆಹಾರ ಅಭಾವ ನೀಗಬೇಕಾದರೆ ಮುಖ್ಯವಾಗಿ ವ್ಯವಸಾಯವನ್ನು ಕೈಗಾರಿಕೆಗಳಿಗಿಂತ ಹೆಚ್ಚಾಗಿ ಗಮನ ಕೊಟ್ಟು ಕಷ್ಟಪಟ್ಟು ಪಿರಾಯ್ತು ಮಾಡುವ ಜನ ಕೆಲಸ ಬಿಟ್ಟು ಬಿಟ್ಟು ದಿನಬೆಳಗಾದರೆ ಉದ್ಯೋಗಗಳನ್ನು ಕೇಳಿಕೊಂಡು ಬರುವವರಿಗೆ ಊರಿಗೆ ಒಂದೇ ವ್ಯವಸಾಯ ಮಾಡುವ ಹಾಗೆ ಮಾಡಿ. ಇದರಿಂದ ನಿರುದ್ಯೋಗ ನಿವಾರಿಸುವುದೇ ಅಲ್ಲದೆ ದೇಶದ ಆಹಾರ ಅಭಾವ ಪರಿಹಾರ ಮಾಡಿದಂತಾಗುತ್ತದೆ. ಈಗ ನಾನು ಹೇಳಿರತಕ್ಕಂಥ ಕಾರಣ

ಗಳನ್ನು ನಮ್ಮ ಸರ್ಕಾರದವರು ಪರಿಶೀಲನೆ ಮಾಡತಕ್ಕ ಕ್ರಮಗಳನ್ನು ತೆಗೆದು ಕೊಂಡು ಮುಂದುವರೆದರೆ ಬೆಳೆಯುತಕ್ಕಂಥಾ ರೈತರಿಗೆ ಸಹಾಯವಾಗುವುದಲ್ಲದೆ ದೇಶಕ್ಕೆ ಬೇಕಾದಂಥಾ ಆಹಾರ ಅಭಾವವನ್ನೂ ಕೂಡ ನೀಗಬಹುದೆಂದು ಭಾವಿಸಿ ಈ ಮೂಲಕ ವಿನಂತಿ ಮಾಡುತ್ತಾ ತಮ್ಮ ಮೂಲಕ ಸರ್ಕಾರದ ಗಮನವನ್ನು ಸೆಳೆಯುತ್ತೇನೆ. ಕೊನೆಯದಾಗಿ ಅಧ್ಯಕ್ಷರು ನನಗೆ ನಾಲ್ಕು ಮಾತುಗಳನ್ನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ ನನ್ನ ಭಾಷಣವನ್ನು ಮುಕ್ತಾಯ ಮಾಡುತ್ತೇನೆ.

† ಶ್ರೀ ಕೋಣಂದೂರು ಲಿಂಗಪ್ಪ (ತೀರ್ಥಹಳ್ಳಿ).—ಮಾನ್ಯ ಸಭಾಧ್ಯಕ್ಷರೇ, ಮಾನ್ಯ 3 ಜನ ಸಚಿವರು ಮಂಡಿಸಿರತಕ್ಕಂಥಾ ಡಿಮ್ಯಾಂಡ್ ನಂಬರ್ಸ್ 39, 42 40, 45, 43 ಇವುಗಳನ್ನು ವಿರೋಧಿಸುತ್ತಾ ನಾಲ್ಕು ಮಾತುಗಳನ್ನು ಆಡುವುದಕ್ಕೆ ಬಯಸುತ್ತೇನೆ.

ಮೊಟ್ಟಮೊದಲನೆಯದಾಗಿ ನಮ್ಮ ಬೇಸಾಯಕ್ಕೆ ಸಂಬಂಧಪಟ್ಟಂತೆ ಇರುವ ಮಾನ್ಯ ಸಚಿವರಾದ ಶ್ರೀಮಾನ್ ಚಿಕ್ಕೇಗೌಡರು ಈಪೊತ್ತು ನಾವು ಕೊಟ್ಟಿರುವ ಹಣವನ್ನು ಕ್ಯಾಷ್ ಮಾಡಿಸುತ್ತಾರೋ ಇಲ್ಲವೋ ನನಗೆ ಗೊತ್ತಿಲ್ಲ. ಏತಕ್ಕೆಂದರೆ ಅವರು ಒಂದು ಹೆಜ್ಜೆ ಈ ಕಡೆ ಇನ್ನೊಂದು ಹೆಜ್ಜೆ ಇನ್ನೊಂದು ಕಡೆ ಇಟ್ಟಿರುವುದರಿಂದ ಸರ್ಕಾರ ಯಾವ ಮಟ್ಟದಲ್ಲಿ ಇದೆ, ಅನ್ನುವುದಕ್ಕೆ ನಾನ ಈ ಮಾತನ್ನು ಹೇಳುತ್ತಿದ್ದೇನೆ. ಇನ್ನು ನಾನು ಇದರ ಬಗ್ಗೆ ವಿವರವಾಗಿ ಹೇಳಲಿಕ್ಕೆ ಹೋಗುವುದಿಲ್ಲ ಇದರಲ್ಲಿ ಒಂದು ಮಾತು ಮಾತ್ರ ಸರ್ಕಾರದವರು ಒಪ್ಪುತ್ತಾರೆ ಎಂದು ನಾನು ಭಾವಿಸುತ್ತೇನೆ. ಈಪೊತ್ತು ಕೇಂದ್ರದಲ್ಲಿ ಬಂದಿರತಕ್ಕಂಥಾ ನಮ್ಮ ಜನತಾ ಸರ್ಕಾರ ಬೇಸಾಯಕ್ಕೆ ಸಂಬಂಧಪಟ್ಟಂತೆ ಏನು ಇದೆ ಅದು ನಮ್ಮ ಬೇಸಾಯಕ್ಕೆ ಆದ್ಯತೆ ಕೊಟ್ಟಿರುವುದರಿಂದ ಬಹುಶಃ ನಮ್ಮ ಕರ್ನಾಟಕ ಸರ್ಕಾರ ಅದನ್ನು ಅಭಿನಂದಿಸುತ್ತದೆ ಹಾಗೂ ಮೆಚ್ಚುತ್ತದೆ ಎಂದು ನಾನು ಭಾವಿಸುತ್ತೇನೆ. ಏತಕ್ಕೆಂದರೆ ದೇಶದಲ್ಲಿ 30 ವರ್ಷಗಳಿಂದಲೂ ಈ ಬೇಸಾಯದ ಬಗ್ಗೆ ಯಾವುದು ರೈತನ ಬೆನ್ನೆಲುಬು ಎಂದು ಹೇಳುತ್ತಿದ್ದರೋ ಆ ಬೇಸಾಯದ ಅಭಿವೃದ್ಧಿಗೆ ಬೇಕಾದಷ್ಟು ಹಣ ಸಹಾಯ ಮಾಡಬೇಕು ಎಂದು ಅವರು ಆದ್ಯತೆ ಕೊಟ್ಟಿದ್ದಾರೆ ಎಂದು ಹೇಳಬಯಸುತ್ತೇನೆ.

ಶ್ರೀ ಡಿ ದೇವರಾಜ್ ಅರಸ್—ಈಗಲಾದರೂ ಆ ಸರ್ಕಾರವನ್ನು ಹೊಗಳುವಷ್ಟು ಬಂತಲ್ಲಾ ಅದಕ್ಕೆ ನಾನು ಸಂತೋಷಪಡುತ್ತೇನೆ.

ಶ್ರೀ ಕೋಣಂದೂರು ಲಿಂಗಪ್ಪ.—ನಮ್ಮ ಆ ಸರ್ಕಾರವನ್ನು ಹೊಗಳುವುದಷ್ಟೇ ಅಲ್ಲದೆ, ಚ ಏನು ಮಾಡುತ್ತೇವೆ ಅಂತ ಮಾಡಿ ತೋರಿಸುತ್ತೇವೆ. ಹಾಗೆಯೇ ನಿಮ್ಮ ಸರ್ಕಾರ ಯಾವುದಾದರೂ ಒಳ್ಳೆಯ ಕೆಲಸಗಳನ್ನು ಮಾಡಿದ್ದರೆ ನಿಮ್ಮ ಸರ್ಕಾರವನ್ನೂ ಸಹ ಹೊಗಳುತ್ತೇವೆ, ಮೆಚ್ಚುತ್ತೇವೆ. ಉದಾಹರಣೆ ಹೇಳುವುದಾದರೆ, ರಾಜ್ಯಕ್ಕೆ ಕರ್ನಾಟಕ ಅಂತ ಹೆಸರಿಟ್ಟು ಒಳ್ಳೆಯ ಕೆಲಸ ಮಾಡಿದ್ದೀರಿ ಹಾಗೆಯೇ ರಾಜ್ಯದಲ್ಲಿ ಮಲ ಹೊರುವ ಪದ್ಧತಿಯನ್ನು ನಿಲ್ಲಿಸಿದ್ದೀರಿ, ಅದು ಒಳ್ಳೆಯ ಕೆಲಸವಲ್ಲವೇ, ಮತ್ತು ರಾಜ್ಯದಲ್ಲಿ ಭೂ ಸುಧಾರಣೆ ತಂದದ್ದು ಅದು ಒಳ್ಳೆಯ ಕೆಲಸವಲ್ಲವೇ ? ಇಂಥಾ ಒಳ್ಳೆಯ ಕೆಲಸಗಳನ್ನು ನಾವು ಮೆಚ್ಚುವುದೂ ಅಲ್ಲದೆ ಪ್ರಶಂಸೆಯೂ ಸಹ ಮಾಡುತ್ತೇವೆ. ಇದರ ಬಗ್ಗೆ ಭಿನ್ನಾಭಿಪ್ರಾಯ ಏನೂ ಇಲ್ಲ.

ಆದರೆ ಮೂಲಭೂತವಾಗಿ ಯಾವುದನ್ನು ಮಾಡಬೇಕಾಗಿತ್ತೋ ಅದನ್ನು ಮಾಡಲಿಲ್ಲ. ಮುಖ್ಯವಾಗಿ ವ್ಯವಸಾಯ ಈ ಇಲಾಖೆಗೆ ಸಂಬಂಧಪಟ್ಟಂತೆ ಸಣ್ಣ ಬೇಸಾಯಗಾರರು, ಸಣ್ಣ ಹಿಡುವಳಿದಾರರು ಯಾರಿದ್ದಾರೆ ಅವರ ಉದ್ಧಾರಕ್ಕೆ ಬೇಕಾಗುವಂತಹ ಸಹಾಯವನ್ನು ವ್ಯವಸಾಯ ಇಲಾಖೆಯ ಮೂಲಕ ಮಾಡಿಸಬೇಕೆಂದು ಹೇಳುತ್ತೇನೆ. ಈ ಇಲಾಖೆಯ ಅಭಿವೃದ್ಧಿಯಾಗಬೇಕಾದರೆ ರೈತರ ಉದ್ಧಾರ ಮೊದಲು ಆಗಬೇಕು. ಈ ಒಂದು ಅಪೇಕ್ಷೆ ವ್ಯವಸಾಯ ಮಂತ್ರಿಗಳಿಗೆ ಇದ್ದರೆ ಅವರು ಮಂತ್ರಿಮಂಡಲದಲ್ಲಿ ಹೋರಾಟ ಮಾಡಿ 6 ಎಕರೆಗಳಿಗಿಂತ ಕಡಿಮೆ ಜಮೀನು ಯಾರಿಗಿದೆ, ಅವರಿಗೆಲ್ಲಾ ಯಾವುದೇ ತರಹದ ಕಂದಾಯವನ್ನು ವಿಧಿಸದಂತೆ ನೋಡಿಕೊಂಡರೆ ಮತ್ತು ಇದಕ್ಕೆ ಪ್ರಯತ್ನ ಮಾಡಿದರೆ ಇವರ ಪರಿಸ್ಥಿತಿ ಒಂದು ರೂಪಕ್ಕೆ ಬರಬಹುದೆಂದು ತಿಳಿದು ಕೊಂಡಿದ್ದೇನೆ.

ಇನ್ನು ಈ ವ್ಯವಸಾಯ ಇಲಾಖೆಗೆ ಸಂಬಂಧಪಟ್ಟಂತೆ ಎಷ್ಟು ಬೋರ್ಡುಗಳು, ಎಷ್ಟು ಮಂಡಲಿಗಳು ಎಷ್ಟು ಸಮಿತಿಗಳು, ಎಷ್ಟು ಜನ ಅಧ್ಯಕ್ಷರುಗಳಿದ್ದಾರೆಂಬುದರ ಲೆಕ್ಕಾಚಾರವೇ ನನಗೆ ಗೊತ್ತಿಲ್ಲ. ಮಾನ್ಯ ಕೃಷಿ ಮಂತ್ರಿಗಳು ತಮ್ಮ ಉತ್ತರದಲ್ಲಿ ಇವುಗಳ ವಿವರ ಕೊಡುತ್ತಾರೆಂದು ನಾನು ತಿಳಿಯುತ್ತೇನೆ. ಈ ಬೋರ್ಡುಗಳು ಮತ್ತು ಸಮಿತಿಗಳಲ್ಲಿ ಯಾರು ಯಾರು ಇರುತ್ತಾರೆಂದರೆ, ಮಂತ್ರಿಗಳು, ಮಂತ್ರಿಗಳನ್ನು ಬಿಟ್ಟರೆ ಈ ಮಂತ್ರಿಗಳ ಮಕ್ಕಳು, ಮಂತ್ರಿಗಳ ಸಂಬಂಧಿಕರು ಇಲ್ಲವೇ ಕಾಂಗ್ರೆಸ್ ಶಾಸಕರು ಇರುತ್ತಾರೆ. ಈ ದೇಶದ ಸ್ವಾತಂತ್ರ್ಯಕ್ಕೋಸ್ಕರ ತಮ್ಮನ್ನು ತಾವೇ ಅರ್ಪಣೆ ಮಾಡಿಕೊಂಡಂತಹ ಜನರಿದ್ದರೂ ಸಹ ಅವರನ್ನು ಬಿಟ್ಟು ತಮಗೆ ಬೇಕಾದವರನ್ನೇ ಇವುಗಳಿಗೆ ನೇಮಕ ಮಾಡುತ್ತಿದ್ದಾರೆ. ಇದಕ್ಕೆ ಉದಾಹರಣೆ ಕೊಡಬೇಕೆಂದರೆ, ಸೀಡ್ ಕಾರ್ಪೊರೇಷನ್ನಿನ ಅಧ್ಯಕ್ಷರು ಮಾನ್ಯ ಆರೋಗ್ಯ ಮಂತ್ರಿಗಳ ಸುಪುತ್ರರೇ ಆಗಿದ್ದಾರೆ. ಇದು ಸರಿಯೇ ? ಇದು ನ್ಯಾಯವೇ ? ಇನ್ನು ಮಾನ್ಯ ಚೆನ್ನಬಸಪ್ಪನವರ ಮೊಮ್ಮಕ್ಕಳು ಎಲ್ಲೆಲ್ಲಿ ಏನೇನು ಆಗಿದ್ದಾರೋ ನನಗೆ ಗೊತ್ತಿಲ್ಲ. ಈ ಒಂದು ಅವ್ಯವಹಾರ ಏನು ನಡೆದಿದೆ. ಇದನ್ನೆಲ್ಲಾ ರಿಪೇರಿ ಮಾಡುವ ಕಾಲ ಬಂದಿದೆ. ಈಗ ಇವರಿಗೆ ದೊಡ್ಡ ಬುದ್ಧಿ ಬಂದಿರುವುದರಿಂದ, ಇದಕ್ಕೆಲ್ಲಾ ಗಮನಕೊಟ್ಟು ಇದನ್ನೆಲ್ಲಾ ರಿಪೇರಿ ಮಾಡುತ್ತಾರೆಂದು ನಾನು ಭಾವಿಸುತ್ತೇನೆ. ಮಾನ್ಯ ನಾಯಿಡು ಅವರು ಮತ್ತು ಮಾನ್ಯ ತಿಮ್ಮಪ್ಪನವರು ಹೇಳಿದಂತೆ ಈ ಕೃಷಿ ಸಹಾಯಕರ ಅಗತ್ಯವಾದಂಥ ಬೇಡಿಕೆಗಳು ಏನಿವೆ, ಅವುಗಳನ್ನು ಈಡೇರಿಸಬೇಕು. ಅವರು ತಮಗೆ ಕೊಟ್ಟಿರುವ ಮನವಿಯಲ್ಲಿ ಹೇಳಿರುವಂತೆ ಅವರಿಗೆ ತರಬೇತಿ ಸಮಯದಲ್ಲಿ ಬೇಕಾಗುವಂತಹ ಸೌಲಭ್ಯಗಳನ್ನೆಲ್ಲಾ ಒದಗಿಸಿಕೊಡಬೇಕು. ನನ್ನ ಒಂದು ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ವೆಸ್ಟರ್ನ್ ಗಾಟ್ಸ್ ಸ್ಕೀಮ್ ಎಂದು ಇದೆ. ಈ ಒಂದು ಯೋಜನೆಯ ಕೆಲಸ ತ್ವರಿತವಾಗಿ ಆಗಬೇಕು ಮತ್ತು ಅಗ್ರಿಕಲ್ಚರಲ್ ಪೈಲಟ್ ಪ್ರಾಜೆಕ್ಟ್ ಸ್ಕೀಮ್ ಕೆಳಗೆ ಸಹ ನಮ್ಮ ಭಾಗದಲ್ಲಿ ಕೆಲಸ ತ್ವರಿತವಾಗಿ ಆಗಬೇಕು. ಒಳ್ಳೆಯ ಅಧಿಕಾರಿಗಳಿದ್ದಾರೆ. ಇವರ ಒಂದು ಸಹಾಯದಿಂದ ಆಗಬೇಕಾದಂಥ ಕೆಲಸವನ್ನು ಜಾಗ್ರತೆ ಮಾಡಿ ಮುಗಿಸಬೇಕೆಂದು ಹೇಳುತ್ತೇನೆ.

ಇನ್ನು ವ್ಯವಸಾಯ ವಿಶ್ವವಿದ್ಯಾನಿಲಯದ ಬಗ್ಗೆ ನಾನು ಕಳೆದ ನಾಲ್ಕೈದು ವರ್ಷಗಳಿಂದ ಸತತವಾಗಿ ಒಂದು ವಿಷಯವನ್ನು ಹೇಳುತ್ತಿದ್ದೇನೆ. ಅದರ ಕಡೆ ಇನ್ನೂ ಗಮನ ಕೊಟ್ಟಿಲ್ಲ. ಅವರು ಇನ್ನೂ ಇಂಗ್ಲೀಷ್‌ನಲ್ಲಿಯೇ ಬೇಸಾಯ ಮಾಡುತ್ತಿದ್ದಾರೆ. ಕನ್ನಡದಲ್ಲಿ ಮಾಡುತ್ತಿಲ್ಲ, ನಮ್ಮ ಕರ್ನಾಟಕ ರಾಜ್ಯದ ಕನ್ನಡದ ರೈತರಿಗೆ ಸುಲಭವಾಗಿ ಅರ್ಥವಾಗುವಂತಹ ರೀತಿಯಲ್ಲಿ ಒಂದೊಂದು ವಿಷಯಕ್ಕೆ ಸಂಬಂಧಪಟ್ಟಂತೆ ಒಂದೊಂದು ಪುಸ್ತಕವನ್ನು ಕನ್ನಡದಲ್ಲಿಯೇ ಅಚ್ಚು ಹಾಕಿಸಿ, ಅದನ್ನು ಹಳ್ಳಿಹಳ್ಳಿಗೂ ಒದಗಿಸುವುದರ ಮೂಲಕ ಪ್ರಚಾರ ಮಾಡಬೇಕೆಂದು ಹೇಳುತ್ತಲೇ ಇದ್ದೇನೆ. ಆದರೆ ಇದು ಇನ್ನೂ ಕಾರ್ಯರೂಪಕ್ಕೆ ಬಂದಿಲ್ಲ. ಈಗ ಗ್ರಂಥ ರೂಪದಲ್ಲಿ ಪುಸ್ತಕಗಳನ್ನು ಬರೆಸುತ್ತಿದ್ದಾರೆ. ಇದು ರೈತರಿಗೆ ಅರ್ಥವಾಗುವುದಿಲ್ಲ. ಪಿ ಎಚ್ ಡಿ ತರಹ ಥಿಸಿಸ್ ಬರೆಸುತ್ತಿದ್ದಾರೆ. ಇದರ ಬದಲು ಬೀಜಗಳನ್ನು ಯಾವ ರೀತಿ ಉಪಯೋಗ ಮಾಡಬೇಕು, ಔಷಧಗಳನ್ನು ಯಾವ ರೀತಿ ಉಪಯೋಗ ಮಾಡಬೇಕು, ಕ್ರಿಮಿಕೀಟಗಳನ್ನು ನಾಶ ಮಾಡುವುದು ಹೇಗೆ ಎಂಬ ಬಗ್ಗೆ ಪಾಂಪ್ಲೆಟ್ಟನ್ನು ತಯಾರಿಸಿ. ಅಂದರೆ ಸಣ್ಣ ಸಣ್ಣ ಪುಸ್ತಕಗಳ ರೂಪದಲ್ಲಿ ಅಚ್ಚು ಹಾಕಿಸಿ ಹಳ್ಳಿಹಳ್ಳಿಗೂ ಒದಗಿಸಬೇಕು.

ಶ್ರೀ ಎನ್. ಚಿಕ್ಕೇಗೌಡ.—ಈ ಕೆಲಸವನ್ನು ನಾವು ಈಗಾಗಲೇ ಮಾಡುತ್ತಿದ್ದೇವೆ. ಎಲ್ಲ ಕಡೆಯೂ ರೈತರಿಗೆ ತಿಳಿವಳಿಕೆಯನ್ನು ಕೊಡುತ್ತಿದ್ದೇವೆ.

ಶ್ರೀ ಕೋಣಂದೂರು ಲಿಂಗಪ್ಪ.—ನಮ್ಮ ಕೋಣಂದೂರಿಗೆ ಇನ್ನೂ ಬಂದಿಲ್ಲ. ಅಲ್ಲಿನ ರೈತರಿಗೆ ಯಾವ ತಿಳಿವಳಿಕೆಯನ್ನು ಕೊಟ್ಟಿಲ್ಲ.

ಇನ್ನು ಮೀನುಗಾರಿಕೆಯ ಬಗ್ಗೆ ನಾನು ಹೆಚ್ಚು ಹೇಳುವುದಿಲ್ಲ. ಇದಕ್ಕೆ ಸಂಬಂಧಪಟ್ಟ ಮಾನ್ಯ ಮಂತ್ರಿಗಳು ಇಲ್ಲಿಯವರೆಗೆ ಅರ್ಧ ಮಂತ್ರಿಗಳಾಗಿದ್ದರು. ಈಗ ಪೂರ್ತಿ ಮಂತ್ರಿಯಾಗಿ ಬಡ್ತಿ ಹೊಂದಿದ್ದಾರೆ. ಒಂದು ವಿಪರ್ಯಾಸದ ಸಂಗತಿಯೆಂದರೆ ಇವರು ಮಳೆ ಹೆಚ್ಚಾಗಿಲ್ಲದ ಕಡೆಗಳಲ್ಲಿ ಮೀನನ್ನು ಬೆಳೆಸುತ್ತಿದ್ದಾರೆ. ಬಿಜಾಪುರದಲ್ಲಿ ಅಂತರಿಕ್ಷದಲ್ಲಿ ಮೀನನ್ನು ಬೆಳೆಸುತ್ತಿದ್ದಾರೆ,

ನಮ್ಮ ವೆಸ್ಟ್ರನ್‌ಘಾಟ್‌ನಲ್ಲಿ ಮತ್ತು ಒಳನಾಡಿನಲ್ಲಿ ಮೀನನ್ನು ಬೆಳೆಸುವುದಕ್ಕೆ ಬೇಕಾದಷ್ಟು ಅವಕಾಶವಿದೆ. ನಮ್ಮ ಮಲೆನಾಡಿನಲ್ಲಿ ಅನೇಕ ಹಳ್ಳಕೊಳ್ಳಗಳು, ನದಿಗಳು, ಹೊಳೆಗಳು, ಕೆರೆಕಟ್ಟೆಗಳು ಬೇಕಾದಷ್ಟು ಇವೆ ಇಂತಹ ಕಡೆಗಳಲ್ಲಿ ಮೀನನ್ನು ಬೆಳೆಸಲು ಹೆಚ್ಚಿನ ಆದ್ಯತೆ ಕೊಡಬೇಕು.

ಶ್ರೀ ಕೆ. ಟಿ ರಾಥೋಡ್.—ಅವುಗಳು ಸಾಕಷ್ಟು ಇಲ್ಲದಿರುವ ಕಡೆಯೂ ಸಹ ಮೀನನ್ನು ಬೆಳೆಸಲು ಆದ್ಯತೆ ಕೊಡಬೇಕಾಗುತ್ತದೆ

ಶ್ರೀ ಕೋಣಂದೂರು ಲಿಂಗಪ್ಪ.—ಇವರು ಮರುಭೂಮಿಯಲ್ಲಿ ನೀರನ್ನು ಹುಡುಕತಕ್ಕಂಥ ಸಚಿವರಾಗಿದ್ದಾರೆ. ಎಲ್ಲಿ ನೀರಿನ ಅನುಕೂಲ ಸಾಕಷ್ಟು ಇದೆಯೋ ಅಂತಹ ಕಡೆಗಳಲ್ಲಿ ಮೀನನ್ನು ಬೆಳೆಸಲು ಆದ್ಯತೆ ಕೊಡಬೇಕೇ ಹೊರತು, ಪುಟ್ಟಪರ್ತಿ ಸಾಯಿಬಾಬಾ ಅವರಂತೆ ಮಾಯಾ ಬಜಾರ್ ಮಾಡುವುದಕ್ಕೆ ಹೊರಟರೆ ಅದಕ್ಕೆ ನನ್ನ ಅಭ್ಯಂತರವೇನೂ ಇಲ್ಲ. ಅದರ ಪರೀಕ್ಷೆ ನಾಳೆ ಆಗುತ್ತದೆ. ಸಾಕಷ್ಟು ನೀರು ಇಲ್ಲದಿರುವ ಕಡೆಗಳಲ್ಲಿ ಮೀನನ್ನು ಬೆಳೆಸಲು ಹಣವನ್ನು ವ್ಯಯ ಮಾಡಬಾರದು. ನಮ್ಮ ಮಲೆನಾಡಿನಲ್ಲಿ ಶಿವಪ್ಪನಾಯ್ಕನ ಕಾಲದಲ್ಲಿ ಕಟ್ಟಿಸಿದಂಥ ಕೆರೆಕಟ್ಟೆಗಳಿವೆ ಅವುಗಳಲ್ಲಿ ವರ್ಷದ 365 ದಿವಸವೂ ನೀರು ಇರುತ್ತದೆ ಅಂತಹ ಕಡೆಗಳಲ್ಲಿ ಮೀನನ್ನು ಹೆಚ್ಚಿಗೆ ಬೆಳೆಸುವುದಕ್ಕೆ ಮತ್ತು ಅಭಿವೃದ್ಧಿಪಡಿಸುವುದಕ್ಕೆ ಹೆಚ್ಚು ಆಸಕ್ತಿ ವಹಿಸಬೇಕು. ಶರಾವತಿ ನದಿ ಇದೆ, ನಮ್ಮ ರಾಜ್ಯದ ಒಳನಾಡಿನಲ್ಲಿ ಅನೇಕ ಕೆರೆಕಟ್ಟೆಗಳಿವೆ, ಇಂತಹ ಕಡೆಗಳಲ್ಲಿ ಮೀನನ್ನು ಬೆಳೆಸಬೇಕು.

ಇನ್ನು ತೋಟಗಾರಿಕೆಯ ಬಗ್ಗೆ ಹೇಳುವುದಾದರೆ, ಈ ತೋಟಗಾರಿಕೆ ಮತ್ತು ಅರಣ್ಯ ಇಲಾಖೆ ಇವೆರಡೂ ಒಂದುಗೂಡಬೇಕು. ಈಗ ಅವರವರಲ್ಲಿಯೇ ಒಂದು ರೀತಿಯ ತಿಕ್ಕಾಟ ಉಂಟಾಗಿದೆ. ಇದು ಹೋಗಬೇಕು. ಮುಖ್ಯವಾಗಿ ಕೊಕೋನಟ್ ಕ್ಯಾಷೂ, ಪೆಪ್ಪರ್, ಇಂತಹವುಗಳನ್ನು ಹೆಚ್ಚಾಗಿ ಬೆಳೆಸಬೇಕು. ಲಾಲ್‌ಬಾಗ್‌ನಲ್ಲಿ ಒಂದು ಕಾಫಿ ಹೋಟೆಲ್ ಇದೆ. ಯಾರಾದರು ಭಾನುವಾರ ವಾಕಿಂಗ್ ಹೋದಾಗ ಅಲ್ಲಿಗೆ ಹೋದರೆ ಅಲ್ಲಿಯ ತಿಂಡಿಯನ್ನು ಮನುಷ್ಯರಾದವರು ತಿನ್ನುವುದಕ್ಕೆ ಸಾಧ್ಯವಿಲ್ಲ. ಕಾಫಿ ಕುಡಿಯುವುದಕ್ಕೆ ಸಾಧ್ಯವಿಲ್ಲ ಮಾನ್ಯ ಮಂತ್ರಿಗಳು ಈಗಲೇ ಬೇಕಾದರೆ ನನ್ನ ಜೊತೆಯಲ್ಲಿ ಬಂದರೆ ತೋರಿಸುತ್ತೇನೆ. ಟೆಂಡರ್ ಕರೆಯುವುದರ ಮೂಲಕ ಯಾರಿಗೋ ಅದನ್ನು ನಡೆಸಲು ಕೊಟ್ಟಿದ್ದಾರೆ ಅಲ್ಲಿನ ಒಂದು ಅವ್ಯವಸ್ಥೆ ಮತ್ತು ಗಲೀಜನ್ನು ಹೇಳುವುದಕ್ಕೆ ಸಾಧ್ಯವಿಲ್ಲ. ಅಲ್ಲಿ ಒಳ್ಳೆಯ ನೀರನ್ನು ಕುಡಿಯಲು ಸಹ ವ್ಯವಸ್ಥೆ ಇಲ್ಲ. ಈ ಹೋಟೆಲ್‌ನ್ನು ದುರಸ್ತಿ ಮಾಡುವುದಕ್ಕೆ ಮಾನ್ಯ ಮಂತ್ರಿಗಳು ಗಮನ ಕೊಡಬೇಕೆಂದು ಹೇಳುತ್ತೇನೆ.

ಕುಂದಾದ್ರಿ, ಕೊಡಚಾದ್ರಿ, ಕವಲೇದುರ್ಗ, ಆಗುಂಬೆ ಇಂತಹ ಕಡೆಗಳಲ್ಲಿ ತೋಟಗಾರಿಕೆಯನ್ನು ಅಭಿವೃದ್ಧಿಪಡಿಸಬೇಕು. ಏಕೆಂದರೆ ಇಂತಹ ಕಡೆಗಳಲ್ಲಿ ಒಳ್ಳೆಯ ಫಲವತ್ತಾದ ಭೂಮಿ ಇರುತ್ತದೆ ಇಂತಹ ಸುಂದರ ಪ್ರದೇಶಗಳಲ್ಲಿ ತೋಟಗಾರಿಕೆಯನ್ನು ಅಭಿವೃದ್ಧಿಪಡಿಸಿದರೆ ಅವು ಟೂರಿಸ್ಟ್ ಸೆಂಟರ್ ಸಹ ಆಗುತ್ತವೆ ಜೊತೆಗೆ ಇವರ ಇಲಾಖಾ ಕೆಲಸವೂ ಆಗುತ್ತದೆಂದು ಹೇಳುತ್ತೇನೆ.

ಇನ್ನು ಪಶುಸಂಗೋಪನಾ ಇಲಾಖೆಯ ಬಗ್ಗೆ ಹೇಳಬೇಕೆಂದರೆ ವೆಟರ್ನರಿ ಕಾಲೇಜಿನ ವಿದ್ಯಾರ್ಥಿಗಳು ಸ್ಟ್ರೈಕ್ ಮಾಡುತ್ತಿದ್ದಾರೆ. ಅವರ ಸಮಸ್ಯೆಗಳನ್ನು ಬಗೆಹರಿಸಬೇಕೆಂದು ಸಂಬಂಧಪಟ್ಟ ಮಂತ್ರಿಗಳಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ ನನ್ನ ಅಭಿಪ್ರಾಯದಲ್ಲಿ ಹೇಳುವುದಾದರೆ ಜನ ಮತ್ತು ಜಾನುವಾರು ಇವೆರಡಕ್ಕೂ ಡಾಕ್ಟರ್‌ಗಳು ಏನಿದ್ದಾರೆ, ಇವರಿಬ್ಬರಿಗೂ ಸಮಾನವಾದಂಥ ವೇತನ ಕೊಡುವುದರಲ್ಲಿ ನ್ಯಾಯವಿದೆ. ಮನುಷ್ಯರಿಗೆ ಖಾಯಿಲೆ ಬಂದರೆ ನೋಡಿಕೊಳ್ಳತಕ್ಕಂಥ ಡಾಕ್ಟರಿಗೆ ಹೆಚ್ಚು ಸಂಬಳ ಮೂಕಪ್ರಾಣಿಗಳಾದಂಥ ಜಾನುವಾರುಗಳಿಗೆ ಬರತಕ್ಕಂಥ ಖಾಯಿಲೆಗಳನ್ನು ನೋಡಿಕೊಳ್ಳುವ ಡಾಕ್ಟರಿಗೆ ಕಡಿಮೆ ಸಂಬಳ ಕೊಡುವುದು. ಸರಿಯಲ್ಲ ಇದನ್ನು ಸರಿಪಡಿಸಬೇಕು. ಈ ಡಾಕ್ಟರ್‌ಗಳ ಜೊತೆಗೆ ಸ್ಟಾಕ್‌ಮನ್ ಎಂದು ಇರುತ್ತಾರೆ. ಇವರೂ ಸಹ ನಿಜವಾದಂಥ ಕೆಲಸಗಾರರಾಗಿದ್ದಾರೆ. ಗುಡುಗು, ಮಿಂಚು, ಮಳೆ ಏನೇ ಇರಲಿ, ಯಾವುದನ್ನೂ ಲೆಕ್ಕಿಸದೆ ಈ ಕಾಂಪೌಂಡರುಗಳು ಹಳ್ಳಿಹಳ್ಳಿಗೂ ಬಂದು ದನಗಳ ಖಾಯಿಲೆಗೆ ಔಷಧ ಕೊಡುತ್ತಾರೆ. ಇಂತಹವರಿಗೆ ಪ್ರಮೋಷನ್ ಇಲ್ಲವಾಗಿದೆ ಇದಕ್ಕೆ ಏನಾದರೂ ವ್ಯವಸ್ಥೆ ಮಾಡಬೇಕಲ್ಲದೆ ಅವರ ಬೇಡಿಕೆಗಳೆಲ್ಲವನ್ನೂ ಈಡೇರಿಸಬೇಕೆಂದು ಈ ಸಂದರ್ಭದಲ್ಲಿ ಮಾನ್ಯ ಮಂತ್ರಿಗಳನ್ನು ಕೇಳಿಕೊಂಡು, ಈ ಸಭೆಯ ಮುಂದೆ ಮಂಡನೆ ಮಾಡಿರತಕ್ಕಂಥ ಬೇಡಿಕೆಗಳನ್ನು ವಿರೋಧಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

5-30 P.M.

ಶ್ರೀ ಎನ್. ಚಿಕ್ಕೇಗೌಡ (ವ್ಯವಸಾಯ ಶಾಖೆಯ ಮಂತ್ರಿಗಳು).—ಮಾನ್ಯ ಸಭಾಧ್ಯಕ್ಷಿಣಿಯವರೇ ಕೆಲವಾರು ಮಾನ್ಯ ಸದಸ್ಯರು ವ್ಯವಸಾಯದ ಬಗ್ಗೆ ಹಾಗೂ ಅದಕ್ಕೆ ಸಂಬಂಧಪಟ್ಟ ಎಲ್ಲಾ ಬೇಡಿಕೆಗಳ ಬಗ್ಗೆಯೂ ಮಾತನಾಡುತ್ತಾ ಕೆಲವಾರು ಸಲಹೆಗಳನ್ನು ಕೊಟ್ಟಿದ್ದಾರೆ. ಈಗಾಗಲೇ ದೇಶದ ಮುಂದೆ ಇರತಕ್ಕ ಕಳೆದ ಒಂದು ವರ್ಷದಲ್ಲಿ ಇದ್ದಂತಹ ಸಮಸ್ಯೆಗೂ ಈ ವರ್ಷ ಇರತಕ್ಕಂಥಾ ಸಮಸ್ಯೆಯ ಬಗ್ಗೆಯೂ ನಾನು ಒಂದೆರಡು ವಿಷಯಗಳನ್ನು ಪ್ರಸ್ತಾಪ ಮಾಡದಿದ್ದರೆ ಅದು ನನ್ನ ಕರ್ತವ್ಯ ಲೋಪವಾಗುತ್ತದೆ ಕಳೆದ ವರ್ಷ ನಮ್ಮ ರಾಜ್ಯದಲ್ಲಿ ಮಳೆಯ ಅಭಾವದಿಂದ ರಾಜ್ಯದ 19 ಜಿಲ್ಲೆಗಳಲ್ಲಿಯೂ 128 ತಾಲ್ಲೂಕುಗಳಲ್ಲಿ ಅಭಾವ ಪರಿಸ್ಥಿತಿಯುಂಟಾಗಿ ನಿರೀಕ್ಷಿಸಿದಷ್ಟು ಆಹಾರ ಉತ್ಪಾದನೆಯಾಗಿಲ್ಲ. ವ್ಯವಸಾಯದಲ್ಲಿ ಪ್ರಗತಿಯಾಗತಕ್ಕಂಥಾದ್ದು ಬಹಳ ಕುಂಠಿತವಾಗಿದೆ. ಕಳೆದ ಹಿಂದಿನ ವರ್ಷದಲ್ಲಿ ನಾವು ಗುರಿಮುಟ್ಟಿರುವುದು 68 ಲಕ್ಷ ಟನ್ ಆಹಾರವನ್ನು ಉತ್ಪಾದನೆ ಮಾಡಿದ್ದೇವೆ. 1976-77ನೇ ಸಾಲಿನಲ್ಲಿ ಸುಮಾರು 72 ಲಕ್ಷ ಟನ್ ಆಹಾರವನ್ನು ಉತ್ಪಾದನೆ ಮಾಡಬೇಕು ಎಂದು ಗುರಿಯನ್ನು ಇಟ್ಟುಕೊಂಡಿದ್ದೆವು. ಆದರೆ ಈ ವರ್ಷದಲ್ಲಿ ಕರ್ನಾಟಕ ರಾಜ್ಯದ ಚರಿತ್ರೆಯಲ್ಲಿಯೇ ಬಹಳ ಕೆಟ್ಟ ವರ್ಷ ಎಂದು ಅನುಭವವಾಗಿದೆ. 72 ಲಕ್ಷ ಟನ್ ಆಹಾರವನ್ನು ಉತ್ಪಾದನೆ ಮಾಡಬೇಕು ಎಂದು ಗುರಿಯನ್ನು ಇಟ್ಟುಕೊಂಡು ಕೇವಲ 47 ಲಕ್ಷ ಟನ್ ಆಹಾರ ಮಾತ್ರ ಉತ್ಪಾದನೆಯಾಯಿತು ಖಾರಿಫ್ ಮತ್ತು ರಬಿ ಹಾಗೂ ಬೇಸಿಗೆ ಬೆಳೆ ಈ ಮೂರು ಕಾಲದಲ್ಲಿಯೂ ಕೆಟ್ಟ ಪರಿಸ್ಥಿತಿಯಾಯಿತು. ಆದರೂ ಸಹ ಇಲಾಖೆಯವರು ಆಗಾಗ್ಯೆ ರೈತರು ಯಾವ ಬೆಳೆಯನ್ನು ಬೆಳೆಯಬೇಕೆಂಬ ಬಗ್ಗೆ, ಅಲ್ಪಾವಧಿ ಬೆಳೆಯನ್ನು ಬಿತ್ತನೆ ಮಾಡಿ ಬೆಳೆಯುವ ಬಗ್ಗೆ, ಕೆರೆಕಟ್ಟೆಯಲ್ಲಿ ನೀರು ಇರುವ ಕಡೆ ಬತ್ತದ ಬೆಳೆಯನ್ನು ಬೆಳೆಯುವ ಬಗ್ಗೆ. ಮಾಹಿತಿಯನ್ನು ರೇಡಿಯೋ ಮೂಲಕ ಮತ್ತು ಪತ್ರಿಕೆಗಳ ಮೂಲಕ ಸಾಕಷ್ಟು ಪ್ರಚಾರ ಮಾಡಿ 47 ಲಕ್ಷ ಟನ್ ಆಹಾರ ಉತ್ಪಾದನೆಯಾಯಿತು. ಆದರೆ ಈ ವರ್ಷ ಈಗಾಗಲೇ ರೈತರು ಹರ್ಷಚಿತ್ತರಾಗಿದ್ದಾರೆ ಮುಂಗಾರು ಮಳೆ ಬೆಳೆ ಚನ್ನಾಗಿದೆ ಹಾಸನ ಮೈಸೂರು ಮತ್ತು ಧಾರವಾಡ ಜಿಲ್ಲೆಗಳಲ್ಲಿ ಜೋಳವನ್ನು ಬಿತ್ತಿದ್ದಾರೆ ಕೆಲವು ಕಡೆ ರಾಗಿಯನ್ನು ಬಿತ್ತಿದ್ದಾರೆ. ಮಲೆನಾಡು ಪ್ರದೇಶದಲ್ಲಿ ಬತ್ತದ ಬಿತ್ತನೆಯ ಕೆಲಸ ಚೆನ್ನಾಗಿಸಾಗಿದೆ. ಮಳೆಯೂ ಸಾಕಷ್ಟು ಆಗಿದೆ. ಈ ವರ್ಷದಲ್ಲಿ ನಾವು ಏನು ಗುರಿಯನ್ನು ಇಟ್ಟುಕೊಂಡಿದ್ದೇವೆ ಅದನ್ನು ಮುಟ್ಟುವುದಕ್ಕೆ ಆಶಾದಾಯಕವಾದ ವಾತಾವರಣ ಇದೆ. ಕೆರೆಕಟ್ಟೆಗಳಲ್ಲಿ ಸಾಕಷ್ಟು ನೀರು ನಿರೀಕ್ಷಿಸಿದುದಕ್ಕಿಂತ ಹೆಚ್ಚಿಗೆ ನೀರು ಬಂದಿದೆ ಬತ್ತದ ಬಿತ್ತನೆ, ಪುಣಜಿ ಬೆಳೆಯತಕ್ಕದ್ದು ಪ್ರಾರಂಭವಾಗಿದ್ದರೂ ಕೂಡ ವ್ಯವಸಾಯ ಇಲಾಖೆಯವರು ಆಗಾಗ್ಗೆ ತಾಂತ್ರಿಕ ಸಲಹೆಗಳನ್ನು ಕೊಟ್ಟು ಪರಿಸ್ಥಿತಿಗನುಗುಣವಾಗಿ ಪರಿಶೋಧನೆ ಮಾಡಿದ ಬಿತ್ತನೆ ಬೀಜವನ್ನು ಒದಗಿಸತಕ್ಕ ಪ್ರಯತ್ನವನ್ನು ಮಾಡಿದೆ. ನಮ್ಮ ರಾಜ್ಯದಲ್ಲಿ ನಮ್ಮ ಇಲಾಖೆಯ ಮುಖಾಂತರ ಹಳ್ಳಿಗಾಡಿನಲ್ಲಿ ರೈತರಿಗೆ ಹಳ್ಳಿಗಾಡಿನವರ ಒಂದು ಸಲಹೆ ತಾಂತ್ರಿಕ ಸಲಹೆ ಮತ್ತು ವಿಸ್ತರಣಾಧಿಕಾರಿಗಳ ಸಲಹೆ ಸಾಕಷ್ಟು ಮಾಡಿದೆ ಶಕ್ತಿಮಾನ್ ಬೆಳೆಗಳನ್ನು ರೈತರಿಗೆ ಹೆಚ್ಚು ಬೆಳೆಯನ್ನು ಕೊಡತಕ್ಕ ಬೆಳೆಗಳನ್ನು ಬೆಳೆಯುವುದಕ್ಕೆ ಸಕಾಲದಲ್ಲಿ ಬೇಕಾದಂತಹ ಸಲಕರಣೆಗಳು ಎಂದರೆ ಬಿತ್ತನೆ ಬೀಜ ಗೊಬ್ಬರ, ಔಷಧಿಗಳು ಮತ್ತು ಇತರ ಸಾಧನ ಸಂಪತ್ತುಗಳನ್ನು ಒದಗಿಸಲಾಗಿದೆ ಸಾಧನ ಸಂಪತ್ತುಗಳನ್ನು ಸಕಾಲದಲ್ಲಿ ವ್ಯವಸ್ಥಿತ ರೀತಿಯಲ್ಲಿ ರೈತರಿಗೆ ಎಷ್ಟು ಬೇಕೋ ಅಷ್ಟನ್ನು ಕೊಡುವುದು ಮುಖ್ಯ. ಕೆಲವು ಸಂದರ್ಭದಲ್ಲಿ ಬೆಳೆಗೆ ಗೊಬ್ಬರ ಹೆಚ್ಚಾಗಿದೆ ಎಂದು ಹೇಳುತ್ತಾರೆ ಯೂರಿಯಾ ಹೆಚ್ಚಾಗಿದೆ ಎಂದು ಹೇಳುತ್ತಾರೆ ಆದರಿಂದ ರೈತರಿಗೆ ಎಷ್ಟು ಪ್ರಮಾಣದಲ್ಲಿ ಬೇಕೋ ಅಷ್ಟನ್ನು ಸಕಾಲದಲ್ಲಿ ಕೊಟ್ಟು ಅದನ್ನು ಯಾವರೀತಿ ಉಪಯೋಗಿಸಬೇಕು ಎಂದು ಹೇಳತಕ್ಕದ್ದು ಪಾಶ್ಚಿಮಾತ್ಯದೇಶದಲ್ಲಿ ಇರತಕ್ಕಂಥಾ ಒಂದು ಪದ್ಧತಿಯಾಗಿದೆ ಬೆಳೆಗೆ ನೀರನ್ನು ಕೂಡ ಎಷ್ಟು ಬೇಕೋ ಅಷ್ಟನ್ನು ವಾಟರ್ ಷೆಡ್‌ನಿಂದ ಒಂದೊಂದು ತೊಟ್ಟನ್ನೂ ಕೂಡ ಬಿಡುವ ವ್ಯವಸ್ಥೆ ಅಲ್ಲಿ ಇದೆ ಹೆಚ್ಚು ನೀರನ್ನು ಒದಗಿಸಬೇಕಾದಂತಹ ಸಂದರ್ಭದಲ್ಲಿ ಹೆಚ್ಚು ನೀರನ್ನು ಒದಗಿಸತಕ್ಕ ವ್ಯವಸ್ಥೆ ಇದೆ ಈ ರೀತಿ ನೀರನ್ನು ಒದಗಿಸಿ ಬೆಳೆಯನ್ನು ತೆಗೆಯತಕ್ಕಂಥಾದ್ದು ಬಹಳ ಮುಖ್ಯವಾದುದು. ಬೆಳೆಯನ್ನು ತೆಗೆಯತಕ್ಕ ವಿಚಾರದಲ್ಲಿ ನಮ್ಮ ವ್ಯವಸಾಯ ಇಲಾಖೆಯ ವಿಸ್ತರಣಾಧಿಕಾರಿಗಳು ಅನೇಕ ಸಲಹೆಗಳನ್ನು ಹಳ್ಳಿಗಾಡಿನ ರೈತರಿಗೆ ಕೊಟ್ಟಿದ್ದಾರೆ. ಖುಷ್ಕಿ ಜಮೀನಿನಲ್ಲಿ ಒಂದು ಬೆಳೆ ರಾಗಿ

ಬೆಳೆಯನ್ನು ಯಾವರೀತಿ ತೆಗೆಯಬೇಕು ಮುಂಗಾರು ರಾಗಿ ಬೆಳೆಯನ್ನು ಯಾವ ರೀತಿ ಬೆಳೆಯಬೇಕು ದ್ವಿದಳಧಾನ್ಯಗಳಾದ ಅಲಸಂದಿಯನ್ನು ಯಾವರೀತಿ ಬೆಳೆಯಬೇಕು ಗೊಬ್ಬರವನ್ನು ಯಾವರೀತಿ ಹಾಕಬೇಕು ಮಲ್ಟಿಪಲ್ ಕ್ರಾಪ್ಸ್ ಎರಡು ಮೂರು ಬೆಳೆಗಳನು ಯಾವರೀತಿ ಬೆಳೆಯಬೇಕು ಎನ್ನತಕ್ಕ ವಿಚಾರದಲ್ಲಿ ರೈತರಿಗೆ ಸಾಕಷ್ಟು ಸಲಹೆಗಳನ್ನು ವ್ಯವಸಾಯ ಇಲಾಖೆಯ ವಿಸ್ತರಣಾಧಿಕಾರಿಗಳು ಕೃಷಿ ವಿಶ್ವವಿದ್ಯಾನಿಲಯದ ಎಕ್ಸ್‌ಟೆನ್‌ಷನ್ ಏಜನ್ಸಿಯ ವರೂ ಸಲಹೆಗಳನ್ನು ಕೊಟ್ಟಿದ್ದಾರೆ. ಮಾನ್ಯ ಸದಸ್ಯರಾದ ಶ್ರೀಮಾನ್ ಕೋಣಂದೂರುಲಿಂಗಪ್ಪನವರು ಹೇಳಿದರು ನೀವು ಇಂಗ್ಲೀಷಿನಲ್ಲಿ ವ್ಯವಸಾಯ ಮಾಡುತ್ತಿದ್ದೀರಿ ಎಂದು ಸಧಾರಿತ ರೀತಿಯಲ್ಲಿ ವ್ಯವಸಾಯಕ್ಕೆ ಸಂಬಂಧಪಟ್ಟ ವಿಚಾರವನ್ನು ಯಾವ ಯಾವ ಭೂಮಿಯಲ್ಲಿ ಯಾವ ಯಾವ ಬೆಳೆಗಳನ್ನು ಯಾವರೀತಿ ಬೆಳೆಯ ಬೇಕೆಂಬ ವಿಚಾರವನ್ನು, ಯಾವರೀತಿ ಗೊಬ್ಬರವನ್ನು ಉಪಯೋಗಿಸಬೇಕೆಂಬ ವಿಚಾರವನ್ನು ಹಸ್ತ ಪತ್ರಿಕೆಗಳಲ್ಲಿ, ಪಾಂಫ್ಲೆಟ್ಸ್‌ಗಳಲ್ಲಿ ಪ್ರತಿಯೊಂದು ತಾಲ್ಲೂಕಿಗೂ ಪ್ರತಿಯೊಬ್ಬ ರೈತರಿಗೂ ಒದಗಿಸುವಂತಹ ವ್ಯವಸ್ಥೆಯನ್ನು ಮಾಡಿದ್ದೇವೆ ಬೆಳೆಯನ್ನು ಯಾವರೀತಿ ಬೆಳೆಯ ಬೇಕೆಂಬುದನ್ನು ಡೆಮಾನ್‌ಸ್ಟ್ರೇಷನ್ ಮುಖಾಂತರ ತೋರಿಸಿಕೊಟ್ಟಿದೆ. ರೈತರ ಕ್ಯಾಂಪುಗಳಲ್ಲಿ ರೈತರ ಲೀಡರುಗಳಿಗೆ ಮತ್ತು ರೈತರ ಮಕ್ಕಳಿಗೆ ವ್ಯವಸಾಯದ ವಿಚಾರದಲ್ಲಿ ತರಬೇತಿಯನ್ನು ಕೊಟ್ಟಿದ್ದೇವೆ. ಇದೆಲ್ಲವನ್ನೂ ಕನ್ನಡ ಭಾಷೆಯಲ್ಲಿಯೇ ಒದಗಿಸುವಂತಹ ವ್ಯವಸ್ಥೆಯನ್ನು ನಾವು ಮಾಡಿದ್ದೇವೆ. ನಮ್ಮ ಬ್ಲಾಕ್ ಡೆವಲಪ್‌ಮೆಂಟ್ ಆಫೀಸರು ಗ್ರಾಮಾಂತರ ಪ್ರದೇಶಗಳಿಗೆ ಹೋಗಿ ರೈತರಿಗೆ ಕನ್ನಡದಲ್ಲಿ ವ್ಯವಸಾಯದ ಬಗ್ಗೆ ಸಲಹೆಗಳನು ಕೊಟ್ಟಿದ್ದಾರೆ. ಮಾನ್ಯ ಸದಸ್ಯರಾದ ಶ್ರೀಮಾನ್ ಕೋಣಂದೂರು ಲಿಂಗಪ್ಪನವರು ಊರಿನಲ್ಲಿ ಎಲ್ಲೋ ಕೆಲವು ಕಾಲ ಮಾತ್ರ ಇರುತ್ತಾರೆ ಎಂದು ಕಾಣುತ್ತದೆ. ಅವರು ಹೆಚ್ಚಿಗೆ ರಾಜಕೀಯದಲ್ಲಿ ಶ್ರಮತೆಗೆದ ಕೊಳ್ಳುತ್ತಿದ್ದಾರೆ. ಅವರು ವ್ಯವಸಾಯದ ಬಗ್ಗೆ ಹೆಚ್ಚು ತಿಳಿದುಕೊಂಡಿಲ್ಲ ಎಂದು ಹೇಳಿದರೆ ತಪ್ಪಾಗಲಾರದು. ನಾನು ಕೋಣಂದೂರಿಗೆ ಹೋಗಿ ನೋಡಿದ್ದೇನೆ. ಅಲ್ಲಿ ಒಳ್ಳೆಯ ರೈತರು ಇದ್ದಾರೆ ಆದರೆ ಮಾನ್ಯ ಸದಸ್ಯರು ವ್ಯವಸಾಯದ ಬಗ್ಗೆ ಹೆಚ್ಚು ವಿಚಾರವನ್ನು ತಿಳಿದುಕೊಂಡಿಲ್ಲ. ಈಗ ನಮ್ಮ ರಾಜ್ಯದಲ್ಲಿ ಕೇವಲ 20 ಪರ್ಸೆಂಟ್, ನೀರಾವರಿ ಇದೆ ನೀರಾವರಿ ಬೇಸಾಯವನ್ನು ಮಾಡ ವುದಕ್ಕೆ ಸಾಧ್ಯವಿದೆ ಮೇಜರ್ ಇರಿಗೇಷನ್ ಮೈನರ್ ಇರಿಗೇಷನ್ ಮತ್ತು ಲಿಫ್ಟ್ ಇರಿಗೇಷನ್ ಈ ಎಲ್ಲಾ ನೀರಾವರಿ ಯೋಜನೆಗಳಿಂದಲೂ ಸಹ ನಾವು 20 ಪರ್ಸೆಂಟ್ ನೀರಾವರಿಯನ್ನು ಮಾಡುತ್ತಿದ್ದೇವೆ ತಮಿಳುನಾಡು ಮತ್ತು ಆಂಧ್ರ ಪ್ರದೇಶದಲ್ಲಿ 40 ರಿಂದ 45 ಪರ್ಸೆಂಟ್ ನೀರಾವರಿಯಾಗಿದೆ ನಾವು ಇನ್ನೂ 40 ಪರ್ಸೆಂಟ್ ನೀರಾವರಿಯನ್ನು ಮುಟ್ಟುವುದಕ್ಕೆ ಸಾಧ್ಯವಾಗಿಲ್ಲ ನಮ್ಮ ರಾಜ್ಯದಲ್ಲಿ ಬೇಸಾಯವನ್ನು ಯಾವರೀತಿ ಮಾಡಬೇಕು ಎಂಬುದರ ಬಗ್ಗೆ ಕೆಲವು ಪ್ರೋಗ್ರಾಮುಗಳನ್ನು ಹಾಕಿಕೊಂಡು ಪರಿಣತರಿಂದ ಸಲಹೆಗಳನ್ನು ಕೊಡತಕ್ಕಂಥಾ ಒಂದು ವ್ಯವಸ್ಥೆಯನ್ನು ಮಾಡಲಾಗಿತ್ತು ಮಳೆಯಿಂದ ಬಿದ್ದ ನೀರು ಭೂಮಿಯಲ್ಲಿ ಇಂಗತಕ್ಕದ್ದನ್ನು ಉಪಯೋಗಿಸಿಕೊಂಡು ಯಾವರೀತಿ ಬೇಸಾಯ ಮಾಡಬೇಕು ಎನ್ನುವುದರ ಬಗ್ಗೆಯೂ ಕೂಡ ರೈತರಿಗೆ ಸಲಹೆಗಳನ್ನು ಕೊಡಲಾಗಿದೆ. ಅದಕ್ಕಾಗಿ ಒಡ್ಡುಗಳನ್ನು ಹಾಕತಕ್ಕಂಥಾ ಎಂದರೆ ಸಾಯಿಲ್ ಕನ್‌ಸರ್‌ವೇಷನ್ ಕೆಲಸಗಳನ್ನೂ ಸಹ ಸಾಕಷ್ಟು ಕಲಸಗಳನ್ನು ಮಾಡಿದ್ದೇವೆ. ಕೋಲಾರ ಜಿಲ್ಲೆಯಲ್ಲಿಯೂ ಸಹ ಒಡ್ಡು ಹಾಕುವ ಕಲಸವನ್ನು ನಾವು ಮಾಡಿದ್ದೇವೆ. ಅದರಿಂದ ಎಷ್ಟು ಪ್ರಯೋಜನವಾಗಿದೆ ಎಂಬುದನ್ನು ಮಾನ್ಯ ಸದಸ್ಯರಾದ ಶ್ರೀಮಾನ್ ಬೈರೇಗೌಡರು ನೋಡಿದ್ದಾರೆ ಒಡ್ಡು ಹಾಕಿರುವ ಕಡೆ ಬೆಳೆಗಳು ಹಸುರು ಹಸರಾಗಿರುತ್ತದೆ ಒಡ್ಡು ಹಾಕುವುದರಿಂದ ಮಳೆಯಿಂದ ಬಿದ್ದಂತಹ ನೀರನ್ನು ಇಂಗಿಸಿಕೊಂಡು ಬೆಳೆಗೆ ಬೇಕಾದಂತಹ ನೀರನ್ನು ಉಪಯೋಗಿಸಿಕೊಂಡು ಬೆಳೆಯನ್ನು ಬೆಳೆಯುವುದಕ್ಕೆ ಸಾಧ್ಯವಾಗುತ್ತದೆ. ಆದ್ದರಿಂದ ಒಡ್ಡು ಹಾಕುವುದರಿಂದ ಯಾವ ಪ್ರಯೋಜನವೂ ಇಲ್ಲ ಎಂದು ಇದುವರೆಗೂ ಒಬ್ಬರು ಹೇಳಿಲ್ಲ ಆದ್ದರಿಂದ ಮಾನ್ಯ ಬೈರೇಗೌಡರು ಒಡ್ಡು ವಿಚಾರವನ್ನು ಚೆನ್ನಾಗಿ ತಿಳಿದುಕೊಂಡಿಲ್ಲ ಎಂದು ಕಾಣುತ್ತದೆ. ದೇಶದಲ್ಲಿ ಆಗಿರತಕ್ಕ ಪ್ರಗತಿಯನ್ನು ಇಟ್ಟುಕೊಂಡು ನಾನು ಕೆಲವು ಅಂಕಿ ಅಂಶಗಳನ್ನು ಹೇಳಬಯಸುತ್ತೇನೆ. ವ್ಯವಸಾಯದಲ್ಲಿ ಪರಿಶೋಧನೆ ವ್ಯವಸಾಯದ ತಾಂತ್ರಿಕ ಸಲಹೆ, ಮತ್ತು ವ್ಯವಸಾಯ ಇಲಾಖೆಯಿಂದ ಆಗಿರತಕ್ಕ ತೀವ್ರಪ್ರಗತಿ ಗ್ರೀನ್ ರೆವಿಲ್ಯೂಷನ್ ಇವುಗಳಿಂದ ಉತ್ಪಾದನೆ ಎಷ್ಟು ಪಟ್ಟು ಹೆಚ್ಚಾಗಿದೆ ಎಂದರೆ 1965–66ನೇ ಸಾಲಿನಲ್ಲಿ ಆಹಾರದ ಬೆಳೆ ಒಂದು ಹೆಕ್ಟೇರಿಗೆ 452 ಕೆ ಜಿ, ಇದ್ದದ್ದು 965 ಕೆ ಜಿ ಗೆ ಹೋಗಿದೆ. ಹತ್ತಿ ಒಂದು ಹೆಕ್ಟೇರಿಗೆ 460 ಕೆ.ಜಿ. ಇದ್ದದ್ದು 103 ಕೆ.ಜಿಗೆ

ಹೋಗಿದೆ. ಎಣ್ಣೆಯ ಬೀಜಗಳು ಒಂದು ಹೆಕ್ಟೇರಿಗೆ 40? ಕೆ.ಜಿ. ಇದ್ದದ್ದು 683 ಕೆ. ಜಿ. ಉತ್ಪಾದನೆಯಾಗಿದೆ. ಕಬ್ಬು ಒಂದು ಹೆಕ್ಟೇರಿಗೆ 80 ಟನ್ ಉತ್ಪಾದನೆ ಇದ್ದದ್ದು 86 ಟನ್ನಿಗೆ ಹೋಗಿದೆ. ಇವುಗಳೆಲ್ಲಾ ತಾಂತ್ರಿಕ ಪರಿಶೋಧನೆ, ಹೊಸ ತಳಿ ಬೀಜಗಳನ್ನು ಉಪಯೋಗಿಸುವುದರಿಂದ ರಾಸಾಯನಿಕ ಗೊಬ್ಬರ ಮತ್ತು ಕ್ರಿಮಿಕೀಟಗಳ ಔಷಧಿ ಈ ಸೌಲಭ್ಯಗಳು ದೊರತದ್ದರಿಂದ ಆಹಾರಧಾನ್ಯಗಳ ಉತ್ಪಾದನೆ ಜಾಸ್ತಿಯಾಗಿದೆ. ರೈತರು ತಮ್ಮ ಕಾಲುಮೇಲೆ ತಾವು ನಿಂತುಕೊಂಡು ಸ್ವಾವಲಂಬಿಗಳಾಗಿ, ಎಣ್ಣೆ ಬೀಜಗಳು ಮತ್ತು ಇತರ ಕಮರ್ಷಿಯಲ್ ಕ್ರಾಪ್ಸ್ ಮತ್ತು ಆಹಾರಧಾನ್ಯವನ್ನು ಹೆಚ್ಚು ಉತ್ಪಾದನೆ ಮಾಡಿದ್ದಾರೆ. ಸಾಕಷ್ಟು ಪರಿಣಾಮಕಾರಿಯಾದಂತಹ ಹೆಚ್ಚು ಉತ್ಪಾದನೆ ಪಡೆಯುತಕ್ಕಂಥಾದ್ದಾಗಿದೆ. ಈ ವರ್ಷದಲ್ಲಿ ನಾನು ಹೇಳಿದಹಾಗೆ ಆಹಾರದ ಬೆಳೆಯಲ್ಲಿ 73 ಲಕ್ಷ ಟನ್ ಉತ್ಪಾದನೆ ಮಾಡಬೇಕೆಂದು ನಾವು ಗುರಿಯನ್ನು ಇಟ್ಟುಕೊಂಡಿದ್ದೇವೆ. 9½ ಲಕ್ಷ ಬೇಲ್ ಹತ್ತಿಯನ್ನು ಉತ್ಪಾದನೆ ಮಾಡಬೇಕೆಂದು ಗುರಿಯನ್ನು ಇಟ್ಟುಕೊಂಡಿದ್ದೇವೆ. ಕಬ್ಬಿನಲ್ಲಿ 04 ಲಕ್ಷ ಟನ್ ಉತ್ಪಾದನೆ ಮಾಡಬೇಕೆಂದು ಗುರಿಯನ್ನು ಇಟ್ಟುಕೊಂಡಿದ್ದೇವೆ.

ಮತ್ತು ಇವತ್ತು ನಾವು ಬೆಂಗಳೂರು ಮತ್ತು ಮೈಸೂರಿನಲ್ಲಿ ಕಬ್ಬಿನ ಬೆಳೆ ಈ ವರ್ಷ ಎಷ್ಟಾಗಿದೆ ಎಂದು ನೋಡುವುದಾದರೆ. ಕಳೆದ 40 ವರ್ಷಗಳಲ್ಲಿ ಇಂತಹ ಬೆಳೆಯನ್ನು ನೋಡಿಲ್ಲ ಎಂದು ರೈತರು ಹೇಳಿದ್ದಾರೆ. ಚುಕ್ಕೆ ರೋಗವನ್ನು ತಡೆಗಟ್ಟುವುದಕ್ಕಾಗಿ ಸ್ಪೆಷಲ್‌ಸ್ಕ್ವಾಡ್ ಮಾಡಿದ್ದೇವೆ. ಅದರ ಮೂಲಕ ಈ ಚುಕ್ಕೆ ರೋಗವನ್ನು ತಡೆಗಟ್ಟಿದ್ದೇವೆ. ಅದಕ್ಕಾಗಿ ರೈತರು ಬಹಳ ಸಂತೋಷಪಟ್ಟಿದ್ದಾರೆ. ರಾಯಚೂರು ಡಿಸ್ಟ್ರಿಕ್ಟ್‌ನಲ್ಲಿ ವೈರಲಸ್ ಡಿಸೀಸ್‌ನ್ನು ತಡೆಗಟ್ಟಿದ್ದೇವೆ. ಈ ವರ್ಷ ಆಗಿರುವ ಕಬ್ಬಿನ ಬೆಳೆಯನ್ನು ನೋಡಿದರೆ ಮನಸ್ಸಿಗೆ ತುಂಬ ಸಂತೋಷವಾಗುತ್ತದೆ. ಉತ್ಪಾದನೆಯ ಗುರಿಯನ್ನು ಮುಟ್ಟಿದ್ದೇವೆ. ಆಯಕಟ್ಟಿನಲ್ಲಿರತಕ್ಕಂಥ ಜಮೀನಿಗೆ 1975—76ರಲ್ಲಿ 20.97 ಲಕ್ಷ ಹೆಕ್ಟೇರ್‌ಗೆ ನೀರನ್ನು ಕೊಟ್ಟಿದ್ದೇವೆ. ಇದು 19.1 ಪರ್ಸೆಂಟ್ ಆಯಿತು. 1976—77ರಲ್ಲಿ 22 0.000 ಹೆಕ್ಟೇರ್‌ಗೆ ನೀರನ್ನು ಒದಗಿಸಿದ್ದೇವೆ. ಇದು 20.5 ಪರ್ಸೆಂಟ್ ಆಯಿತು. ಒಟ್ಟಿನಲ್ಲಿ ಈ ಇಲಾಖೆ ಬಗ್ಗೆ ಹೇಳುವುದಾದರೆ. ಈ ವರ್ಷದಲ್ಲಿ ಒಡ್ಡುಗಳನ್ನು ಹಾಕತಕ್ಕ ವಿಚಾರದಲ್ಲಿ ಒಟ್ಟು ನಮ್ಮ ಕರ್ನಾಟಕ ರಾಜ್ಯದಲ್ಲಿ 5½ ಹೆಕ್ಟೇರ್ ಜಮೀನಿಗೆ ಒಡ್ಡುಗಳನ್ನು ಹಾಕಬೇಕಾಗಿದೆ. 1976—77ರಲ್ಲಿ 3.21 ಲಕ್ಷ ಹೆಕ್ಟೇರ್‌ಗೆ ಒಡ್ಡುಗಳನ್ನು ಹಾಕಿದ್ದೇವೆ. 2 45 ಲಕ್ಷ ಹೆಕ್ಟೇರ್‌ಗೆ ಅಪೂರ್ಣ ಆಗಿರುವುದನ್ನು ಪೂರೈಕೆ ಮಾಡಿದ್ದೇವೆ ವೇಸ್ಟ್‌ವೀರ್ ಕೆಲಸವನ್ನೂ ಪೂರೈಕೆ ಮಾಡಿದ್ದೇವೆ. ಕಳೆದ ವರ್ಷ ಮಾರ್ಚಿ, ಮೇ, ಜೂನ್‌ನಲ್ಲಿ ಕೆಲಸವಿಲ್ಲದೆ ತೊಂದರೆಪಡುತ್ತಿದ್ದಂಥ 1 ಲಕ್ಷ, 20, ಸಾವಿರ ವ್ಯವಸಾಯ ಕೂಲಿಗಾರರಿಗೆ ಉದ್ಯೋಗವನ್ನು ಒದಗಿಸಿದ್ದೇವೆ. 1145 ವರ್ಕ್ಸ್ ಸೆಂಟರ್ಸ್‌ನ್ನು ಇಟ್ಟುಕೊಂಡಿದ್ದೇವೆ. 2 ಕೋಟಿ 32 ಲಕ್ಷ ಮ್ಯಾನ್‌ಡೇಸ್ ವರ್ಕ್ ಆಗಿದೆ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಹೋದವರ್ಷ 3 .62 ಕೋಟಿ ರೂಪಾಯಿ ಖರ್ಚಿನಲ್ಲಿ 21 ಲಕ್ಷ 82 ಸಾವಿರ ಹೆಕ್ಟೇರಿನಲ್ಲಿ ಬದುಗಳನ್ನು ಹಾಕಿಸಿದ್ದೇವೆ. ಆದುದರಿಂದ ಈ ದಿಶೆಯಲ್ಲಿ ಸಾಕಷ್ಟು ಕೆಲಸವಾಗಿದೆ. ಮತ್ತೆ ರೈತರಿಗೆ ಬೇಕಾಗಿರುವ ಇನ್‌ಪುಟ್ಸ್ ವಿಷಯದಲ್ಲಿ ಕೆಲವು ಜನ ಸದಸ್ಯರು ಹೇಳಿದರು. ಸಾಯಿಲ್ ಕನ್‌ಸರ್ವೇಷನ್, ಸಾಯಿಲ್ ಸ್ಯಾಂಪ್ಲಿಂಗ್ ಮಾಡುವುದಕ್ಕೋಸ್ಕರ 18 ಜಿಲ್ಲೆಗಳಲ್ಲಿ 2 ಮೊಬೈಲ್ ವ್ಯಾನುಗಳಿವೆ. ಇದರಿಂದ ಮೂಲಭೂತವಾಗಿ ಮಣ್ಣನ್ನು ಪರೀಕ್ಷೆ ಮಾಡಿ, ಮಣ್ಣಿನಲ್ಲಿ ಸಾರಜನಕದ ಅಂಶಗಳು ಕಡಿಮೆ ಇದೆಯೋ ಏನು ಎಂಬುದನ್ನು ತಿಳಿಸುವುದಕ್ಕೆ ಸಾಧ್ಯವಾಗಿದೆ. ಮಣ್ಣಿನ ಪರೀಕ್ಷೆ ವಿಚಾರದಲ್ಲಿ ಮತ್ತು ಗೊಬ್ಬರದ ವಿಚಾರದಲ್ಲಿ ರೈತರು ಸಾಕಷ್ಟು ತಿಳಿದುಕೊಂಡರೆ ಒಂದು ಮೂಲಭೂತವಾದ ಪ್ರಶ್ನೆಯನ್ನು ಬಿಡಿಸಿದ ಹಾಗೆ ಆಗುತ್ತದೆ. ಆ ಕಡೆ ರೈತರು ಹೆಚ್ಚು ಗಮನಕೊಡಬೇಕಾಗುತ್ತದೆ. ಸಾವಿರಾರು ಸ್ಯಾಂಪಲ್ಸ್ ತರಿಸಿ ಮಣ್ಣಿನ ಪರಿಶೋಧನೆ ಕೆಲಸದಲ್ಲಿ ಸಾಕಷ್ಟು ಕೆಲಸವಾಗಿದೆ, ರಸಗೊಬ್ಬರ, ಕೊಟ್ಟಿಗೆ ಗೊಬ್ಬರ, ಹಸಿರೆಲೆ ಗೊಬ್ಬರ—ಇವುಗಳ ಬಗ್ಗೆ ಹೆಚ್ಚಿಗೆ ಗಮನಕೊಡಬೇಕಾಗಿದೆ. ಈ ವರ್ಷದಲ್ಲಿ ಮಳೆಯ ಅಭಾವ ಇದ್ದರೂ ಸಹ ಆಗಲೇ ಗೊಬ್ಬರದ ಕನ್‌ಸಂಪ್ಷನ್ ಹೆಚ್ಚಾಗಿದೆ. 1975—76ರಲ್ಲಿ 71 ಲಕ್ಷ, 31 ಸಾವಿರ ಟನ್‌ನಷ್ಟು ನೈಟ್ರೋಜನ್ ಗೊಬ್ಬರ ನಮ್ಮ ರಾಜ್ಯದಲ್ಲಿ ಕನ್‌ಸ್ಯೂಮರ್ಸ್ ಉಪಯೋಗಿಸಿದ್ದಾರೆ. 1976-77ರಲ್ಲಿ 1 ಲಕ್ಷ 33 ಸಾವಿರ ಟನ್‌ನಷ್ಟು ನೈಟ್ರೋಜನ್ ಉಪಯೋಗಿಸಿದ್ದಾರೆ. ಈ ವರ್ಷದಲ್ಲಿ ಅಂದರೆ 1977—78ರಲ್ಲಿ ಸುಮಾರು 2 ಲಕ್ಷ ಟನ್‌ನಷ್ಟು ನೈಟ್ರೋಜನ್ ಉಪಯೋಗಿಸುವ ಸಾಧ್ಯತೆ

ಇದೆಯೆಂದು ಲೆಕ್ಕ ಹಾಕಿದ್ದೇವೆ. ರಸಗೊಬ್ಬರಗಳನ್ನು ರೈತರು ಹೆಚ್ಚು ಉಪಯೋಗಿಸಬೇಕು ಎಂದು ಹಳ್ಳಿಗಾಡಿಗೆ ಹೋಗಿ ಮಾರಾಟ ಮಾಡುವುದಕ್ಕೆ ತಗಲತಕ್ಕ ಖರ್ಚನ್ನು ಸರ್ಕಾರ ವಹಿಸಿಕೊಂಡು ಟ್ರಾನ್ಸ್‌ಪೋರ್ಟ್ ಕಾಸ್ಟ್ ಸಬ್ಸಿಡಿ ಕೊಡುವುದಕ್ಕೆ ಸರ್ಕಾರ ತೀರ್ಮಾನ ತೆಗೆದುಕೊಂಡಿದೆ.

ಮತ್ತೊಂದು ವಿಶೇಷ ಸುದ್ದಿ ಏನೆಂದರೆ, ಪೂಲ್ ಫರ್ಟಿಲೈಸರ್‌ನ್ನು ಭಾರತ ಸರ್ಕಾರದವರು ಕೊಡತಕ್ಕಂಥಾದ್ದು, ಇದನ್ನು ಮದ್ರಾಸ್ ಮತ್ತು ಇತರೆ ರಾಜ್ಯಗಳಿಂದ ತರಬೇಕಾದರೆ ಸೇಲ್ಸ್ ಟ್ಯಾಕ್ಸ್ ಬೀಳುತ್ತದೆ ಆದುದರಿಂದ ಇದಕ್ಕೆ ಬೆಲೆ ಹೆಚ್ಚಾಗಿದೆ. ಕೇಂದ್ರಸರ್ಕಾರದವರು ಈ ವರ್ಷದಲ್ಲಿ ಬಫರ್ ಸ್ಟಾಕ್‌ನ್ನು ಮಾಡಬೇಕು ಎಂದು ತೀರ್ಮಾನ ತೆಗೆದುಕೊಂಡಿದ್ದಾರೆ. 1 ಲಕ್ಷ, 25 ಸಾವಿರ ಟನ್‌ನಷ್ಟು ಗೊಬ್ಬವನ್ನು ದಾಸ್ತಾನು ಮಾಡಬೇಕು ಎಂದು ಸರ್ಕಾರ ತೀರ್ಮಾನ ಮಾಡಿದೆ ಈ ವರ್ಷದಲ್ಲ 65 ಸಾವಿರ ಟನ್‌ನಷ್ಟು ಸ್ಟಾಕ್ ಮಾಡಬೇಕು ಎಂದು ತೀರ್ಮಾನ ತೆಗೆದುಕೊಂಡಿದ್ದೇವೆ. ಆದುದರಿಂದ ರೈತರಿಗೆ ಬೇಕಾಗಿರತಕ್ಕಂಥ ಇನ್‌ಪುಟ್ಸ್ ಅಂದರೆ ಗೊಬ್ಬರ, ಬೀಜ, ಔಷಧಿಗಳನ್ನು ದಾಸ್ತಾನು ಮಾಡಿದ್ದೇವೆ. ಮಳೆಯಾಗಿರತಕ್ಕ ಕಾಲದಲ್ಲಿ ಹೆಚ್ಚು ಬೆಳೆಗಳನ್ನು ತೆಗೆಯುವುದಕ್ಕೆ ಮೂಲಭೂತವಾದ ವಸ್ತುಗಳು ರೈತರಿಗೆ ದೊರಕುವುದರಲ್ಲಿ ಯಾವ ಕೊರತೆಯೂ ಇಲ್ಲ ಎಂದು ಈ ಸದನದ ಸದಸ್ಯರಿಗೆ ಮತ್ತು ರಾಜ್ಯದ ರೈತರಿಗೆ ಈ ಒಂದು ಸಂತೋಷದ ಸುದ್ದಿಯನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನೊಂದು ವಿಷಯವೇನೆಂದರೆ, ಹೆಚ್ಚು ಇಳುವರಿ ಕೊಡತಕ್ಕ ಶಕ್ತಿವಾನ್ ಬೀಜ ಏನಿದೆ ಇದು ಹೆಚ್ಚು ಉತ್ಪಾದನೆ ಕೊಡತಕ್ಕಂಥಾದ್ದು. ಇದರ ಗುಣಮಟ್ಟ ಕೂಡ ಹೆಚ್ಚಾಗಿರಬೇಕು. ಜೂನ್‌ನಲ್ಲಿ ವರ್ಲ್ಡ್ ಬ್ಯಾಂಕ್ ಏಜೆಂಟರು ನ್ಯಾಷನಲ್ ಸೀಡ್ ಪ್ರಾಜೆಕ್ಟನ್ನು ತೆಗೆದುಕೊಳ್ಳುವುದಕ್ಕೆ ತೀರ್ಮಾನವಾಗಿದೆ. ಇದರ ಪ್ರಕಾರ ನಮ್ಮ ರಾಜ್ಯದಲ್ಲಿ ಶಕ್ತಿವಾನ್ ಮತ್ತು ಹೆಚ್ಚು ಇಳುವರಿ ಕೊಡತಕ್ಕ ಬೀಜವನ್ನು 2[illegible] ಸಾವಿರ ಟನ್‌ನಷ್ಟು ಉತ್ಪಾದನೆ ಮಾಡಬೇಕು ಎಂದು ಇದ್ದೇವೆ ಇದಕ್ಕೆ 13 ಕೋಟಿ ರೂಪಾಯಿ ಯೋಜನೆ ಹಾಕಿದ್ದೇವೆ ಅದನ್ನು ಮುಂದಿನ ವರ್ಷದಿಂದ ಪ್ರಾರಂಭ ಮಾಡುತ್ತೇವೆ. ಅಪ್ರೈಸಲ್ ಟೀಂ ಬಂದು ಹೋಗಿದೆ. ಅವರು ಇದಕ್ಕೆ ಒಪ್ಪಿಗೆ ಕೊಟ್ಟಿದ್ದಾರೆ. ಈ ವಿಷಯವನ್ನು ತಮ್ಮ ಮುಖಾಂತರ ಸದನಕ್ಕೆ ತಿಳಿಸುವುದಕ್ಕೆ ಇಷ್ಟಪಡುತ್ತೇನೆ ಸೀಡ್ ಸರ್ಟಿಫಿಕೇಷನ್ ಏಜೆನ್ಸಿ ಏನಿದೆ ಅದು ಅಟಾನಮಸ್ ಬಾಡಿ, ಅದಕ್ಕೆ ನೇರವಾಗಿ ಯಾವ ಇಲಾಖೆಯೂ ಇಲ್ಲ. ಅವರು ಸೀಡ್ಸನ್ನು ಟೆಸ್ಟ್ ಮಾಡುವುದು ಮತ್ತು ಇನ್‌ಸ್ಪೆಕ್ಷನ್ ಮಾಡುತ್ತಾರೆ. ಇಂಥಾದ್ದು ಇಡೀ ಭಾರತ ದೇಶದಲ್ಲಿ ಎಲ್ಲೂ ಇಲ್ಲ. ನಮ್ಮ ರಾಜ್ಯದಲ್ಲಿ ಮೊದಲನೆಯದಾಗಿ ಸೀಡ್ ಸರ್ಟಿಫಿಕೇಷನ್ ಏಜೆನ್ಸಿಯನ್ನು ಮಾಡಿದ್ದೇವೆ, ಅದು ಒಳ್ಳೆಯ ಕಾರ್ಯವನ್ನು ಮಾಡುತ್ತಾ ಇದೆ. ಮತ್ತು ಮಣ್ಣಿನ ಪರೀಕ್ಷೆ ಮಾಡುವ ವಿಚಾರದಲ್ಲಿ ಅನೇಕ ಮಾನ್ಯ ಸದಸ್ಯರು ಹೇಳಿದ್ದಾರೆ. ಮಣ್ಣನ್ನು ಪರೀಕ್ಷೆ ಮಾಡುವ ವಿಚಾರದಲ್ಲಿ ಸಾಕಷ್ಟು ಕೆಲಸವಾಗಿದೆ. ಮತ್ತು ರೋಗರುಜಿನಗಳನ್ನು ತಡೆಗಟ್ಟುವುದಕ್ಕೋಸ್ಕರ ಬೇಕಾದಷ್ಟು ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದೇವೆ.

ಮತ್ತೊಂದು ಮುಖ್ಯವಾದ ವಿಷಯವೇನೆಂದರೆ, ಪ್ರತಿಯೊಂದು ಸಾರಿಯೂ ಹೊಸ ಯೋಜನೆಯನ್ನು ತರತಕ್ಕ ವಿಚಾರದಲ್ಲಿ ನಮ್ಮ ರಾಜ್ಯ ಮೊದಲನೆಯದಾಗಿದೆ ಎಂದು ಹೆಮ್ಮೆಯಿಂದ ಹೇಳುತ್ತೇನೆ. ಇಲಿಗಳನ್ನು ನಾಶಮಾಡುವುದಕ್ಕೆ ರೋಡೆಂಟ್ ಕಂಟ್ರೋಲ್ ಸ್ಕೀಂನ್ನು ಕೇಂದ್ರ ಸರ್ಕಾರಕ್ಕೆ ಕಳಿಸಿದ್ದೇವೆ. ಕಳೆದ ಸಾಲಿನಲ್ಲಿ 59 600 ಹೆಕ್ಟೇರ್ಸ್ ಜಮೀನಿನಲ್ಲಿ 25 600 ಮನೆಗಳಲ್ಲಿ ಮಂಡ್ಯ, ಧಾರವಾರ ಶಿವಮೊಗ್ಗ, ರಾಯಚೂರು, ಬಳ್ಳಾರಿ ಜಿಲ್ಲೆಗಳನ್ನು ತೆಗೆದುಕೊಂಡು ಇಲಿಗಳನ್ನು ನಾಶಮಾಡಿದ್ದೇವೆ. 34 ಲಕ್ಷ ರೂಪಾಯಿಗಳನ್ನು ಇಲಿಗಳನ್ನು ನಾಶಮಾಡುವುದಕ್ಕಾಗಿ ಖರ್ಚು ಮಾಡಿದ್ದೇವೆ. ಈ ಸ್ಕೀಮನ್ನು ಈ ವರ್ಷದಲ್ಲಿಯೂ ಸಹ ಮುಂದುವರೆಸುತ್ತೇವೆ ಎಂದು ಭಾರತ ಸರ್ಕಾರದವರು ತೀರ್ಮಾನ ತೆಗೆದುಕೊಂಡಿದ್ದಾರೆ. ಮುಂದಿನ ವರ್ಷದಲ್ಲಿ ಯಾವ ಯಾವ ಜಿಲ್ಲೆಗಳನ್ನು ತೆಗೆದುಕೊಳ್ಳಬೇಕು ಎನ್ನುವ ಬಗ್ಗೆ ತೀರ್ಮಾನ ತೆಗೆದುಕೊಳ್ಳುತ್ತೇವೆ.

ಶಕ್ತಿವಾನ್ ಬೆಳೆಗಳು ಹೆಚ್ಚು ಇಳುವರಿ ಕೊಡತಕ್ಕ ಬೆಳೆಗಳನ್ನು 2½ ಲಕ್ಷ ಹೆಕ್ಟೇರಿನಲ್ಲಿ ತೆಗೆಯಬೇಕು ಎಂಬ ಒಂದು ಅಂದಾಜನ್ನು ಇಟ್ಟುಕೊಂಡಿದ್ದೇವೆ. ಎಲ್ಲಾ ಜಿಲ್ಲೆಗಳಲ್ಲೂ ಎಷ್ಟು ಎಕರೆಗಳನ್ನು ತೆಗೆದುಕೊಳ್ಳಬೇಕು ಎನ್ನುವುದನ್ನು ತೀರ್ಮಾನ ಮಾಡುತ್ತೇವೆ.

ನಮ್ಮ ರಾಜ್ಯದಲ್ಲಿ ಇಡೀ ದೇಶದಲ್ಲೇ ಮೊದಲನೆಯದಾಗಿ ಬ್ಲಾಕ್ ಡೆಮಾನ್‌ಸ್ಟ್ರೇಷನ್ ಮಾಡಿದ್ದೇವೆ. 10 ಗುಂಟೆ ಅಥವಾ ಅರ್ಧ ಎಕರೆ ಜಮೀನು ತೆಗೆದುಕೊಂಡು ಮೊದಲು ಮಾಡಿದ್ದೇವೆ. ಒಂದು ಅಚ್ಚುಕಟ್ಟಿನಲ್ಲಿ ಖುಷ್ಕಿ, ಬಾಗಾಯ್ತು, ತರಿ ಜಮೀನನ್ನು ತೆಗೆದುಕೊಂಡು ಬ್ಲಾಕ್ ಡೆಮಾನ್‌ಸ್ಟ್ರೇಷನ್ ಮಾಡಿದ್ದೇವೆ. ಇಡಿ ದೇಶದಲ್ಲಿ ನಮ್ಮ ರಾಜ್ಯವೇ ಮೊದಲನೆಯದು ಸಾವಿರ ಬ್ಲಾಕ್ ಡೆಮಾನ್‌ಸ್ಟ್ರೇಷನ್‌ನ್ನು 17,000 ಹೆಕ್ಟೇರಿನಲ್ಲಿ ಈ ಯೋಜನೆಯನ್ನು ಕಾರ್ಯಗತ ಮಾಡಿದ್ದೇವೆ. ಇದರ ಮುಖ್ಯ ಗುರಿ ಏನೆಂದರೆ, ರೈತರಿಗೆ ಯಾವ ಯಾವ ಇನ್‌ಪುಟ್ಸ್ ಕೊಡಬೇಕಾಗಿದೆ ಅಂದರೆ. ಯಾವರೀತಿ ಉತ್ಪನ್ನ, ಮಾಡಬೇಕು, ಯಾವರೀತಿ ಪರಿಷ್ಕರಿಸಬೇಕು, ಗೊಬ್ಬರವನ್ನು ಯಾವ ರೀತಿ ಹದಮಾಡಿ ಕೊಡಬೇಕು — ಈ ಎಲ್ಲಾ ವಿಚಾರಗಳನ್ನು ರೈತರಿಗೆ ತಿಳಿಸಿ 30—35 ಪರ್ಸೆಂಟ್ ಹೆಚ್ಚು ಉತ್ಪಾದನೆ ಬರುವ ರೀತಿಯಲ್ಲಿ ಮಾಡಿದ್ದೇವೆ. ಮೂಲಭೂತವಾಗಿ ಹೇಳುವುದಾದರೆ ನಮ್ಮ ರಾಜ್ಯದಲ್ಲಿ 1976-77ರಲ್ಲಿ $4\frac{1}{2}$ ಲಕ್ಷ ಬೇಲಿನಷ್ಟು ಹತ್ತಿಯನ್ನು ಉತ್ಪಾದನೆ ಮಾಡಿದ್ದೇವೆ. ಇದಕ್ಕೆ ಸರಿಯಾದ ಬೆಲೆ ದೊರಕಲಿಲ್ಲ, ಆಮದು ಮಾಡಿಕೊಳ್ಳುವುದು ಕಡಿಮೆಯಾಗಿರುವುದೇ ಇದಕ್ಕೆ ಕಾರಣ. ಬೇರೆ ಬೇರೆ ದೇಶದಲ್ಲಿ ಶಕ್ತಿಮಾನ್ ಹತ್ತಿಯನ್ನು ಕಂಡುಹಿಡಿದರೂ ಕೂಡ ಈ ವರಲಕ್ಷ್ಮಿ ಹತ್ತಿ ತಳಿ ಅವೆಲ್ಲವನ್ನೂ ಮೀರಿಸಲು ಸಾಧಿತವಾಗಿದೆ. ಆದುದರಿಂದ ಈ ವರ್ಷದಲ್ಲಿ $9\frac{1}{2}$ ಲಕ್ಷ ಬೇಲಿನಷ್ಟು ಹತ್ತಿ ಉತ್ಪಾದನೆ ಮಾಡಬೇಕು ಎಂದು ಯೋಚನೆ ಮಾಡಿದ್ದೇವೆ. ರೈತರಿಗೆ ವರಲಕ್ಷ್ಮಿ ಹತ್ತಿ ಬೀಜವನ್ನು ಒಂದು ಕೆ.ಜಿ.ಗೆ 35 ರೂಪಾಯಿನಂತೆ ಕೊಡಬೇಕು ಎಂದು ತೀರ್ಮಾನ ಮಾಡಿದ್ದೇವೆ. ನೀರಾವರಿ ಪ್ರದೇಶದಲ್ಲಿ ಬೆಳೆಯುತಕ್ಕವರಿಗೆ ಹೋಲ್‌ಸೇಲ್ ರೇಟ್ ಅಂದರೆ ಕ್ವಿಂಟಾಲ್ ರೇಟ್‌ನಲ್ಲಿ ತೆಗೆದುಕೊಂಡರೆ 65 ರೂಪಾಯಿಗೆ, ರೀಟೇಲಾಗಿ ತೆಗೆದುಕೊಂಡರೆ 75 ರೂಪಾಯಿಗೆ ಒಂದು ಕೆ.ಜಿ.ಯಂತೆ ಹತ್ತಿ ಬೀಜವನ್ನು ಕೊಡಬೇಕು ಎಂದು ತೀರ್ಮಾನ ತೆಗೆದುಕೊಂಡಿದ್ದೇವೆ.

ಎಣ್ಣೆಕಾಳುಗಳಿಗೆ ಇವತ್ತು ದೇಶದಲ್ಲಿ ಎಲ್ಲಾ ಕಡೆಯೂ ಅಭಾವ ಬಂದು ಈಗ ಅದರ ಕೊರತೆ ಇರುವುದರಿಂದ ಈ ವರ್ಷದಲ್ಲಿ ಸುಮಾರು $9\frac{1}{2}$ ಲಕ್ಷ ಟನ್‌ಗಳಷ್ಟು ಎಣ್ಣೆಕಾಳುಗಳನ್ನು ಬೆಳೆಯಬೇಕೆಂದು ಗುರಿಯನ್ನು ನಾವು ಇಟ್ಟುಕೊಂಡಿದ್ದೇವೆ. ನಮ್ಮ ರಾಜ್ಯದಲ್ಲಿ ವರ್ಜೀನಿಯ ಸಿಗರೇಟ್ ಮತ್ತು ಹೊಗೆಸೊಪ್ಪು ಬಹಳ ಪ್ರಸಿದ್ಧಿಯಾಗಿದೆ. ಆದ್ದರಿಂದ ಮೈಸೂರು ಟೊಬ್ಯಾಕೊ ಮೂಲಕ ಅದನ್ನು ಬೆಳೆಯುವುದು ಅವಶ್ಯಕ. ಅದನ್ನು ಈಗ ಯೂರೋಪಿಯನ್ ಇಕನಾಮಿಕ್ ಕಮ್ಯೂನಿಟಿ ಅಂಡ್ ಜಪಾನ್ ಅವರು ಬೆಳೆಸುವುದಕ್ಕೆ ಮುಂದೆ ಬಂದಿದ್ದಾರೆ. ಆದ್ದರಿಂದ ಇದು ಒಂದು ಹರ್ಷದಾಯಕ ಸುದ್ದಿ. ಇದಕ್ಕಾಗಿ ಸುಮಾರು 30 ಸಾವಿರ ಟನ್‌ಗಳಷ್ಟು ಹೊಗೆಸೊಪ್ಪನ್ನು ಈ ವರ್ಷದಲ್ಲಿ ಬೆಳೆಯುವ ಗುರಿಯನ್ನು ನಾವು ಇಟ್ಟುಕೊಂಡಿದ್ದೇವೆ. ಮಾನ್ಯ ಸ್ನೇಹಿತರು ಹೇಳಿದಹಾಗೆ ಮಳೆ ಕಡಿಮೆ ಬೀಳುವ ಪ್ರದೇಶಗಳಲ್ಲಿ ಅದರಲ್ಲಿಯೂ ಇಂಟಿಗ್ರೇಟೆಡ್ ಡ್ರೈ ಲ್ಯಾಂಡ್ ಡೆವಲಪ್‌ಮೆಂಟ್ ಏಜೆನ್ಸಿ ಮೂಲಕ ಬಿಜಾಪುರ ಮತ್ತು ಹಡಗಲಿನಲ್ಲಿ ಅದನ್ನು ಮಾಡಬೇಕೆಂದು ಪ್ರಯತ್ನ ಮಾಡುತ್ತಿದ್ದೇವೆ.

ಇನ್ನು ಮಾನ್ಯ ಸದಸ್ಯರಲ್ಲಿ ಕೆಲವರು ಗ್ರಾಮ ಸೇವಕರಿಗೆ ಕೊಡುವ ನೂರು ರೂಪಾಯಿಗಳ ಸ್ಟೈಫಂಡ್ ಏನೇನು ಸಾಲದು ಎಂಬುದಾಗಿ ಹೇಳಿದ್ದಾರೆ. ರೈತರ ಮಕ್ಕಳಿಗೆ 60 ರೂಪಾಯಿಗಳನ್ನು ಒಂದು ತಿಂಗಳಿಗೆ ಸ್ಟೈಫೆಂಡಾಗಿ ಇದುವರೆಗೂ ಕೊಡುತ್ತಿದ್ದೆವು. ಈಗ ಅದನ್ನು 00 ರೂಪಾಯಿಗಳಿಗೆ ಹೆಚ್ಚು ಮಾಡಿ ಕೊಡಬೇಕೆಂದು ಸರ್ಕಾರ ತೀರ್ಮಾನ ತೆಗೆದುಕೊಂಡಿದೆ. ಗ್ರಾಮ ಸೇವಕರಿಗೆ ಈಗ ಕೊಡುತ್ತಿರುವ ಸ್ಟೈಫೆಂಡ್ ಸಹ ಏನೇನು ಸಾಲದು, ಅದರ ಬಗ್ಗೆಯೂ ಇನ್ನೂ ಹೆಚ್ಚಿಸಲು ಮುಂದೆ ಸೂಕ್ತ ಗಮನ ಕೊಡುತ್ತೇವೆ. ರೈತರ ಮಕ್ಕಳಿಗೆ ಇಷ್ಟೊಂದು ಅನುಕೂಲ ಮಾಡಿಕೊಟ್ಟಿದ್ದೇವೆ. ಅದೂ ಅಲ್ಲದೆ ಗ್ರಾಮಾಂತರ ಪ್ರದೇಶಗಳಲ್ಲಿ 13 ಅಗ್ರಿಕಲ್ಚರ್ ಸ್ಕೂಲುಗಳನ್ನು ಅನೇಕ ಕಡೆ ತೆಗೆಯುವ ಯೋಜನೆಯನ್ನು ಇಟ್ಟುಕೊಂಡಿದ್ದೇವೆ

ಶ್ರೀ ಕಾಗೋಡು ತಿಮ್ಮಪ್ಪ.—ಶಿವಮೊಗ್ಗದಲ್ಲಿ ಏನಾಯಿತು ?

ಶ್ರೀ ಎನ್ ಚಿಕ್ಕೇಗೌಡ —ಶಿವಮೊಗ್ಗ ಮತ್ತು ಚಿತ್ರದುರ್ಗದಲ್ಲಿ ಆ ರೀತಿ ಮಾಡಲು ಈ ವರ್ಷ ತೀರ್ಮಾನ ಮಾಡಿದ್ದೇವೆ. ನಮ್ಮ ರಾಜ್ಯದಲ್ಲಿ ಫಾರ್ಮರ್ಸ್ ಟ್ರೈನಿಂಗ್ ಸೆಂಟರ್ಸ್ ಅರ್ಬಿಟ್ರಾನ್ಸ್ ರೂರಲ್ ಡೆವಲಪ್‌ಮೆಂಟ್ ಟ್ರೈನಿಂಗ್ ಸೆಂಟರ್‌ಗಳನ್ನು ತೆರೆದು ವ್ಯವಸಾಯ ಮತ್ತು ಸಂಬಂಧಪಟ್ಟ ಇಲಾಖೆಯವರಿಗೆ ಹೆಚ್ಚಿಗೆ ತರಬೇತಿಯನ್ನು ಕೊಡಬೇಕೆಂದು ತಿಳಿಸಿದ್ದೇವೆ. ಮಂಡ್ಯದಲ್ಲಿ

ಹೆಚ್ಚಿಗೆ ಬತ್ತ ಬೆಳೆಯಲು ಹೆಚ್ಚಿನ ಮಾಹಿತಿ ಸಿಕ್ಕಿರುವುದರಿಂದ ಅದನ್ನು ಅಲ್ಲಿ ಯಥೇಚ್ಛವಾಗಿ ಬೆಳೆಯುವಂತಾಗಿದೆ. ಬೆಳ್ತಂಗಡಿ-ಕುಮುಟಾದಲ್ಲಿ ತರಪೇತಿ ಕೊಟ್ಟಿರುವ ಹಾಗೆ ಮಂಡ್ಯದಲ್ಲಿ 535 ರೈತರಿಗೆ ಈಗಾಗಲೇ ತರಬೇತಿಯನ್ನು ಕೊಟ್ಟಿದ್ದೇವೆ. ಅದೇ ರೀತಿಯಲ್ಲಿ ಎಸ್. ಎಫ್ ಡಿ ಎ. ಫಾರಂಸ್ ಪ್ರಕಾರ ನಾವು ಕೇಂದ್ರ ಸರ್ಕಾರದಿಂದ ಹಣ ಸಹಾಯವನ್ನು ಪಡೆದು 4ನೇ ಯೋಜನೆಯಲ್ಲಿ ಈಗಾಗಲೇ ಮೈಸೂರು, ಬೀದರ್, ಉತ್ತರ ಕನ್ನಡ ತುಮಕೂರು ಹಾಗೂ ಬಿಜಾಪುರದಲ್ಲಿ ತರಪೇತಿಯನ್ನು ಕೊಟ್ಟಿದ್ದೇವೆ. 5ನೇ ಪ್ಲಾನಿನಲ್ಲಿ ಹಾಸನ, ಗುಲ್ಬರ್ಗ, ಬಳ್ಳಾರಿ ಹಾಗೂ ಶಿವಮೊಗ್ಗದಲ್ಲಿ ಅನೇಕ ರೀತಿ ತರಪೇತಿಗಳನ್ನು ಕೊಡಲು ಪ್ರಾರಂಭ ಮಾಡಿದ್ದೇವೆ. ಅವೀಗ ಕಾರ್ಯಗತವಾಗುತ್ತಿದೆ. ರಾಜ್ಯ ಸರ್ಕಾರದ ವತಿಯಿಂದ ಎರಡು ಜಿಲ್ಲೆಗಳಲ್ಲಿ ಅಂದರೆ ಬೆಂಗಳೂರು, ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ತರಪೇತಿ ಕೇಂದ್ರಗಳು ಸ್ಥಾಪನೆಯಾಗಿವೆ. ಅಲ್ಲದೆ ಸಣ್ಣ ರೈತರನ್ನು ಗುರುತಿಸತಕ್ಕಂಥ ಕೆಲಸದಲ್ಲಿಯೂ ಈವರೆಗೆ ಸುಮಾರು 11. 21 350 ಜನರನ್ನು ಸಣ್ಣ ರೈತರೆಂದು ಗುರಿತಿಸಿದ್ದೇವೆ. 2, 79, 335 ಮಂದಿ ಸಣ್ಣ ರೈತರಿಗೆ ಬೇಕಾದಂತಹ ಸಾಲದ ಸೌಲಭ್ಯ ಸಬ್‌ಸಿಡಿ ಕೊಡುವ ವ್ಯವಸ್ಥೆಯನ್ನು ಮಾಡಿದ್ದೇವೆ.

ಇನ್ನು ಕೃಷಿ ವಿಶ್ವವಿದ್ಯಾನಿಲಯದ ಬಗ್ಗೆ ನಮ್ಮ ಮಾನ್ಯ ಸ್ನೇಹಿತರನೇಕರು ಕೆಲವು ವಿಚಾರಗಳನ್ನು ಹೇಳಿದರು. 1976-77ರಲ್ಲಿ 32-5 ಜನ ವಿದ್ಯಾರ್ಥಿಗಳಿಗೆ ತರಪೇತಿಯನ್ನು ಫರ್ಟಿಲೈಜರ್ಸ್ ಪೋಸ್ಟ್ ಗ್ರಾಜುಯೆಟ್ ಕೋರ್ಸಿನಲ್ಲಿ ಕೊಟ್ಟಿದ್ದೇವೆ. ಧಾರವಾಡದ ಕಾಲೇಜ್ ಆಫ್ ಹೋಮ್ ಸೈನ್ಸ್‌ನಲ್ಲಿ ಹೆಣ್ಣು ಮಕ್ಕಳು ತರಬೇತಿ ಹೊಂದಲು ಹೆಚ್ಚಿಗೆ ಹಣವನ್ನು ಈ ವರ್ಷದಲ್ಲಿ ಒದಗಿಸಿದೆ ೀವೆ. ಕಳೆದ ವರ್ಷದಲ್ಲಿ ಅಗ್ರಿಕಲ್ಚರಲ್ ಮಾರ್ಕೆಟಿಂಗ್ ಅಂಡ್ ಕೋಆಪರೇಷನ್ ಅಗ್ರಿಕಲ್ಚರಲ್ ಸೆಂಟರ್ಸ್ ತೆರೆದು 4 ವರ್ಷದ ಪದವೀಧರ ತರಗತಿಗಳನ್ನು ಈಗಲೂ ನಡೆಸುತ್ತಿದ್ದೇವೆ ಅದರ ಜೊತೆಗೆ ಪಿ.ಎಚ್.ಡಿ. ಎಂಬ ಒಂದು ಹೊಸ ಶಾಖೆಯನ್ನು ತೆರೆದಿದ್ದೇವೆ ಮತ್ತು ವ್ಯವಸಾಯದ ಕೃಷಿ ವಿಶ್ವವಿದ್ಯಾನಿಲಯದವರು ಹಾಗೂ ಅಕೆಡೆಮಿಕ್ ಕೌನ್ಸಿಲ್ ಹಾಗೂ ಒಂದು ಎಕ್ಸ್‌ಪರ್ಟ್ಸ್ ಕಮಿಟಿಯವರು ಒಂದು ಫಾರೆಸ್ಟ್ ಕಾಲೇಜನ್ನು ಪ್ರಾರಂಭ ಮಾಡಬೇಕೆಂದು ಶಿಫಾರಸ್ಸು ಮಾಡಿದ್ದಾರೆ. ಇದಿನ್ನೂ ಇಂಡಿಯನ್ ಕೌನ್ಸಿಲ್ ಆಫ್ ಅಗ್ರಿಕಲ್ಚರಲ್ ರಿಸರ್ಚನಲ್ಲಿ ತೀರ್ಮಾನವಾಗಬೇಕಾಗಿದೆ. ಆ ತೀರ್ಮಾನಕ್ಕೆ ನಾವಿನ್ನೂ ಕಾಯುತ್ತಿದ್ದೇವೆ. ಅದೇ ರೀತಿಯಲ್ಲಿ ನಮ್ಮ ರಾಯಚೂರು ಅಗ್ರಿಕಲ್ಚರಲ್ ಅಂಡ್ ಇ ಜಿನೀಯರಿಂಗ್ ಇನ್ಸಿಟಿಟ್ಯೂಟನ್ನು ಇಂಜಿನಿಯರಿಂಗ್ ಕಾಲೇಜನ್ನಾಗಿ ಅಪ್‌ಗ್ರೇಡ್ ಮಾಡಬೇಕೆಂದು ಅನೇಕರಿಂದ ನಮಗೆ ಈಗಾಗಲೇ ಬಹಳ ಬೇಡಿಕೆಗಳು ಬಂದಿದೆ. ಈ ವಿಚಾರವನ್ನು ಸಂಬಂಧಪಟ್ಟ ಡಿಪಾರ್ಟ್‌ಮೆಂಟ್‌ನವರ ಹಾಗೂ ಕೇಂದ್ರ ಸರ್ಕಾರದ ಮುಂದೆ ಇಟ್ಟು ಅದರ ಬಗ್ಗೆ ಒಪ್ಪಿಗೆ ಕೊಡಬೇಕೆಂದು ಹೇಳಿದ್ದೇವೆ. ಅದರ ಬಗ್ಗೆ ಕೇಂದ್ರದಿಂದ ಐ.ಸಿ.ಎ.ಆರ್.ಎಂ. ಒಂದು ಟೀಮ್ ಬಂದು ಅವರು ಅದನ್ನು ಈಗ ಒಪ್ಪಿಕೊಳ್ಳುವ ಸ್ಥಿತಿಯಲ್ಲಿದ್ದಾರೆಂಬ ವಿಷಯ ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳಿಂದಲೂ ಹಾಗೂ ವಿಶ್ವವಿದ್ಯಾನಿಲಯದವರಿಂದಲೂ ತಿಳಿದು ಬಂದಿದೆ. ರಿಸರ್ಚ್ ಅಗ್ರಿಕಲ್ಚರಲ್ ಯೂನಿವರ್ಸಿಟಿಯಲ್ಲಿ ಬತ್ತವು ಚಳಿಗಾಲದಲ್ಲಿ ಹೆಚ್ಚಿಗೆ ಬಿತ್ತನೆಗೆ ಬರುವುದಿಲ್ಲ ಎಂಬುದಾಗಿ ತಿಳಿದು ಬಂದಿದೆ. ಆ ಕಾಲದಲ್ಲಿ ಆ ಬೆಳೆಗೆ ಎಂ ಆರ್. 301, 222 ಐ ಇ. ಟಿ. 92 32 33 ಕೆಲವು ಕೀಟಗಳು ಬರುತ್ತವೆ. ಅದೇ ರೀತಿಯಲ್ಲಿ ಹೈಬ್ರಿಡ್ ಜವಾರ್‌ನಲ್ಲಿಯೂ ಒಳ್ಳೆಯ ತಳಿ 36 ಟಿ ಡಿ. ಯಲ್ಲಿರುತ್ತದೆಂದು ಕಂಡು ಹಿಡಿದಿದ್ದಾರೆ. ಅದೇ ರೀತಿಯಲ್ಲಿ ರಾಗಿಯಲ್ಲಿಯೂ ಸಹ ಇವತ್ತು ಹೆಚ್ಚಿನ ಕೀ ಸವಾಗಿದೆ ರಾಗಿ ಬೆಳೆಯನ್ನು ಪರಿಶೋಧನೆ ಮಾಡತಕ್ಕ ಮಂಡ್ಯದಲ್ಲಿರತಕ್ಕ ಕೃಷಿ ಸಂಶೋಧನಾ ಕೇಂದ್ರದಲ್ಲಿ .05 ದಿವಸಗಳಲ್ಲಿಯೇ ಬರತಕ್ಕಂಥ ಎಚ್. ಆರ್. 305-74 ತಳಿಯನ್ನು ಕಂಡು ಹಿಡಿದಿದ್ದಾರೆ. ನಮಗೆ ಈಗ ಬರುತ್ತಿರುವ ದ್ರಾಕ್ಷಿ ಬೆಳೆಗೆ ಮಳೆ ಸರಿಯಾಗಿ ಆಗದಿದ್ದರೆ ಬಡ್ ಸರಿಯಾಗಿ ಬರುವುದಿಲ್ಲ. ಆದ್ದರಿಂದ ಸಾಂಡೋಲಿನ್ 1.2 ಮತ್ತು 5 ಪರ್ಸೆಂಟ್ ಉಪಯೋಗಿಸಿದರೆ ಅದರ ಬೆಳೆ ಜಾಸ್ತಿ ಬರುತ್ತದೆಂದು ಕಂಡುಹಿಡಿದಿದ್ದಾರೆ. ಇನ್ನು ರೈತರಿಗೆ ಒದಗಿಸುವ ಟ್ರಾಕ್ಟರ್, ಪಂಪ್ ಸೆಟ್ಸ್, ಪವರ್‌ಟಿಲರ್ಸ್ ಇವುಗಳಿಗೆ ಕೊಟ್ಟಿರತಕ್ಕ ತಕಾವಿ ಸಾಲದ ಮೇಲೆ ಪೀನಲ್ ಇಂಟರೆಸ್ಟ್ ಹಣವನ್ನು ಪೂರ್ಣವಾಗಿ ಡಿಸೆಂಬರ್ 31ನೇ ತಾರೀಖಿನವರೆಗೆ ಮನ್ನಾ ಮಾಡಿದ್ದೇವೆಂದು ಈಗಾಗಲೇ ಹೇಳಿದ್ದೇವೆ.

ಈ ವರ್ಷದಲ್ಲಿ ನಾನು ಈಗಾಗಲೇ ಹೇಳಿದಹಾಗೆ 2-3ನೇ ದರ್ಜೆಗಳ ಸೇವಾ ನಿಯಮಗಳಲ್ಲಿ ಇಲಾಖೆಯ ಅಧಿಕಾರಿಗಳು ಬಹಳ ಜನರನ್ನು ರಿಕ್ರೂಟ್ ಮಾಡಿಕೊಳ್ಳಲು ಏಜ್ ರಿಲ್ಯಾಕ್ಸೇಷನ್ ಮಾಡಿ ಹರಿಜನ-ಗಿರಿಜನರಿಗೆ 40 ವರ್ಷಗಳೆಂದೂ, ಬೇರೆಯವರಿಗೆ 35 ವರ್ಷಗಳೆಂದು ತೀರ್ಮಾನ

ಮಾಡಲಾಗಿದೆ. ಇನ್ನು ಮುಂದೆ ಅಗ್ರಿಕಲ್ಚರಲ್ ಅಸಿಸ್ಟೆಂಟ್ ಆಫೀಸರ್ಸ್‌ಗಳನ್ನು ಅಗ್ರಿಕಲ್ಚರಲ್ ಆಫೀಸರ್ಸ್‌ಗಳಾಗಿ ಪ್ರಮೋಷನ್ ಕೊಡಬೇಕೆಂದೂ ಹಾಗೂ ಡೈರೆಕ್ಟ್ ರಿಕ್ರೂಟ್ಸನ್ನು ಆದಷ್ಟು ಕಡಿಮೆ ಮಾಡಿ ಪ್ರೊಮೋಷನ್‌ಗಳನ್ನು ಹೆಚ್ಚಿಗೆ ಕೊಡಬೇಕೆಂದು ತೀರ್ಮಾನ ಮಾಡಲಾಗಿದೆ. ಈಗ ಅದು ಸರ್ಕಾರದ ಪರಿಶೀಲನೆಯಲ್ಲಿದೆ. ಅಫಿಷಿಯಲ್ ಲ್ಯಾಂಗ್ವೇಜ್ ಕಮಿಟಿ ಮುಂದೆ ಗ್ರಾಮ ಸೇವಕರಿಗೂ ನ್ಯೂ ಪೇ ಸ್ಕೇಲ್ ಕೊಡಬೇಕೆಂಬ ಬಗ್ಗೆ ವರದಿಯನ್ನು ಕಳುಹಿಸಿರುವುದರಿಂದ ಅದರ ಬಗ್ಗೆ ಸರ್ಕಾರ ಜಾಗ್ರತೆಯಾಗಿ ಗಮನ ಹರಿಸಿ ಕ್ರಮ ತೆಗೆದುಕೊಳ್ಳುತ್ತದೆ. ಎಲ್ಲಕ್ಕಿಂತ ಹೆಚ್ಚಿಗೆ ಈ ವರ್ಷದಲ್ಲಿ ಆಶಾದಾಯಕವಾದ ಮಳೆ ಎಲ್ಲಾ ಕಡೆಗಳಲ್ಲಿಯೂ ಬಹಳ ಜಾಗ್ರತೆಯಾಗಿ ಶುರುವಾಗಿರುವುದರಿಂದ ಖಾರೀಫ್ ಬೆಳೆ ಬಹಳ ಚೆನ್ನಾಗಿ ಬರುತ್ತದೆಂದೂ, ಬಿತ್ತನೆಯಾಗುವ ಪರಿಸ್ಥಿತಿಯಲ್ಲಿ ಈ ವರ್ಷ ಬಹಳ ಆಶಾದಾಯಕವಾದ ವರ್ಷವಾಗುತ್ತದೆಂದು ಹೇಳಿ, ತಮ್ಮ ಮೂಲಕ ಭಗವಂತನಲ್ಲಿ ಪ್ರಾರ್ಥಿಸುತ್ತೇನೆ. ಇವತ್ತು ಈ ವ್ಯವಸಾಯ ಇಲಾಖೆಯ ಬೇಡಿಕೆಗಳನ್ನು ನಾನೇನು ಈ ಸಭೆಯ ಮುಂದೆ ಇಟ್ಟಿದ್ದೇನೆಯೋ ಅದನ್ನು ಅವಿರೋಧವಾಗಿ ಮಂಜೂರು ಮಾಡಬೇಕೆಂದು ತಮ್ಮ ಮೂಲಕ ನಾನು ಸದಸ್ಯರಿಗೆ ಪ್ರಾರ್ಥನೆ ಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಡಿ. ದೇವರಾಜ ಅರಸ್ — ಕಾರ್ಮಿಕ ಇಲಾಖೆಗೆ ಸಂಬಂಧಪಟ್ಟ ಹಾಗೆ ನಾನೀಗ ಒಂದು ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ ಇಚ್ಛೆಪಡುತ್ತೇನೆ.

ಅಧ್ಯಕ್ಷರು.— ಕಾರ್ಮಿಕ ಇಲಾಖೆಯ ಬೇಡಿಕೆ ನಾಳೆ ಇವೆ.

ಶ್ರೀ ಡಿ ದೇವರಾಜ ಅರಸ್.— ಶ್ರೀಮಾನ್ ಎಂ. ಎಸ್. ಕೃಷ್ಣನ್ ಅವರು ಈಗ ಉಪವಾಸ ಕುಳಿತಿದ್ದಾರೆ. ಅವರ ಪ್ರಮುಖವಾದ ಬೇಡಿಕೆಗಳಲ್ಲಿ ಬಹಳ ಮುಖ್ಯವಾದುದು ಏನೆಂಬುದು ನನಗೂ ಸಹ ಗೊತ್ತಿದೆ.

ಅಧ್ಯಕ್ಷರೇ ಶ್ರೀಮಾನ್ ಎಂ. ಎಸ್. ಕೃಷ್ಣನ್ ಅವರು ಉಪವಾಸ ಸತ್ಯಾಗ್ರಹ ಕುಳಿತಿರುವುದರಿಂದ ಕೆಲವು ವಿಷಯವನ್ನು ಸಭೆಗೆ ತಿಳಿಸಬೇಕಾಗಿದೆ.

ಶ್ರೀ ಕೋಣಂದೂರು ಲಿಂಗಪ್ಪ.— ಬೇರೆ ಯಾರು ಸತ್ಯಾಗ್ರಹ ಕುಳಿತಿಲ್ಲವೆ ?

ಶ್ರೀ ಕಾಗೋಡು ತಿಮ್ಮಪ್ಪ.— ಮಾನ್ಯ ಸದಸ್ಯರಾದ ಎಂ. ಎಸ್. ಕೃಷ್ಣನ್ ಅವರು ಸತ್ಯಾಗ್ರಹ ಕುಳಿತುಕೊಳ್ಳುವುದಕ್ಕಿಂತ ಮುಂಚೆಯೇ ಬೇರೆಯವರು ಕುಳಿತಿದ್ದಾರೆ. ಫೋರಂ ಆಫ್ ಟ್ರೇಡ್ ಯೂನಿಯನ್ ಅವರು ಉಪವಾಸ ಕುಳಿತಿದ್ದಾರೆ.

Sri D. Devaraj Urs.—I will respond to the Satyagrah being undertaken by Sri M.S. Krishnan as well as the forum of Trade Union Rights.

6-00 ಪಿ. ಎಂ.

ಶ್ರೀ ಕೋಣಂದೂರು ಲಿಂಗಪ್ಪ.— ಆ ಬಗ್ಗೆ ಅಡ್ಜರ್ನ್‌ಮೆಂಟ್ ಮೋಷನ್ ಕೂಡ ಮಂಡನೆ ಮಾಡಿದ್ದೆವು.

Sri D. Devaraj Urs.—That is why I want to inform to the house.. ಈ ಟ್ರೇಡ್ ಯೂನಿಯನ್, ಇದರ ಬಗ್ಗೆ ಏನಾಗಿದೆ ಎಂದರೆ ಈ ಟೆಕ್ಸ್‌ಟೈಲ್ ಮಿಲ್ಲು ಮುಚ್ಚಿರುವುದು ನಿಜ. ಕಾರ್ಮಿಕರಿಗೆ ಅನ್ಯಾಯವಾಗಿರುವುದು ನಿಜ. ಈಗ ಈ ಟೆಕ್ಸ್‌ಟೈಲ್ ಮಿಲ್ಲು 10 ಲಕ್ಷ ರೂಪಾಯಿ ನಷ್ಟ ಹೊಂದಿರುವುದು ಗೊತ್ತಾಗಿದೆ. ಇದರ ಜೊತೆಗೆ ಬ್ಯಾಂಕಿನವರು ಏನು ಮಾಡಿದ್ದಾರೆ ಎಂದರೆ ಅವರಿಗೆ ಫಂಡ್ ಕೊಡುವುದು ನಿಲ್ಲಿಸಿದ್ದಾರೆ. ಅಲ್ಲಿ ದುಡ್ಡು ಇಲ್ಲದ ಮಿಲ್ ಮುಚ್ಚಿದೆ ಮತ್ತೆ ಪ್ರೈಸ್ ಫ್ಲಕ್ಚುಯೇಷನ್‌ನಿಂದ ತೊಂದರೆಯಾಗಿ ಮಿಲ್ ನಿಲ್ಲಿಸಿದ್ದಾರೆ. ಈಗ ಸರ್ಕಾರದಿಂದ 10 ಲಕ್ಷ ರೂಪಾಯಿ ಹಣ ಹಾಕಬೇಕು ಎಂದು ಹೇಳುತ್ತಿದ್ದೇವೆ. ಬಾಕಿ ಹಣವನ್ನು ಬೇರೆ ರೂಪದಲ್ಲಿ ಒದಗಿಸುವುದಕ್ಕೆ ಪ್ರಯತ್ನ ಮಾಡೋಣ ಎಂದು ಹೇಳಿದ್ದೇವೆ. ಅಲ್ಲದೇ ಸಂಬಂಧಪಟ್ಟ ದಾವಣಗೆರೆ ಮುನಿಸಿಪಾಲಿಟಿ ಚೇರ್ಮನ್ ಅವರಲ್ಲಿ ನೆಗೋಷಿಯೇಟ್ ಮಾಡಿದ್ದೇವೆ. ಇದರ ಬಗ್ಗೆ ಸಿ. ಐ. ಟಿ. ಯು. ಛೇರ್ಮನ್‌ರವರು ಮಾತನಾಡಿದ್ದಾರೆ, ಈ ಮಿಲ್ಲಿಗೆ ಸಂಬಂಧಪಟ್ಟ ಹಾಗೆ

ಸ್ಕೈಟುಗಳಿಗೆ ಅನುಕೂಲ ವಾಗುವಂತಹ ಭೂಮಿ ಇದೆ. ಆ ಭೂಮಿಯನ್ನು ಸಿ ಐ.ಟಿ.ಬಿ ಅವರು ತೆಗೆದುಕೊಂಡರೆ. ಆಗ ದುಡ್ಡು ಬರುತ್ತದೆ, ಆ ದುಡ್ಡನ್ನು ಈ ಮಿಲ್ಲಿಗೆ ಹಾಕಿಸಬಹುದು. ಫೈನಾನ್ಸ್ ಕಾರ್ಪೊರೇಷನ್‌ನಲ್ಲ ದುಡ್ಡು ತೆಗೆದುಕೊಂಡಿರುವುದಕ್ಕೆ ಸೆಕ್ಯೂರಿಟಿ ಕೊಟ್ಟಿದ್ದರು, ಅವರು ವ್ಯಾಲ್ಯು ಯೇಷನ್ ಕಡಿಮೆಯಾಗುತ್ತದೆ ಎಂದು ಹೇಳಿದರು ಮಿಲ್ ನಡೆಸುವ ದೃಷ್ಟಿಯಿಂದ ನಮ್ಮ ಸ್ಟೇಟ್ ಫೈನಾನ್ಸ್ ಕಾರ್ಪೊರೇಷನ್‌ನವರು ಸೆಕ್ಯೂರಿಟಿ ಕಡಿಮೆ ಆದರೂ ಆ ಭೂಮಿಯನ್ನು ಮಾರಾಟ ಮಾಡುವುದಕ್ಕೆ ಒಪ್ಪಿಕೊಳ್ಳುತ್ತಾರೆ. ಅದರಿಂದ ಸ್ವಲ ರಿಲೀಫ್ ಸಿಕ್ಕುತ್ತದೆ. ಇನ್ನು ಮ್ಯಾನೇಜ್ ಮೆಂಟ್ ವಿಚಾರದಲ್ಲಿ ಸರಿಯಾಗಿಲ್ಲ ಎಂದು ಗೊತ್ತಾಗಿದೆ ಈಗ ಸುಂದರಂ ಟೆಕ್ಸ್‌ಟೈಲ್ಸ್ ಎನ್ನುವ ವರಿಗೆ, ನೀವು ಆ ಮ್ಯಾನೇಜ್‌ಮೆಂಟ್ ವಹಿಸಿಕೊಂಡು ಕೆಲವು ಕಾಲ ನಡೆಸಿ ಅದು ಸರಿಯಾದ ಸ್ಥಿತಿಗೆ ಬರಲಿ ಎಂದು ನಾವು ಕೇಳಿಕೊಳ್ಳುತ್ತಿದ್ದೇವೆ ಅವರು ಮಾಡತಕ್ಕ ಮ್ಯಾನೇಜ್‌ಮೆಂಟ್ ಚೆನ್ನಾಗಿದೆ ಎಂದು ತಿಳಿದು ಬಂದಿದೆ. ಇವೊತ್ತು ಸರ್ಕಾರದವರು ತೆಗೆದುಕೊಳ್ಳಿ ಎಂದು ಹೇಳಿದರೆ ಸರ್ಕಾರ ತೆಗೆದುಕೊಳ್ಳುವುದಕ್ಕೆ ಹೊಸ ಬಿಲ್ಲು ಮಾಡಬೇಕಾಗುತ್ತವೆ ಅಲ್ಲದೇ ಇಂಡಸ್ಟ್ರಿಯಲ್ ರೆಗ್ಯುಲೇಷನ್ ಆ್ಯಕ್ಟ್ ಎಂದು ಗವರ್ನ್‌ಮೆಂಟ್ ಆಫ್ ಇಂಡಿಯಾ ಆಕ್ಟ್ ಇದೆ ಅವರಿಗೆ ಬರೆಯಬೇಕಾಗುತ್ತದೆ. ರಾಜ ಮಿಲ್ ಬಗ್ಗೆ ಹಿಂದೆ ಹೀಗೆ ಆಗಿತ್ತು ನಾವು ಅವರಿಗೆ ಬರೆದು ವ್ಯವಹಾರ ಮಾಡಬೇಕಾದರೆ ಒಂದು ವರ್ಷವಾಗುತ್ತದೆ. ಇನ್ನು ನ್ಯಾಷನಲೈಸೇಷನ್ ಟೆಕ್ಸ್‌ಟೈಲ್ ಬ್ಯಾಂಕ್ ಎಂದು ಮಾಡಿ ದ್ದಾರೆ, ಅವರು ಇಂತಹ ಮಿಲ್ಲುಗಳನ್ನು ತೆಗೆದುಕೊಳ್ಳುವುದಿಲ್ಲ ಎಂದು ಹೇಳುತ್ತಾರೆ ಅವರು ಸರ್ಟನ್ ಸ್ಟ್ಯಾಂಡರ್ಡ್ ಇರುವಂತಾದ್ದನ್ನು ಮಾತ್ರ ತೆಗೆದುಕೊಳ್ಳುತ್ತೇವೆ ಎಂದು ಹೇಳುತ್ತಾರೆ. ಆದ್ದರಿಂದ ನಮ್ಮ ರಾಜ್ಯ ಸರ್ಕಾರದಿಂದ ನಾವು ಎಲ್ಲಾ ಪ್ರಯತ್ನ ಮಾಡಿ ಕೆಲವೊಂದು ದಿವಸ ದಲ್ಲೇ ಒಂದು ಷೇಪಿಗೆ ಬರಬೇಕು ಎಂದು ಸಾಕಷ್ಟು ಆಸಕ್ತಿ ವಹಿಸಿದ್ದೇವೆ. ಮಿಲ್ ರೀ ಓಪನ್ ಆಗುವುದಕ್ಕೆ ಪ್ರಯತ್ನಪಡುತ್ತಿದ್ದೇವೆ. ಈ ಮಧ್ಯೆ ಒಂದು ಇಂಡಸ್ಟ್ರೀಯಲ್ ರಿಲೀಫ್ ಬಿಲ್ ತರಬೇಕು ಎಂದು ಮಾಡಿದ್ದೇವೆ. ಇವೊತ್ತು ನಾವು ನೇರವಾಗಿ ತೆಗೆದುಕೊಂಡರೆ ಏನಾಗು ತ್ತದೆ ಎಂದರೆ ಮನಿ ಎ ಟ್ವೆಮ್ ಅವರ ಅಸೆಸ್ಸ್‌ಗಿಂತ ಲ್ಯಯಾಬಿಲಿಟಿ ಜಾಸ್ತಿ ಇರುತ್ತದೆ. ಅದನ್ನು ನಾವು ತೆಗೆದುಕೊಂಡರೆ ಪುನಃ ಪ್ರಾರಂಭ ಮಾಡಬೇಕು ಎಂದರೆ ಅವರ ಲಯಾಬಿಲಿಟೀಸ್ ಇಂಟರೆಸ್ಟ್ ವಗ್ಯೆರೆ ಕಟ್ಟುವುದಕ್ಕೆ ಆಗುವುದಿಲ್ಲ. ಆದ್ದರಿಂದ ಯಾರು ತೆಗೆದುಕೊಳ್ಳುವುದಕ್ಕೂ ಹಿಂಜರಿಯುತ್ತಾರೆ. ಆದುದರಿಂದ ಈ ಲಯಾಬಿಲಿಟೀಸ್ ಸೀಸ್ ಮಾಡುವಂತೆ ಮಾಡಬೇಕು ಎನ್ನುವ ಒಂದು ಬಿಲ್ಲು ತರಬೇಕು ಎಂದು ಮಾಡಿದೇವೆ. ಅದು ಬಹಳ ಮುಖ್ಯವಾದಂಥ ಬಿಲ್ಲು ನಮಗೆ ತಿಳಿದ ಹಾಗೆ ಇದು ಸಹಾಯ ವಾಗುವಂತಹ ಬಿಲ್ಲು, ಅದನ್ನು ತಮ್ಮ ಮುಂದೆ ತರುತ್ತಿದ್ದೇವೆ, ಇಷ್ಟು ವಿಚಾರ ಹೇಳಿದ ಮೇಲೆ ಮಾನ್ಯ ಕಾರ್ಮಿಕ ಮುಖಂಡರುಗಳು ಅವರು ಯಾರೇ ಉಪವಾಸ ಕುಳಿತಿರಲಿ, ಅವರು ಅದನ್ನು ನಿಲ್ಲಿಸಬೇಕು ಎಂದು ಈ ಸಭೆಯ ಮುಖಾಂತರ ಕೇಳಿಕೊಳ್ಳುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ.—ಅಧ್ಯಕ್ಷರೇ, ಈ ಪ್ರೊಫೆಷನಲ್ ಟ್ಯಾಕ್ಸ್ ತೆಗೆಯಬೇಕು ಎನ್ನುವ ಬಗ್ಗೆ ಕೆಲವು ಬೇಡಿಕೆಗಳನ್ನು ಇಟ್ಟು ಕೆಲವರು ಸತ್ಯಾಗ್ರಹ ಮಾಡುತ್ತಿದ್ದಾರೆ.

ಶ್ರೀ ಕೋಣಂದೂರು ಲಿಂಗಪ್ಪ.—ವಿಧಾನ ಪರಿಷತ್ತಿನ ಸದಸ್ಯರಾದ ಚನ್ನಬಸವಯ್ಯನವರು ಕೂಡ ಉಪವಾಸ ಸತ್ಯಾಗ್ರಹ ಮಾಡುತ್ತಿದ್ದಾರೆ.

ಶ್ರೀ ಹೆಚ್ ಡಿ ದೇವೇಗೌಡ.—ಇವೊತ್ತು ಈ ಸದನದ ಮಾನ್ಯ ಸದಸ್ಯರು ಯಾರು ಸತ್ಯಾಗ್ರಹ ಮಾಡುತ್ತಿದ್ದಾರೆ ಎನ್ನುವುದು ಮಾನ್ಯ ಮುಖ್ಯಮಂತ್ರಿಗಳವರ ಗಮನಕ್ಕೆ ಹೋಗಬೇಕು ಎಂದು ಹೇಳುತ್ತಿದ್ದಾರೆ. ಇನ್ನು ವಿದ್ಯಾ ಇಲಾಖೆಗೆ ಸಂಬಂಧಪಟ್ಟಂತೆ ಟೇಕನ್ ಓವರ್ ಸ್ಕೂಲುಗಳ ಬಗ್ಗೆ ಕೆಲವು ಬೇಡಿಕೆಗಳನ್ನು ಇತ್ಯರ್ಥ ಮಾಡಲಿಕ್ಕೆ ಸರ್ಕಾರದ ಗಮನವನ್ನು ಸೆಳೆಯಲಿಕ್ಕೆ ಧರಣಿ ಕುಳಿತಿ ದ್ದಾರೆ. ಅದು ಮಾನ್ಯ ಮುಖ್ಯಮಂತ್ರಿಗಳವರ ಗಮನಕ್ಕೆ ಬರಲಿ ಎಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ.

ಶ್ರೀ ಕಾಗೋಡು ತಿಮ್ಮಪ್ಪ. ನಮ್ಮನ್ನು ಸರ್ಕಾರದ ನೌಕರರು ಎಂದು ಹೇಳಿದ ಮೇಲೆ ಸರ್ಕಾರಿ ನೌಕರರಿಗೆ ಸಿಕ್ಕತಕ್ಕ ಫ್ಯಾಮಿಲಿ ಪೆನ್‌ಷನ್ ವಗ್ಯೆರೆ ಏನು ಇದೆ, ಆ ಸೌಲಭ್ಯ ನಮಗೂ ಸಿಕ್ಕಬೇಕು ಎಂದು ಅವರು ಧರಣಿ ಕುಳಿತ್ತಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಸದಸ್ಯರು ಕೇಳಿರತಕ್ಕ ಬಗ್ಗೆ ನಮಗೆ ಏನು ತೊಂದರೆಯಾಗಿದೆ ಎಂದರೆ 150 ರಿಂದ 160 ಟೇಕನ್ ಓವರ್ ಸ್ಕೂಲ್ಸ್ ಬಗ್ಗೆ ಗಿಫ್ಟ್ ಡೀಡ್ ಎಕ್ಸಿಕ್ಯೂಟ್ ಆಗಿಲ್ಲ. ಅಂತಹವರ ಬಗ್ಗೆ ತೊಂದರೆಯಾಗಿದೆ. ಈಗ 200 ರಿಂದ 410ರ ವರೆಗೆ ಕಂಪ್ಲೀಟ್ ಪ್ರೊಸೆಸ್ ಮಾಡಿದ್ದೇವೆ. ನಾವು ಎಲ್ಲ ರೀತಿಯಿಂದ ಗವರ್ನ್‌ಮೆಂಟ್ ಸರ್ವೆಂಟ್‌ಗಳಿಗೆ ಯಾವ ಸೌಲಭ್ಯ ಕೊಡಬೇಕು ಎಂದು ಈಗಾಗಲೇ ತೀರ್ಮಾನ ತೆಗೆದುಕೊಂಡಿದ್ದೇವೆ. ಕೆಲವೇ ದಿವಸಗಳಲ್ಲಿ ಉಳಿದಂತಹ ಟೇಕನ್ ಓವರ್ ಸ್ಕೂಲ್ಸ್ ಏನು ಇವೆ ಅವುಗಳ ಸಮಸ್ಯೆಯನ್ನು ಕೂಡ ಬಗೆಹರಿಸುತ್ತೇವೆ ಎಂದು ಹೇಳುತ್ತೇನೆ.

ಶ್ರೀ ಡಿ ದೇವರಾಜ ಅರಸ್.—ನಾನು ಈ ಸಭೆಯ ಮೂಲಕ ಸತ್ಯಾಗ್ರಹ ಮಾಡುತ್ತಿರುವವರಿಗೆ ಅಪೀಲ್ ಮಾಡುತ್ತೇನೆ. ಈ ರೀತಿ ಸತ್ಯಾಗ್ರಹ ಉಪವಾಸ ಮಾಡಬೇಕಾದ ಅಗತ್ಯ ಇಲ್ಲ. We are at it. I would request them through this House, that they need not resort to Sathyagraha.

ಶ್ರೀ ಕಾಗೋಡು ತಿಮ್ಮಪ್ಪ —ಈ ಮನೆಯ ಸದಸ್ಯರು ಈ ಸದನ ನಡೆಯುತ್ತಾ ಇರಬೇಕಾದರೆ. ಈ ಸದನದ ಗಮನವನ್ನು ಮತ್ತು ಸರ್ಕಾರದ ಗಮನವನ್ನು ಸೆಳೆಯುವುದಕ್ಕೆ ಆಗುವುದಿಲ್ಲವೇ? ಈ ಸದನ ನಡೆಯುತ್ತಾ ಇರಬೇಕಾದರೆ, ಉಪವಾಸ ಸತ್ಯಾಗ್ರಹ ಮಾಡಬೇಕಾದ ಅಗತ್ಯ ಅಷ್ಟು ಕಾಣುವುದಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಾವು ತೀರ್ಮಾನ ತೆಗೆದುಕೊಂಡ ಮೇಲೆ ಗವರ್ನರ್‌ಗೆ ಹೋಗಿ ಬರುವುದು ಇದೆ, ಅದಕ್ಕೆ ಪ್ರೊಸೀಜರ್ ಇದೆ.

ಶ್ರೀ ಕೆ. ಟಿ. ರಾಥೋಡ್ (ಮೀನುಗಾರಿಕೆ ಮತ್ತು ತೋಟಗಾರಿಕೆ ಶಾಖೆಗಳ ಮಂತ್ರಿಗಳು).—ಮಾನ್ಯ ಸಭಾಧ್ಯಕ್ಷಿಣಿಯವರೇ, ಮೀನುಗಾರಿಕೆ ಮತ್ತು ತೋಟಗಾರಿಕೆ ಅಭಿವೃದ್ಧಿ ಕುರಿತು ಮಂಡಿಸಲ್ಪಟ್ಟು ಬೇಡಿಕೆಗಳ ಬಗ್ಗೆ ಸನ್ಮಾನ್ಯ ಸದಸ್ಯರುಗಳು ತಮ್ಮ ಅಭಿಪ್ರಾಯವನ್ನು ವ್ಯಕ್ತ ಮಾಡಿದ್ದಾರೆ. ಸುಮಾರು 6 ಜನ ಸದಸ್ಯರುಗಳು ಈ ಬೇಡಿಕೆಗಳನ್ನು ಕುರಿತು ತಮ್ಮ ಅಭಿಪ್ರಾಯವನ್ನು ವ್ಯಕ್ತ ಮಾಡಿದ್ದಾರೆ. ಮೊದಲನೆಯದಾಗಿ ಚರ್ಚೆಯನ್ನು ಪ್ರಾರಂಭ ಮಾಡಿದಂಥ ಮಾನ್ಯ ಸದಸ್ಯರಾದ ಕಾಗೋಡು ತಿಮ್ಮಪ್ಪನವರು ಅನೇಕ ಸಲಹೆ ಸೂಚನೆಗಳನ್ನು ಕೊಟ್ಟಿದ್ದಾರೆ. ಈ ಸಲಹೆ ಸೂಚನೆಗಳನ್ನು ಕೊಡುವುದರ ಜೊತೆಗೆ ಮಾನ್ಯ ವಿರೋಧಪಕ್ಷದ ನಾಯಕರಾದ ಶ್ರೀಮಾನ್ ದೇವೇಗೌಡರು, ಶ್ರೀಮಾನ್ ಕಾಗೋಡು ತಿಮ್ಮಪ್ಪನವರು ಹಾಗೂ ಶ್ರೀಮಾನ್ ಕೋಣಂದೂರ್ ಲಿಂಗಪ್ಪನವರು ನಾನು ಕೆಲವು ದಿವಸಗಳ ಹಿಂದೆ ಕ್ಯಾಬಿನೆಟ್ ದರ್ಜೆ ಮಂತ್ರಿಯಾದದ್ದಕ್ಕಾಗಿ ಸದ್ಭಾವನೆಯನ್ನು ವ್ಯಕ್ತಿ ಮಾಡಿದ್ದಾರೆ. ಅದಕ್ಕಾಗಿ ನಾನು ಅವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತಾ 6 ಜನ ಮಾನ್ಯ ಸದಸ್ಯರುಗಳು ಕೊಟ್ಟಿರುವಂಥ ಕೆಲವು ಸಲಹೆಗಳನ್ನು ಕುರಿತು ಕೆಲವು ವಿವರಗಳನ್ನು ಕೊಡಲಿಕ್ಕೆ ಪ್ರಪ್ರಥಮವಾಗಿ ಇಚ್ಛಿಸುತ್ತೇನೆ.

ಮಾನ್ಯ ಕಾಗೋಡು ತಿಮ್ಮಪ್ಪನವರು ಮೀನುಗಾರಿಕೆ ಇಲಾಖೆಯಲ್ಲಿ ಎಷ್ಟು ಪ್ರಗತಿಯನ್ನು ಸಾಧಿಸಬೇಕಾಗಿತ್ತೋ ಅಷ್ಟನ್ನು ಸಾಧಿಸಲಿಕ್ಕೆ ಆಗಲಿಲ್ಲ, ಮಂತ್ರಿಗಳು ಇನ್ನೂ ಹೆಚ್ಚು ದಕ್ಷತೆಯಿಂದ ಅನೇಕ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕು ಎಂದು ಹೇಳಿದ್ದಾರೆ. ಮಾನ್ಯ ಕಾಗೋಡು ತಿಮ್ಮಪ್ಪನವರು ಮತ್ತು ಮಾನ್ಯ ಕೋಣಂದೂರು ಲಿಂಗಪ್ಪನವರು ಮೀನುಗಾರಿಕೆ ಅಭಿವೃದ್ಧಿ ಕುರಿತು ಬಹಳ ಕಳಕಳಿಯಿಂದ ತಮ್ಮ ಅಭಿಪ್ರಾಯಗಳನ್ನು ಆಗಾಗ ಹೇಳುತ್ತಲೇ ಇರುತ್ತಾರೆ. ಕಳೆದ 5 ವರ್ಷಗಳಲ್ಲಿ ಮೀನುಗಾರಿಕೆ ಇಲಾಖೆಯು ಸಾಧಿಸಿರುವಂಥ ಪ್ರಗತಿಯ ಪಕ್ಷಿನೋಟವನ್ನು ಕೊಡುವುದಾದರೆ, ಅವರು ತಮ್ಮ ಅಭಿಪ್ರಾಯವನ್ನು ಬದಲಾಯಿಸುವದಕ್ಕೆ ಸಾಧ್ಯವಾಗಬಹುದೆಂದು ತಿಳಿದುಕೊಂಡಿದ್ದೇನೆ ಈ ಇಲಾಖೆಯಲ್ಲಿ ಅಭಿವೃದ್ಧಿ ಮಾಡಬೇಕಾದಂಥ ಕಾರ್ಯಕ್ಷೇತ್ರವೆಂದರೆ ಒಳನಾಡು ಪ್ರದೇಶ. ಕರಾವಳಿ ಪ್ರದೇಶದಲ್ಲಿ ಸುಮಾರು 300 ಕಿಲೋಮೀಟರ್ ಉದ್ದದ ಕರಾವಳಿ ದೊರೆತು ನಮಗೆ ಮೀನುಗಾರಿಕೆ ಅಭಿವೃದ್ಧಿ ಸಾಧಿಸಲಿಕ್ಕೆ ಅವಕಾಶ ಒದಗಿದೆ. ಸ್ಟೇಟ್ ರೀಆರ್ಗನೈಸೇಷನ್ ಆದಾಗ ಕೇವಲ 2 ಯಾಂತ್ರಿಕ ದೋಣಿಗಳು ಇದ್ದಂಥ ಪ್ರದೇಶದಲ್ಲಿ, ಈಗ 1,100 ಯಾಂತ್ರಿಕ ದೋಣಿಗಳು ಕೆಲಸ ಮಾಡುವಂಥ ಒಂದು ವ್ಯವಸ್ಥೆಯಾಗಿದೆ. ತಮಗೆ ಗೊತ್ತಿದ್ದ ರೀತಿ

ಯಲ್ಲಿ ಈಗ ಸುಮಾರು 15 ಕೋಟಿ ರೂಪಾಯಿಯಷ್ಟು ಫಾರಿನ್ ಎಕ್ಸ್‌ಚೇಂಜ್ ಗಳಿಸುವಷ್ಟು ಮಟ್ಟಿನ ಒಂದು ವ್ಯವಸ್ಥೆಯಾಗಿದೆ. ಮಾನ್ಯ ಸದಸ್ಯರು ಕರಾವಳಿ ಪ್ರದೇಶದಲ್ಲಿ ಮೀನುಗಾರರಿಗೆ ಹೆಚ್ಚಿನ ಅವಕಾಶವನ್ನು ಕಲ್ಪಿಸುವ ಸಲುವಾಗಿ ತರಬೇತಿ ಏನು ಕೊಟ್ಟಿದ್ದೀರಿ, ಹಾಗೆ ತರಬೇತಿ ಹೊಂದಿದವರಲ್ಲಿ ಅನೇಕರು ನಿರುದ್ಯೋಗಿಗಳಾಗಿದ್ದಾರೆ ಎಂಬ ಅಭಿಪ್ರಾಯವನ್ನು ವ್ಯಕ್ತ ಮಾಡಿದರು.

ಶ್ರೀ ಕೊಣಂದೂರು ಲಿಂಗಪ್ಪ : ಫಾರಿನ್ ಎಕ್ಸ್‌ಚೇಂಜ್ ಬರುವುದಕ್ಕೆ ಏನು ಮಾಡಿದಿರಿ ?

ಶ್ರೀ ಕೆ. ಟಿ. ರಾಥೋಡ್.- ಉತ್ಪಾದನೆ ಹೆಚ್ಚಿಸಲಾಗಿದೆ. ಹೆಚ್ಚಿನ ಸಂಖ್ಯೆಯ ಯಾಂತ್ರಿಕ ದೋಣಿಗಳು ಮೀನು ಹಿಡಿಯಲು ಬರುವಂತೆ ಸರ್ಕಾರದ ಸಹಾಯ ದೊರೆತಿದ್ದು ಫಿಷ್ ಕ್ಯಾಚಸ್ ಬಂದು ಇಳಿಯುವಂತಾಗಿದೆ ಒಂದು ಲಕ್ಷ ಟನ್‌ನಷ್ಟು ಮೀನು ದೊರಕುವಂತಾಗಿ ಅದರಲ್ಲಿ ಆರು ಸಹಸ್ರ ಟನ್‌ನಷ್ಟು ಮೀನು ಹೊರದೇಶಕ್ಕೆ ಹೋಗುತ್ತಿದೆ. ಆದುದರಿಂದ ಅಲ್ಲಿ ನಮ್ಮ ಮೀನುಗಾರ ಜನರಿಗೆ ಸಾಕಷ್ಟು ಕೆಲಸ ಸಿಗುತ್ತಿದೆ ಜೊತೆಗೆ ಫಾರಿನ್ ಎಕ್ಸ್‌ಚೇಂಜ್ ಕೂಡ ಗಳಿಸಲಿಕ್ಕೆ ಅವಕಾಶವಾಗಿದೆ. ಕೇವಲ 6 ಸಹಸ್ರ ಟನ್‌ನಷ್ಟು ಮೀನು ಹೊರದೇಶಕ್ಕೆ ಹೋಗುವ ವ್ಯವಸ್ಥೆ ಇದ್ದರೆ, ಉಳಿದ 94-95 ಸಹಸ್ರ ಟನ್‌ನಷ್ಟು ಮೀನು ಒಳನಾಡಿನಲ್ಲಿ ಉಪಯೋಗಕ್ಕೆ ದೊರೆಯುತ್ತಿದೆ.

ಶ್ರೀ ಕೊಣಂದೂರು ಲಿಂಗಪ್ಪ.—ಬಿರ್ಲಾ ಕಂಪೆನಿಗೆ ಕೊಡುತ್ತೀರಾ ?

ಶ್ರೀ ಕೆ. ಟಿ. ರಾಥೋಡ್.—ಒಳನಾಡಿನಲ್ಲಿ ಉಪಯೋಗ ಮಾಡುವಂಥಾದ್ದು ಎಲ್ಲಾ ಸೇರಿದರೆ 21 ಕೋಟಿ ರೂಪಾಯಿ ಬೆಲೆಯ ಮೀನುಗಾರಿಕೆ ಅಭಿವೃದ್ಧಿಯನ್ನು ಸಾಧಿಸಲಿಕ್ಕೆ ಸಾಧ್ಯವಾಗಿದೆ.

ಒಳನಾಡಿನ ಮೀನುಗಾರಿಕೆ ವಿಷಯದಲ್ಲಿ ಹೇಳುವುದಾದರೆ, ಮೊದಲು ನಾವು ಮೀನಿನ ಮರಿಗಳನ್ನು ಕಲ್ಕತ್ತಾದಿಂದ ತರಿಸುತ್ತಿದ್ದೆವು, ಈಗ ನಮ್ಮಲ್ಲಿ ಮೀನಿನ ಮರಿಗಳು ಉತ್ಪಾದನೆ ಹೆಚ್ಚಾಗಿದೆ. ಆದರೂ ನಮ್ಮ ಎಲ್ಲ ಅವಶ್ಯಕತೆಯನ್ನೂ ಪೂರೈಸಲಾಗುತ್ತಿಲ್ಲ. ಈ ಕೊರತೆಯನ್ನೂ ತುಂಬುವುದಕ್ಕೆ ಮೀನ ಮರಿಗಳ ಉತ್ಪಾದನಾ ಕೇಂದ್ರಗಳನ್ನು ಹೆಚ್ಚಾಗಿ ಪ್ರಾರಂಭ ಮಾಡಿದ್ದೇವೆ. ಮೊದಲು ಕೇವಲ 2 ಕೋಟಿ ಮೀನುಮರಿಗಳು ಉತ್ಪಾದನೆಯಾಗುತ್ತಾ ಇದ್ದದ್ದು ; ಇವತ್ತಿನದಿವಸ ಸುಮಾರು 8 ಕೋಟಿ ಮೀನುಮರಿಗಳ ಉತ್ಪಾದನೆ ಮಾಡುವಂತೆ ಮಾಡಿದ್ದೇವೆ. ಇನ್ನೂ ನಮ್ಮ ಒಳನಾಡು ಪ್ರದೇಶದಲ್ಲಿರುವ ಥವ ಸಮಗ್ರವಾದ ನೀರಿನ ಉಪಯೋಗವನ್ನು ಮಾಡಿಕೊಂಡು ನಾವು ಈ ಉತ್ಪಾದನೆಯನ್ನು ಹೆಚ್ಚಿಸುವುದಾದರೆ ನಮಗೆ ಇನ್ನೂ ಸುಮಾರು 20 ಕೋಟಿ ಮೀನು ಮರಿಗಳು ಒದಗಬೇಕಾಗಿವೆ. ಈ ದಿಶೆಯಲ್ಲಿ ಸರ್ಕಾರ ಕಾರ್ಯ ಕ್ರಮವನ್ನು ಹಾಕಿಕೊಂಡು ಹಂತಹಂತವಾಗಿ ಕೆಲಸವನ್ನು ಮಾಡುತ್ತಿದೆ. ಕಳೆದ 5 ವರ್ಷಗಳಲ್ಲಿ ಮೊದಲು 2 ಕೋಟಿ ಇದದ್ದು ಈಗ 8 ಕೋಟಿಗಳಷ್ಟು ಮೀನುಮರಿಗಳ ಉತ್ಪಾದನಾ ಗುರಿಯನ್ನು ಸಾಧಿಸಲಾಗಿದೆ ಮಾನ್ಯ ಸದಸ್ಯರು ತರಬೇಕಾದ ಎಲ್ಲಾ ವಿದ್ಯಾರ್ಥಿಗಳಿಗೆ ಉದ್ಯೋಗಾವಕಾಶವನ್ನು ದೊರಕಿಸುವುದಕ್ಕೆ ಆಗಿಲ್ಲ ಎನ್ನುವ ಅಭಿಪ್ರಾಯವನ್ನು ವ್ಯಕ್ತ ಮಾಡಿದ್ದಾರೆ. ಅಂಥಾದ್ದೇನೂ ಆಗಿಲ್ಲ 2,600 ತರಬೇತಿ ಹೊಂದಿದಂಥ ಜನರಲ್ಲಿ 600 ಜನರಿಗೆ ದೋಣಿಗಳನ್ನು ಕೊಡುವ ವ್ಯವಸ್ಥೆಯಾಗಿದೆ. ಆದರೆ ಇದು ಇನೂ ಹೆಚ್ಚಿನ ಪ್ರಮಾಣದಲ್ಲಿ ಆಗಬೇಕಾಗಿದೆ,

ಶ್ರೀ ಕೊಣಂದೂರು ಲಿಂಗಪ್ಪ.—ಸರ್ಕಾರದಿಂದ ಏನೇ ಆಗಲೀ ತರಬೇತು ಹೊಂದಿದವರಿಗೆ ಯಾಂತ್ರಿಕ ದೋಣಿಗಳನ್ನು ಕೊಟ್ಟು ಉದ್ಯೋಗವನ್ನು ದೊರಕಿಸಿಕೊಡಬೇಕು ಬಿರ್ಲಾ ಮಧ್ವರಾಜ್ ಕಂಪನಿಗೆ ಕೊಟ್ಟಿದ್ದೀರಾ ?

ಶ್ರೀ ಕೆ. ಟಿ ರಾಥೋಡ್.—ಎಲ್ಲರೂ ಸ್ವಂತವಾಗಿ ಪಡೆದಂಥ ದೋಣಿಗಳಿಂದಲೇ ಕೆಲಸ ಮಾಡಬೇಕು ಎಂದೇನೂ ಇಲ್ಲ. ಬೇರೆ ವಿಧಾನದಲ್ಲಿ ಉದ್ಯೋಗಾವಕಾಶಗಳು ದೊರಕಿಸಲ್ಪಟ್ಟಿವೆ. ಕರಾವಳಿ ಪ್ರದೇಶದಲ್ಲಿ 1 ಲಕ್ಷ 25 ಸಾವಿರ ಜನ ಮೀನುಗಾರರಿದ್ದಾರೆ ಅವರಿಗೆ ದೋಣಿಗಳಿಲ್ಲ ಎಂದು ಮಾನ್ಯ ಸದಸ್ಯರು ಹೇಳಿದರು. ಒಳನಾಡು ಪ್ರದೇಶದಲ್ಲಿ ಒಂದು ಒಂದೂವರೆ ಲಕ್ಷ ಜನ ಮೀನುಗಾರರು ಇದ್ದಾರೆ ಸಾಕಷ್ಟು ಜನರಿಗೆ ಉದ್ಯೋಗಾವಕಾಶವನ್ನು ಒದಗಿಸಲಿಕ್ಕೆ ನಮಗೆ ಸಾಧ್ಯವಾಗಿದೆ. ಮೊದಲು ಕೇವಲ 2 ಯಾಂತ್ರಿಕ ದೋಣಿಗಳಿದ್ದಂಥ ನಮ್ಮ ಕರಾವಳಿ ಪ್ರದೇಶದಲ್ಲಿ, ಇವತ್ತು ಸುಮಾರು 1500 ಯಾಂತ್ರಿಕ ದೋಣಿಗಳು ಮೀನುಗಾರಿಕೆ ಕೆಲಸ ಮಾಡುತ್ತಿವೆ.

ನಮ್ಮಲ್ಲಿ ಇದಕ್ಕಿಂತ ಇನ್ನೂ ಹೆಚ್ಚಿನ ದೋಣಿಗಳನ್ನು ತರುವುದಕ್ಕೆ ಕಷ್ಟವಾಗಿದೆ. ರಿಸರ್ವಾಯರ್ ಡೆವಲಪ್‌ಮೆಂಟ್ ಕಡೆಗೂ ಸರ್ಕಾರ ಗಮನಕೊಟ್ಟಿದೆ. ಈಗಿರುವಂಥ ಕರಾವಳಿ ಪ್ರದೇಶದ ವ್ಯವಸ್ಥೆಯಲ್ಲಿ 21 ಕೋಟಿ ರೂಪಾಯಿ ಬೆಲೆ ಬಾಳುವ ಮೀನುಗಳನ್ನು ಉತ್ಪಾದನೆ ಮಾಡುತ್ತಿದ್ದೇವೆ. ಮತ್ತು ಇದರ ಜೊತೆಗೆ ಒಳನಾಡು ಪ್ರದೇಶದಲ್ಲಿ ಮೀನುಗಾರಿಕೆ ಅಭಿವೃದ್ಧಿಗಾಗಿಯೂ ಸಹಾ ಸಾಕಷ್ಟು ವ್ಯವಸ್ಥೆಯನ್ನು ಮಾಡಿದ್ದೇವೆ. ಆದರೂ ಕೆಲವು ಮಾನ್ಯ ಸದಸ್ಯರು ಮೀನುಗಾರಿಕೆ ಇಲಾಖೆಯಲ್ಲಿ ಎಷ್ಟು ಅಭಿವೃದ್ಧಿಯನ್ನು ಸಾಧಿಸಬೇಕಾಗಿತ್ತೋ ಅಷ್ಟು ಆಗಿಲ್ಲ, ಎಂದು ಹೇಳಿದ್ದಾರೆ ರಾಜ್ಯದಲ್ಲಿ ಮೊದಲು ಮೀನುಗಾರಿಕೆ ಇಲಾಖೆ ಕೇವಲ ಒಂದು ಸೆಕ್ಷನ್ ಆಗಿದ್ದು, ಮೈನರ್ ಡಿಪಾರ್ಟ್‌ಮೆಂಟ್ ಆಗಿದ್ದದ್ದು ಈಗ ಸುಧಾರಣೆಯಾದಮೇಲೆ, ಇವತ್ತು ಮೇಜರ್ ಡಿಪಾರ್ಟ್‌ಮೆಂಟ್ ಆಗಿ ಪರಿವರ್ತನೆಯಾಗುವಷ್ಟು ಮಟ್ಟಿನ ಪ್ರಗತಿಸಾಧಿಸಿದ್ದೇವೆ. ಪ್ರಾರಂಭದಲ್ಲಿ ಎಂದರೆ 1973-74ರಲ್ಲಿ ಈ ಇಲಾಖೆಗೆ ಕೇವಲ 126 ಲಕ್ಷದಷ್ಟು ಬಜೆಟ್ ವ್ಯವಸ್ಥೆ ಇದ್ದರೆ, ಇವತ್ತು 440 ಲಕ್ಷ ರೂಪಾಯಿಯಷ್ಟು ಬಜೆಟ್ ವ್ಯವಸ್ಥೆಯಾಗಿದೆ. ಕಾರ್ಯಕ್ರಮಗಳನ್ನು ಚೆನ್ನಾಗಿ ಎಲ್ಲ ಕಡೆಯೂ ವ್ಯಾಪಕವಾಗಿ ಕೈಗೊಂಡಿದ್ದೇವೆಂದು ಹೇಳಿದರೆ ತಪ್ಪಾಗಲಾರದು.

ಶ್ರೀ ಕೋಣಂದೂರು ಲಿಂಗಪ್ಪ —ಅಣ ಮೀನು ತಿಮಿಂಗಿಲವಾಗಿದೆ!

ಶ್ರೀ ಕೆ. ಟಿ. ರಾಥೋಡ್.— ಮಾನ್ಯ ಕಾಗೋಡು ತಿಮ್ಮಪ್ಪನವರು ಮಾತನಾಡುತ್ತಾ ಮಾರುಕಟ್ಟೆ ಮತ್ತು ಶೀತರಗೃಹಗಳ ವ್ಯವಸ್ಥೆಯಾಗಬೇಕೆಂದು ಸೂಚಿಸಿದರು ನಾವು ಈ ಬಗ್ಗೆ ಒಂದು ಯೋಜನೆಯನ್ನು ಹಾಕಿಕೊಂಡಿದ್ದೇವೆ ನಗರ ಪ್ರದೇಶಗಳಲ್ಲಿ ಮತ್ತು ದೊಡ್ಡದೊಡ್ಡ ಪಟ್ಟಣದಲ್ಲಿ ಮುನಿಸಿಪಾಲಿಟಿಯವರು ಮುಂದೆ ಬಂದರೆ, ಅವರಿಗೆ ಶೇಕಡ 50 ಭಾಗ ಸಬ್ಸಿಡಿ ಅಥವಾ ಸಾಲ ಕೊಟ್ಟು ಮಾರುಕಟ್ಟೆ ಕಲ್ಪಿಸಿಕೊಡುವ ಯೋಜನೆ ಇದೆ. ಈ ಸೌಲಭ್ಯವನ್ನು ಪಡೆದುಕೊಳ್ಳುವುದಕ್ಕೆ ಯಾವ ಮುನಿಸಿಪಾಲಿಟಿಯವರು ಸಿದ್ಧರಾಗಿದ್ದಾರೋ ಅವರಿಗೆ ಈ ಯೋಜನೆಯ ಲಾಭವನ್ನು ಕೊಡೋಣ. ಈಗಾಗಲೇ ಅನೇಕ ಕಡೆಗಳಲ್ಲಿ ಕೊಡಲಾಗಿದೆ.

ನೀರು ಕಲುಷಿತವಾಗುವ ಮತ್ತು ಅದರಿಂದ ತೊಂದರೆಯಾಗುವ ಬಗ್ಗೆಯೂ ಕೆಲವು ಮಾನ್ಯ ಸದಸ್ಯರು ತಿಳಿಸಿದ್ದಾರೆ. ಮಂಗಳೂರು ಕೆಮಿಕಲ್ಸ್ ಅಂಡ್ ಫರ್ಟಿಲೈಸರ್ಸ್‌ನ ಎಫ್ಲುಯೆಂಟ್ಸ್‌ದಿಂದ ನೀರು ಕಲುಷಿವಾಗುತ್ತಿದ್ದುದು ಸರ್ಕಾರದ ಗಮನಕ್ಕೆ ಬಂದಾಗ ಸರ್ಕಾರ ಅದನ್ನು ನಿಯಂತ್ರಿಸಲು ಕರ್ನಾಟಕ ವಾಟರ್ ಪೊಲ್ಯೂಷನ್ ಬೋರ್ಡ್‌ನವರ ಗಮನಕ್ಕೆ ತಂದು ಕೂಡಲೇ ಅಗತ್ಯವಾದ ಕ್ರಮತೆಗೆದುಕೊಳ್ಳುವಂತೆ ಮಾಡಲಾಯಿತು ಯಾವುದಾದರೂ ಪ್ರದೇಶದಲ್ಲಿ ನೀರು ಕಲುಷಿತವಾಗಿ ಅದರಿಂದ ಮೀನು ಉದ್ಯಮಕ್ಕೆ ತೊಂದರೆಯಾಗುತ್ತಿದ್ದರೆ ಅದನ್ನು ಈ ಮಂಡಲಿಯ ಗಮನಕ್ಕೆ ತಂದರೆ, ಅವರು ಆ ಬಗ್ಗೆ ತೀವ್ರ ರೀತಿಯಲ್ಲಿ ಅಗತ್ಯವಾದ ಎಲ್ಲ ಕ್ರಮ ತೆಗೆದುಕೊಳ್ಳುವದು.

ಮತ್ಸ್ಯೋದ್ಯಮ ಅಭಿವೃದ್ಧಿ ಕಾರ್ಪೊರೇಷನ್ ಬಗ್ಗೆಯೂ ಸಹಾ ಕೆಲವು ಮಾನ್ಯ ಸದಸ್ಯರು ಮಾತನಾಡಿದ್ದಾರೆ. ಅದರ ಬಗ್ಗೆ ಕಾರ್ಪೊರೇಷನ್ನಿನ ಅಧ್ಯಕ್ಷರೂ, ಈ ಸದನದ ಸದಸ್ಯರೂ ಆದ ಶ್ರೀ ಭಾಸ್ಕರ್ ಶೆಟ್ಟಿಯವರು ವಿವರವಾಗಿ ತಿಳಿಸಿದ್ದಾರೆ.

ಶ್ರೀ ಕೋಣಂದೂರು ಲಿಂಗಪ್ಪ.—ಮಾನ್ಯ ಸಚಿವರು ಇರುವಾಗ ಅವರು ಉತ್ತರ ಕೊಟ್ಟಿದ್ದು ಸರಿಯೇ

ಶ್ರೀ ಕೆ. ಟಿ. ರಾಥೋಡ್ —ಅವರು ಕಾರ್ಪೊರೇಷನ್ನಿನ ಅಧ್ಯಕ್ಷರಾಗಿರುವುದರಿಂದ ಉತ್ತರ ಕೊಟ್ಟಿದ್ದಾರೆ. ಕಾರ್ಪೊರೇಷನ್ ಪ್ರಾರಂಭವಾದ ಮೊದಲಲ್ಲಿ ಸ್ವಲ್ಪ ತೊಂದರೆಯಿದ್ದುದರಿಂದ ಹೆಚ್ಚು ಲಾಭ ಗಳಿಸಲಾಗಲಿಲ್ಲ. ಮೊದಮೊದಲು ಅಲ್ಪಸ್ವಲ್ಪ ನಷ್ಟವಾಗುತ್ತಿತ್ತು. ಈಗ ನಷ್ಟದ ಪ್ರಮಾಣವನ್ನು ಕಡಿಮೆ ಮಾಡುವುದಕ್ಕೆ ಪ್ರಯತ್ನ ಮಾಡಿದ್ದೇವೆ. ಬೇರೆ ರಾಜ್ಯಗಳಲ್ಲಿರುವ ಈ ರೀತಿಯ ಕಾರ್ಪೊರೇಷನ್‌ಗಳೊಡನೆ ನಮ್ಮ ರಾಜ್ಯದ ಕಾರ್ಪೊರೇಷನನ್ನು ಹೋಲಿಸಿದರೆ ನಮ್ಮ ರಾಜ್ಯದ ಕಾರ್ಪೊರೇಷನ್ ಚೆನ್ನಾಗಿಯೇ ಕೆಲಸ ಮಾಡುತ್ತಿದೆ ಎಂದು ಹೇಳಿದರೆ ಅತಿಶಯೋಕ್ತಿಯಾಗಲಾರದು.

ಮಾನ್ಯ ಕೋಣಂದೂರ ಲಿಂಗಪ್ಪನವರು ಮಾತನಾಡುತ್ತಾ, ಅವರ ಕ್ಷೇತ್ರದಲ್ಲಿ ಕೆಲವು ಕೆರೆಗಳಿದ್ದು ಅಲ್ಲಿ ಮೀನುಗಳ ಉತ್ಪಾದನೆಗೆ ಕ್ರಮತೆಗೆದುಕೊಳ್ಳಬೇಕೆಂದು ಸೂಚಿಸಿದ್ದಾರೆ. ಇದಕ್ಕೆ ನನ್ನದೇನೂ ಅಭ್ಯಂತರವಿಲ್ಲ. ಮಾನ್ಯ ಸದಸ್ಯರು ಸಲಹೆ ಕೊಟ್ಟಿದ್ದಾರೆ, ಆ ಬಗ್ಗೆ ಇನ್ನು ಮೇಲೆ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಎಚ್ ಡಿ. ದೇವೇಗೌಡ.–ಹೋದ ವರ್ಷ ಕೆರೆಗಳೆಲ್ಲಾ ಬತ್ತಿ ಹೋದಾಗ ಮೀನು ಮರಿಗಳೆಲ್ಲ ಎಲ್ಲಿ ಹೋಗಿದ್ದವು.

ಶ್ರೀ ಕೆ. ಟಿ. ರಾಥೋಡ್.—ಎಲ್ಲ ಕಡೆಗಳಲ್ಲೂ ಕೆರೆಗಳು ಬತ್ತಿ ಹೋಗಿರಲಿಲ್ಲ. ನೀರಿದ್ದ ಕೆರೆಗಳನ್ನು ಇಲಾಖೆಯವರು ಉಪಯೋಗ ಮಾಡಿಕೊಂಡಿದ್ದಾರೆ. ತರಬೇತಿ ಹೊಂದಿದ ಮೀನುಗಾರರಿಗೆ ಕಳೆದ ಐದು ವರ್ಷಗಳಿಂದ ಎಲ್ಲ ರೀತಿಯ ಸಹಾಯ ಸರ್ಕಾರದಿಂದ ಸಿಗುತ್ತಿದೆ. ಇವರಿಗಾಗಿ ಸುಮಾರು 8 ಕೋಟಿ ರೂಪಾಯಿಗಳನ್ನು ಸಹಾಯಧನ ಮತ್ತು ಸಾಲದ ಹಣವನ್ನಾಗಿ ಮಂಜೂರುಮಾಡಲಾಗಿದೆ. ಈ ಇಲಾಖೆ ಹೆಚ್ಚು ವ್ಯವಸ್ಥಿತವಾಗಿ ಕೆಲಸ ಮಾಡುವಂತಾಗಬೇಕೆಂದೂ ಕೆಲವು ಮಾನ್ಯ ಸದಸ್ಯರು ಹೇಳಿದ್ದಾರೆ. ಈ ಇಲಾಖೆಯನ್ನು ಪುನರ್ವ್ಯವಸ್ಥೆಗೊಳಿಸಿ, ಎಲ್ಲ ರೀತಿಯ ವ್ಯವಸ್ಥೆಯನ್ನೂ ಮಾಡಲಾಗಿದೆ.

ಶ್ರೀ ಕೋಣಂದೂರು ಲಿಂಗಪ್ಪ.—ನಾವು ನಿಮ್ಮ ಬೇಡಿಕೆಗೆ ಮಂಜೂರಾತಿ ನೀಡುತ್ತೇವೆ. ಆದರೆ, ನೀವೇನಾದರೂ ನಮಗೆ ಮೀನಿನ ರುಚಿ ತೋರಿಸಿದಿರೋ ?

ಶ್ರೀ ಕೆ. ಟಿ. ರಾಥೋಡ್.—(ನಗು) ಪರ್ಸ್‌ಸೀನಿಂಗ್ ಮೆಥೆಡ್ ಎಂಬ ಒಂದು ಹೊಸಬಗೆಯ ಮೀನು ಹಿಡಿಯುವ ಕಾರ್ಯಕ್ರಮವನ್ನು ನಾವು ಈಗ ಕೈಗೆ ತೆಗೆದುಕೊಂಡಿದ್ದೇವೆ ಈಗಾಗಲೇ ಇಂಥ ಪರ್‌ಸೀನಿಂಗ್ ಯೂನಿಟ್‌ಗಳಿಗೆ ಸಹಾಯಧನ ಕೊಡಲಾಗಿದೆ. ಮುಂದಿನ ವರ್ಷವೂ ಕೂಡ ನಾವು ಮತ್ತೆ 20 ಪರ್‌ಸೀನಿಂಗ್ ಯೂನಿಟ್‌ಗಳಿಗೆ ಸಹಾಯ ಮಾಡುವ ಯೋಜನೆಯಿದೆ ಈ ರೀತಿಯಾಗಿ ಸರ್ಕಾರ ಮೀನುಗಾರ ಉದ್ಯಮದ ಅಭಿವೃದ್ಧಿಗಾಗಿ ಹೆಚ್ಚು ಗಮನ ಕೊಟ್ಟಿದ್ದಾರೆ ಇನ್ನು ಒಳನಾಡು ಪ್ರದೇಶಗಳಲ್ಲಿರುವ ಮೀನುಗಾರಿಕೆ ಅಭಿವೃದ್ಧಿಯ ಬಗ್ಗೆಯೂ ಸಹಾ ವಿಶೇಷ ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದೇವೆ ಈ ದಿಶೆಯಲ್ಲಿ ಸರ್ಕಾರ Desilting of tanks for promotion of fishers ಎನ್ನುವ ಹೊಸ ಯೋಜನೆಯೊಂದನ್ನು ರೂಪಿಸಿದೆ ಈಗಾಗಲೇ ಯೋಜನಾ ವರದಿಯೂ ತಯಾರಾಗಿದೆ. ಈ ಯೋಜನೆಯ ಮುಖಾಂತರವಾಗಿ ಹೆಚ್ಚು ಪ್ರಮಾಣದಲ್ಲಿ ಮೀನಿನ ಉತ್ಪತ್ತಿ ಮಾಡುವುದಕ್ಕೆ ಸಾಧ್ಯವಾಗುತ್ತದೆ ಎಲ್ಲಿ ನೀರಿನ ಸೌಕರ್ಯ ಚೆನ್ನಾಗಿದ್ದು ಎಲ್ಲಿ ಮೀನಿನ ಮರಿಗಳು ಚೆನ್ನಾಗಿ ಅಭಿವೃದ್ಧಿಯಾಗುತ್ತವೆಯೋ ಅಲ್ಲೆಲ್ಲಾ ಯೋಜನೆಗಳನ್ನು ನಾವು ಕಾರ್ಯಗತ ಮಾಡುತ್ತೇವೆ

ಶ್ರೀ ಎಸ್ ವೈ. ಪಾಟೀಲ್.—ಮಲೆನಾಡು ಪ್ರದೇಶಗಳಲ್ಲಿ ಕಡಮೆ ಖರ್ಚಿನಲ್ಲಿ ಹೆಚ್ಚು ಮೀನು ಮರಿಗಳ ಉತ್ಪನ್ನ ಮಾಡಬಹುದು. ಆದರೆ, ಅದು ಬಿಟ್ಟು ಜಾಸ್ತಿ ಹಣ ಖರ್ಚು ಮಾಡಿದರೂ ಉತ್ಪತ್ತಿ ಹೆಚ್ಚಿಗೆ ಬರದ ಬಿಜಾಪುರದ ಕಡೆ ಏತಕ್ಕೆ ಬರುತ್ತೀರಿ ? ಮಲೆನಾಡಿನಲ್ಲಿ ಮೀನುಗಳು ಯಾವ ಪ್ರಯತ್ನವೂ ಇಲ್ಲದೆ ನೈಸರ್ಗಿಕವಾಗಿ ನಿರ್ಮಾಣವಾಗುತ್ತಿದೆ ಅಂಥಾ ಕಡೆ ಇನ್ನೂ ಹೆಚ್ಚು ಕಾರ್ಯಕ್ರಮಗಳನ್ನು ಹಾಕಿಕೊಂಡು, ಅಧಿಕವಾಗಿ ಮೀನುಗಳ ಉತ್ಪಾದನೆ ಮಾಡಿ. ಬೇಕಾದರೆ ವಿದೇಶಿ ವಿನಿಮಯಗಳಿಸಲೂ ಪ್ರಯತ್ನ ಮಾಡಿ. ಅದು ಬಿಟ್ಟು, ನಾವು ಜಿಲ್ಲಾವಾರು ಮೀನುಗಳ ಅಭಿವೃದ್ಧಿ ಮಾಡುತ್ತೇವೆಂದು ಹೊರಡಬೇಡಿ. ನಮ್ಮ ಬಿಜಾಪುರದಲ್ಲಿ ಮೀನು ಅಭಿವೃದ್ಧಿ ಮಾಡುವ ಅವಶ್ಯಕತೆ ಇಲ್ಲ ; ನಮಗೆ ಹೊಟ್ಟೆಗೆ ಅನ್ನ ಕೊಡಿ ಸಾಕು

ಶ್ರೀ ಕೆ ಟಿ. ರಾಥೋಡ್.—ಮಾನ್ಯ ಸದಸ್ಯರಿಗೆ ಮೀನಿನ ರುಚಿ ಗೊತ್ತಿಲ್ಲದಿರುವುದರಿಂದ, ಹಾಗೆ ಹೇಳುತ್ತಿದ್ದಾರೆ ಅಷ್ಟೆ. ನಾರಾಯಣ ಪುರದಲ್ಲಿ ವಿಶ್ವಬ್ಯಾಂಕಿನ ಸಹಾಯದಿಂದ ಲಕ್ಷಾಂತರ ಮೀನು ಮರಿಗಳನ್ನು ಉತ್ಪಾದನೆ ಮಾಡುವ ವ್ಯವಸ್ಥೆಯಿದೆ ಎಲ್ಲೆಲ್ಲಿ ನೀರಿನ ಅನುಕೂಲವಿದೆ : ಎಲ್ಲೆಲ್ಲಿ ಮೀನುಮರಿಗಳ ಉತ್ಪನ್ನ ಅಧಿಕವಾಗಿ ಆಗುತ್ತಿದೆ ಅಲ್ಲೆಲ್ಲಾ ನಾವು ಕಾರ್ಯಕ್ರಮಗಳನ್ನು ಕೈಗೊಂಡಿದ್ದೇವೆ.

ಇನ್ನು ತೋಟಗಾರಿಕೆ ಇಲಾಖೆ ಕುರಿತೂ ಸಹಾ ಮಾನ್ಯ ಸದಸ್ಯರುಗಳು ಅನೇಕ ಸಲಹೆ ಸೂಚನೆಗಳನ್ನು ಕೊಟ್ಟಿದ್ದಾರೆ. ತೋಟಗಾರಿಕೆ ಇಲಾಖೆ ಬಹಳ ಚನ್ನಾಗಿ ಕೆಲಸ ಮಾಡುತ್ತಿದೆ.

ಶ್ರೀ ಎಸ್. ವೈ. ಪಾಟೀಲ್.—ಆದಿತ್ಯವಾರ ಇಲ್ಲದೇ ಇದ್ದರೆ ಸೋಮವಾರ ಬರುತ್ತಾರೆ. ಈ ರೀತಿ ಬರುತ್ತಿರುವುದರಿಂದ ಮಿನಿಸ್ಟರ ಜಾಸ್ತಿಯಾಗುತ್ತದೆಯೇ ?

ಶ್ರೀ ಕೆ. ಬಿ. ರಾಥೋಡ್. -ಬೇರೆ ಬೇರೆ ಕಾರ್ಯಕ್ರಮ ಇರುವುದರಿಂದ ಬರುತ್ತೇವೆ. ಬರಬೇಕಾಗುತ್ತದೆ.

ಶ್ರೀ ಎಸ್. ವೈ. ಪಾಟೀಲ್.—ಸರ್ಕಾರಿ ಬಜೆಟ್‌ನ್ನು ಖರ್ಚುಮಾಡಿ 15 ದಿವಸಕ್ಕೆ ಒಂದಾವರ್ತಿ ಏತಕ್ಕೆ ಬರುತ್ತೀರಿ ? ನಮಗೆ ನೀರಾವರಿ ಯೋಜನೆಗೆ ದುಡ್ಡಿಲ್ಲ, ಬಾವಿಗಳಿಗೆ ದುಡ್ಡಿಲ್ಲ. ನೀವು ಪ್ರವಾಸಕ್ಕಾಗಿ ಖರ್ಚು ಮಾಡುವ ಹಣದಲ್ಲಿ 50 ಬಾವಿಗಳಾದರೂ ಆಗುತ್ತವೆ. ಈ ರೀತಿ ಪದೇ ಪದೇ ಬರುವುದರಿಂದ ಸರ್ಕಾರದ ಡಿಗ್ನಿಟಿ ಎಲ್ಲ ಉಳಿಯುತ್ತದೆ ಡೆಪ್ಯುಟಿ ಕಮೀಷನರ್ ರವರು ಮೂರು ವರ್ಷಕ್ಕೆ ಒಂದು ಸಾರಿ ಡಿವಿಜನಲ್ ಕಮೀಷನರ್‌ರವರು ಆರು ವರ್ಷಕ್ಕೆ ಒಂದು ಸಾರಿ ವಿಸಿಟ್ ಕೊಡುತ್ತಾರೆ ಇವರು ವಾರಕ್ಕೊಂದು ಸಾರಿ ಕಂಪರ್‌ನ ಬಂದುಹೋಗುವುದರಿಂದ ಸರ್ಕಾರಿ ಬಜೆಟ್ ಹಾಳಾಗುತ್ತಿದೆ. 15 ದಿವಸಕ್ಕೆ 8 ದಿವಸಕ್ಕೆ ಒಂದು ಸಾರಿ ಬರುವ ಕಾರಣ ಏನು ? ಇದಕ್ಕೆ ಉತ್ತರ ಬೇಕು.

ಅಧ್ಯಕ್ಷರು.—ಕೂತ ಕೊಳ್ಳಿ ಪಾಟೀಲರೇ ಹೇಳುತ್ತಾರೆ.

ಶ್ರೀ ಎಸ್. ವೈ. ಪಾಟೀಲ್.—ದುಡ್ಡು ಯಾವರೀತಿ ಹಾಳಾಗುತ್ತಿದೆ ಪ್ರತಿ ಸಂಡೆ ಬರುತ್ತಾರೆ ತಪ್ಪಿದರೆ ಸೋಮವಾರ ಬರುತ್ತಾರೆ ನನಗೆ ನೋಡಿ ಹುಚ್ಚು ಹಿಡಿದಿದೆ ನಾನು ಹುಚ್ಚಾಸ್ಪತ್ರೆ ಸೇರೋಣ ಎಂದರೆ ಅಲ್ಲಿ ಜಾಗ ಇಲ್ಲದಕ್ಕೆ ಸುಮ್ಮನೆ ಆಗಿದ್ದೇನೆ, ಇನ್ನೊಂದು ಸಾರಿ ಬಂದರೆ ನಾನು ಸತ್ಯಾಗ್ರಹ ಮಾಡುತ್ತೇನೆ.

ಅಧ್ಯಕ್ಷರು —ಸಾಕು ಮಾನ್ಯ ಪಾಟೀಲರು ಸುಮ್ಮನೇ ಇರಬೇಕು.

ಶ್ರೀ ಕೆ ಟಿ. ರಾಥೋಡ್.—ತೋಟಗಾರಿಕೆ ಇಲಾಖೆ ಒಳ್ಳೆಯ ಕೆಲಸಕಾರ್ಯಗಳನ್ನು ಮಾಡುತ್ತಾ ಇರುವುದು ಮಾನ್ಯ ಸದಸ್ಯರುಗಳಿಗೆ ಗೊತ್ತಿದೆ. ನಾನು ಇಲಾಖೆಯನ್ನು ಕೈಗೆ ತೆಗೆದುಕೊಂಡನಂತರ ಪ್ರತಿ ಜಿಲ್ಲೆಯ ಎಲ್ಲಾ ಸದಸ್ಯರುಗಳನ್ನು ಕರೆಸಿ ತಮ್ಮ ತಮ್ಮ ಜಿಲ್ಲೆಗೆ ತೋಟಗಾರಿಕೆ ಸಂಬಂಧಪಟ್ಟಂತೆ ಏನು ಅಭಿವೃದ್ಧಿ ಕೆಲಸ ಮಾಡಬೇಕಾಗಿದೆ ಎನುವ ವಿಷಯಗಳನ್ನು ತಿಳಿದುಕೊಂಡು ನಂತರ ಇಲಾಖೆಯ ಅಧಿಕಾರಿಗಳ ಸಭೆಯನ್ನು ಕರೆದು ಪ್ರತಿಯೊಂದು ಜಿಲ್ಲೆಯಲ್ಲಿ ಏನೇನು ಕಾರ್ಯಕ್ರಮಗಳನ್ನು ಕೈಗೊಳ್ಳಬೇಕೆಂಬ ಚಿತ್ರವನು ಸಿದ್ಧಪಡಿಸಿ ಕೆಲಸಕಾರ್ಯಗಳನ್ನು ಮಾಡುತ್ತಿದ್ದೇನೆ ಮಾನ್ಯ ಸದಸ್ಯರುಗಳಿಗೆ ಗೊತ್ತಿದ್ದಹಾಗೆ, 1974-75ರಲ್ಲಿ ತೋಟಗಾರಿಕೆ ಇಲಾಖೆ ಒದಗಿಸಿದ್ದ ಬಡ್ಜೆಟ್ 249 44 ಸಾವಿರ ರೂಪಾಯಿಗಳು 1977-78ಕ್ಕೆ 3,58 57 ಸಾವಿರ ರೂಪಾಯಿಗಳನು ಬಡ್ಜೆಟ್‌ನಲ್ಲಿ ಒದಗಿಸಲಾಗಿದೆ. ಅಲ್ಲದೆ ತೋಟಗಾರಿಕೆ ಇಲಾಖೆಗೆ ಸಂಬಂಧಪಟ್ಟಂತೆ ಕಾರ್ಯಕ್ರಮಗಳನ್ನು ರಾಜ್ಯದ ಎಲ್ಲಾ ಕಡೆಗೂ ಕೈಗೊಂಡಿದ್ದಾಗಿದೆ. ಮೊದಲು ಎಲ್ಲಾ ತಾಲೂಕುಗಳಲ್ಲಿಯೂ ಫಾರ್ಮಗಳಾಗಲೀ, ನರ್ಸರಿಗಳಾಗಲೀ ಇರಲಿಲ್ಲ, ಮಾನ್ಯ ಸದಸ್ಯರುಗಳು ಜಿಲ್ಲಾಮಟ್ಟಕ್ಕೆ ಮಾತ್ರ ಈಕಾರ್ಯಕ್ರಮ ಇಟ್ಟುಕೊಂಡಿದ್ದೀರಿ ಎಂದು ಹೇಳಿ, ತಾಲ್ಲೂಕ ಮಟ್ಟದಲ್ಲಿಯೂ ಈ ಕಾರ್ಯಕ್ರಮ ಮುಂದುವರಿಯುವಂತೆ ವ್ಯವಸ್ಥೆ ಮಾಡಬೇಕೆಂದು ಸಲಹೆ ಮಾಡಿದ್ದಾರೆ. 34 ತಾಲ್ಲೂಕುಗಳಿಗೆ ನರ್ಸರೀಸ್ ಮತ್ತು ಫಾರ್ಮಗಳು ಇರಲಿಲ್ಲ, ಕಳೆದ ಎರಡು ವರ್ಷಗಳಲ್ಲಿ 16 ಕಡೆಯಲ್ಲಿ ಹೊಸ ಫಾರ್ಮಗಳನ್ನು ಪ್ರಾರಂಭ ಮಾಡಿದ್ದೇವೆ ಇನ್ನೂ 14 ಫಾರ್ಮಗಳನ್ನು ಮಾಡಬೇಕಾಗಿದೆ ಆದರೆ ನಮಗೆ ಜಾಗ ಸಿಗದೇ ಇರುವುದರಿಂದ ಜಮೀನು ವಸಪಡಿಸಿಕೊಳ್ಳುವ ವಿಚಾರದಲ್ಲಿ ವ್ಯವಹಾರ ನಡೆಯುತ್ತಿದೆ 5ನೇ ಪಂಚವಾರ್ಷಿಕ ಯೋಜನೆ ಮುಗಿಯುವುದರೊಳಗೆ ಸಾಧ್ಯವಾದಷ್ಟು ಕಡೆಗೆ ತೋಟಗಾರಿಕೆಯ ಕೆಲಸವನ್ನು ವಿಸ್ತರಿಸಬೇಕೆಂಬ ಉದ್ದೇಶ ಸರ್ಕಾರಕ್ಕೆ ಇದೆ. ನಮ್ಮ ಇಲಾಖೆ ಮುಖಾಂತರ ಸುಮಾರು 92 ಸ್ಕೀಮುಗಳು ಕಾರ್ಯಗತವಾಗುತ್ತಿವೆ ಅವುಗಳಲ್ಲಿ ವೆಸ್ಟರನ್‌ಘಾಟ್ ಸೆಕ್ಷನ್ ಕೂಡ ಸೇರಿದೆ. ಪ್ರತಿ ತಾಲ್ಲೂಕಿನಲ್ಲಿಯೂ ಮಾಡುವುದಕ್ಕೆ ನನ್ನ ಅಭ್ಯಂತರ ಏನೂ ಇಲ್ಲ, ನಮ್ಮ ರಾಜ್ಯಕ್ಕೆ ಒಂದು ಲಕ್ಷ ಮಾತ್ರ ಕೊಟ್ಟಿದ್ದಾರೆ ಕೆಲವು ಪಕ್ಷದ ಸ್ಥಳಗಳನ್ನು ಆಯ್ಕೆ ಮಾಡಿಕೊಂಡು ಯೋಜನೆಗಳನ್ನು ಕಾರ್ಯಗತ್ರ ಮಾಡಬೇಕಾಗಿದೆ. ಹೆಚ್ಚು ಸ್ಥಳಗಳಲ್ಲಿ ಮಾಡಬೇಕಾದರೆ ಹಣದ ಕೊರತೆ ಇದೆ. ಎಲ್ಲಾ ಕಡೆ ಈ

ಕಾರ್ಯಕ್ರಮವನ್ನು ಹೆಚ್ಚಿಸಲಿಕ್ಕೆ ಸಾಧ್ಯವಿಲ್ಲ ಡಿ.ಪಿ. ಎ.ಪಿ. ಸ್ಕೀಮಿನಲ್ಲಿ ಹೊಸ ಯೋಜನೆಗಳ ಜೊತೆಗೆ ವೆಸ್ಟರ್ನ್ ಘಾಟಿಗೆ ಹೆಚ್ಚಿನ ಸಹಾಯ ಸಿಗುತ್ತದೆ. ಇದೆಲ್ಲದರ ಜೊತೆಗೆ ವಿಶ್ವಬ್ಯಾಂಕಿನಿಂದ ಹೊಸ ಯೋಜನೆ ಕಾರ್ಯರೂಪಕ್ಕೆ ಬರುವುದರಲ್ಲಿದೆ. ಈ ಹೊಸ ಯೋಜನೆಗಳಿಗೆ ಕೇಂದ್ರ ಸರ್ಕಾರ ಮಂಜೂರಾತಿ ಕೊಟ್ಟರೆ, ಸುಮಾರು 53 200 ಹೆಕ್ಟೇರ್ ಪ್ರದೇಶದಲ್ಲಿ ತೋಟಗಾರಿಕೆ ಇಲಾಖೆಯು ಕಾರ್ಯಕ್ರಮಗಳನ್ನು ಅಳವಡಿಸುವುದಕ್ಕೆ ಸಾಧ್ಯತೆ ಇದೆ. ಸುಮಾರು 50 ಕೋಟಿ 6 ಲಕ್ಷ ರೂಪಾಯಿಗಳ ಬೃಹತ್‌ಯೋಜನೆ ಈ ಯೋಜನೆಗೆ ಕೇಂದ್ರ ಸರ್ಕಾರದ ಮಂಜೂರಾತಿ ಸಿಗುವ ನಿರೀಕ್ಷೆ ಇದೆ. ಈ ಯೋಜನೆ ಕಾರ್ಯರೂಪಕ್ಕೆ ಬಂದರೆ ಮಾನ್ಯ ಸದಸ್ಯರುಗಳು ಏನು ಸಲಹೆ ಸೂಚನೆ ಕೊಟ್ಟಿದ್ದಾರೆ ಅವೆಲ್ಲವುಗಳನ್ನು ಕಾರ್ಯರೂಪಕ್ಕೆ ತರುವುದಕ್ಕೆ ಸಾಧ್ಯ ಇದೆ.

ಮಾನ್ಯ ಸದಸ್ಯರಾದ ವೆಂಕಟಲಿಂಗಯ್ಯನವರು ಕೆಲವು ಸೂಚನೆಗಳನ್ನು ಹೇಳಿದ್ದಾರೆ ಅದು ಏನೆಂದರೆ ನಮ್ಮ ಇಲಾಖೆಯ ಅಧಿಕಾರಿಗಳು ಗೊಬ್ಬರವನ್ನು ಖರೀದಿ ಮಾಡುವಾಗ ಕಾನೂನುಗಳನ್ನು ಮೀರಿ ಮಾಡುತ್ತಿದ್ದಾರೆ ಎಂದು ಹೇಳಿದ್ದಾರೆ. ಒಂದು ಮಾತನ್ನು ಗಮನದಲ್ಲಿಟ್ಟುಕೊಳ್ಳಬೇಕು. ಫಿಷ್ ಮಿಲ್‌ಗೆ ಹೆಚ್ಚಿನ ಕ್ರಯ ಇದೆ ಫಿಷ್‌ಮೆನ್ಯೂರ್‌ಗೆ ಒಂದು ಟನ್‌ಗೆ 600 ರೂಪಾಯಿ ಇದೆ.

ಶ್ರೀ ಎಂ. ವೆಂಕಟಲಿಂಗಯ್ಯ.—ಸ್ಟೇಟ್ ಲೆವೆಲ್‌ನಲ್ಲಿ 1200 ರೂಪಾಯಿಗೆ ಒಂದು ಟನ್ ಇದೆ.

ಶ್ರೀ ಕೆ. ಟಿ. ರಾಥೋಡ್.—ಇಲಾಖೆಯವರು ಕಾನೂನು ಬದ್ಧವಾಗಿಯೇ ಕ್ರಮ ಕೈಗೊಂಡಿದ್ದಾರೆ ಡಿಸ್ಟ್ರಿಕ್ ಆಫೀಸಿನವರು ನೇರವಾಗಿ ತೆಗೆದುಕೊಳ್ಳುತ್ತಿದ್ದರು. ನಮಗೆ ವರ್ಷದ ಅಂತ್ಯದಲ್ಲಿ ಹಣ ಉಳಿದಿದ್ದನ್ನು ಕ್ರಮಬದ್ಧವಾಗಿ ಕಾನೂನು ಪ್ರಕಾರ ಟೆಂಡರ್‌ಗಳನ್ನು ಕರೆದು ಲೋಯಸ್ಟ್ ಟೆಂಡರ್ ಪ್ರಕಾರ ಕೊಟ್ಟಿದ್ದಾರೆ.

ಶ್ರೀ ಎಂ. ವೆಂಕಟಲಿಂಗಯ್ಯ.—500—700 ರೂಪಾಯಿಗೆ ಕೊಟ್ಟರೆ ಲುಕ್ಸಾನು ಆಗುವುದಿಲ್ಲವೇ ?

ಶ್ರೀ ಕೆ. ಟಿ. ರಾಥೋಡ್.—ಯಾವ ಪದಾರ್ಥಕ್ಕೆ ಲೋಯೆಸ್ಟ್ ಟೆಂಡರ್ ಇತ್ತೋ ಆ ಪದಾರ್ಥವನ್ನು ವಿತರಣೆ ಮಾಡಿದ್ದಾರೆ.

ಶ್ರೀ ಎಂ. ವೆಂಕಟಲಿಂಗಯ್ಯ.—ಎನ್‌ಕ್ವೈರಿ ಮಾಡಿಸಿದರೆ ಪೂರ್ಣ ವಿವರ ತಿಳಿಯುತ್ತದೆ.

ಶ್ರೀ ಕೆ. ಟಿ. ರಾಥೋಡ್.—ಎನ್‌ಕ್ವೈರಿ ಮಾಡಿಸೋಣ, ಹಾರ್ಟಿಕಲ್ಚರ್ ಮತ್ತು ಅಗ್ರಿಕಲ್ಚರ್ ಇಲಾಖೆಗಳಲ್ಲಿ ಅಧಿಕಾರಿಗಳ ಬದಲಾವಣೆಯಿಂದಾಗಿ ಸೀನಿಯಾರಿಟಿಗೆ ತೊಂದರೆಯಾಗಿದೆ ಎನ್ನುವ ಮಾತನ್ನು ಹೇಳಿದ್ದಾರೆ. ಸಮಗ್ರವಾಗಿ ಆಡಳಿತದೃಷ್ಟಿಯಿಂದ ಇವೆಲ್ಲವನ್ನೂ ಪರಿಶೀಲನೆ ಮಾಡಲಾಗುತ್ತಿದೆ. ಸೀನಿಯಾರಿಟಿ ವಿಚಾರದಲ್ಲಿ ಹೈಕೋರ್ಟಿನಲ್ಲಿ ರಿಟ್ಸ್‌ಗಳು ಪೆಂಡಿಂಗ್ ಇರುವುದರಿಂದ ಅವರು ಕೊಟ್ಟಿರತಕ್ಕ ಆದೇಶದ ಮೇರೆಗೆ ಸೀನಿಯಾರಿಟಿ ಯಾ ರೀತಿ ಮಾಡಬೇಕು ಎನ್ನುವ ಎಲ್ಲಾ ವಿಷಯಗಳನ್ನು ಸಮಗ್ರವಾಗಿ ಚರ್ಚೆ ಮಾಡಿ ಎಂದು ಅಧಿಕಾರಿಗಳಿಗೆ ತಿಳಿಸಿದ್ದೇನೆ. ಈ ವಿಚಾರವನ್ನು ಸರ್ಕಾರ ತುಂಬಾ ಗಮನದಲ್ಲಿಟ್ಟುಕೊಂಡಿದೆ.

ಶ್ರೀ ವೆಂಕಟಲಿಂಗಯ್ಯ.—ಅಧ್ಯಕ್ಷರೇ ಕೋರ್ಟಿನಲ್ಲಿ ರಿಟ್ ಇರುವಾಗ ಇದನ್ನು ಸ್ಟೇ ಮಾಡಬೇಕಾಗುತ್ತದೆ. ಅಲ್ಲಿ ಪೆಂಡಿಂಗ್ ಇರುವಾಗ ಇಲ್ಲಿ ಪ್ರಮೋಷನ್ ಕೊಡುತ್ತಿದ್ದಾರೆ.

ಶ್ರೀ ಕೆ. ಟಿ ರಾಥೋಡ್.—1968ರಲ್ಲಿ ಎರಡು ಇಲಾಖೆಗಳು ಅಮಾಲ್ಗಮೇಷನ್ ಆಗಿರುವಾಗ ಯಾವ ಕಾರ್ಯಕ್ರಮ ಕೈಗೊಳ್ಳಬೇಕೋ ಅದನ್ನು ತೆಗೆದುಕೊಂಡು ಪ್ರೊವಿಜನಲ್ ಲಿಸ್ಟ್ ಮಾಡಿದ್ದಾರೆ, ಇದು ಆ ಡಿಪಾರ್ಟ್‌ಮೆಂಟ್‌ನವರನ್ನು ಎಲ್ಲಾ ಪ್ರತಿನಿಧಿಗಳನ್ನು ಕರೆಸಿ ಮುಖ್ಯಮಂತ್ರಿಗಳ ಮುಂದೆ ಆಗಿದೆ.

ಶ್ರೀ ಹೆಚ್. ಡಿ. ದೇವೇಗೌಡ.—ಅಧ್ಯಕ್ಷರೇ, ಈ ಪ್ರೊವಿಜನಲ್ ಲಿಸ್ಟ್ ಇನ್‌ಟರ್ ಸ್ಟೇಟ್ ಸೀನಿಯಾರಿಟಿ ಲಿಸ್ಟ್ ಪ್ರತಿ ವರ್ಷಕ್ಕೆ ಒಂದೊಂದು ಬದಲಾವಣೆಯಾಗಿದೆ 1973–74, 1974–75 ಎರಡು ವರ್ಷ ಲಿಸ್ಟ್ ಮಾಡಿದ್ದಾರೆ ಅದರ ಬಗ್ಗೆ ನಾನು ಈ ಸಭೆಯ ಕಾಲವನ್ನು ಹೆಚ್ಚು ತೆಗೆದುಕೊಳ್ಳುವುದಕ್ಕೆ ಹೋಗುವುದಿಲ್ಲ. ಇದು ಹೀಗೆ ಪದೇ ಪದೇ ಪ್ರೊವಿಜನಲ್ ಸೀನಿಯಾರಿಟಿ ಲಿಸ್ಟ್ ಬದಲಾವಣೆ ಆದಾಗ್ಗೆ ಗೊಂದಲವಾಗುತ್ತದೆ.

ಶ್ರೀ ಕೆ. ಟಿ. ರಾಥೋಡ್.—ಅಧ್ಯಕ್ಷರೇ, ನಮ್ಮ ತೋಟಗಾರಿಕೆ ಇಲಾಖೆಯಲ್ಲಿ ಒಟ್ಟು 357 ಫಾರಂಗಳು ಇವೆ. ನಮ್ಮ ಫಾರಂಗಳಲ್ಲಿ ಸುಮಾರು 14 ಸಹಸ್ರ ಎಕರೆ ಭೂಮಿ ಇದ್ದು ಈಗಾಗಲೇ 6 ಸಹಸ್ರ ಎಕರೆ ಭೂಮಿಯನ್ನು ಅಭಿವೃದ್ಧಿಗೊಳಿಸಿದ್ದೇವೆ. ಈಗ 357 ಫಾರಂಗಳು ಏನು ಇದೆ ಅದರಲ್ಲಿ 6 ಸಹಸ್ರ ಎಕರೆ ಭೂಮಿಯನ್ನು ಅಭಿವೃದ್ಧಿಗೊಳಿಸುವುದಕ್ಕೆ ಸಾಧ್ಯವಾಯಿತು ಹಣದ ಕೊರತೆ ಇದ್ದುದರಿಂದ ಪೂರ್ತಿ ಜಮೀನು ಅಭಿವೃದ್ಧಿ ಮಾಡಲಿಕ್ಕೆ ಆಗಲಿಲ್ಲ. ಇನ್ನು ಅಭಿವೃದ್ಧಿಗೊಳ್ಳದೇ ಇರತಕ್ಕ ಜಮೀನನ್ನು ಹಂತಹಂತವಾಗಿ ಅಭಿವೃದ್ಧಿ ಮಾಡುತ್ತಿದ್ದೇವೆ. ಇನ್ನು ನಮ್ಮ ಉತ್ತರ ಕರ್ನಾಟಕದಲ್ಲೂ ಕೂಡ ನಮ್ಮ ಬೃಂದಾವನ ಟೈಪ್ ಗಾರ್ಡನ್ ಮಾಡುವುದಕ್ಕೆ ಅನೇಕ ಸಾರಿ ಸಲಹೆಗಳು ಬಂದಿವೆ. ಕೆಲವು ಕಡೆಗಳಲ್ಲಿ ಬೃಂದಾವನ ಟೈಪ್ ಗಾರ್ಡನ್ ಮಾಡುತ್ತಿದ್ದೇವೆ. ಇನ್ನು ಜೋಗಫಾಲ್ಸ್‌ನಲ್ಲೂ ಕೂಡ ಕೆ. ಆರ್ ಸಾಗರದಲ್ಲಿ ಇರುವ ವ್ಯವಸ್ಥೆಯನ್ನು ಕುವೆಂಪು ಅವರ ಹೆಸರಿನಲ್ಲಿ ಮಾಡಬೇಕೆಂದು ಹೇಳಿದ್ದಾರೆ. ಮತ್ತೆ ಕೆ ಆರ್ ಸಾಗರದಲ್ಲಿ ಒಂದು ಗ್ಲಾಸ್ ಹೌಸ್ ಅವಶ್ಯಕತೆ ಇದ್ದು ಆ ಗ್ಲಾಸ್ ಹೌಸನ್ನು ಒಂದು ಲಕ್ಷ 60 ಸಾವಿರ ರೂಪಾಯಿಗಳಲ್ಲಿ ಕಟ್ಟಿಸುವುದಕ್ಕೆ ವ್ಯವಸ್ಥೆ ಮಾಡಿದ್ದೇವೆ. ಇನ್ನು ವರ್ಲ್ಡ್ ಬ್ಯಾಂಕ್ ಕಾರ್ಯರೂಪಕ್ಕೆ ಬರುತ್ತಿದೆ. ಅದರಿಂದ ಮಲೆನಾಡು ಪ್ರದೇಶ, ದಕ್ಷಿಣ ಕನ್ನಡ ಜಿಲ್ಲೆ ಮುಂತಾದ ಕಡೆಗಳಲ್ಲಿ ಒಂದು ಕಾರ್ಯಕ್ರಮ ಹಾಕಿಕೊಂಡು ಲಕ್ಷಾಂತರ ಎಕರೆ ಭೂಮಿಯನ್ನು ಅಭಿವೃದ್ಧಿಗೊಳಿಸುವುದಕ್ಕೆ ಸಾಧ್ಯ ಇದೆ. ಇನ್ನು ಡಿಪಾರ್ಟ್‌ಮೆಂಟಿನಲ್ಲಿ ಕೆಲಸಕಾರ್ಯಗಳನ್ನು ಮಾಡುವುದಕ್ಕೆ ನಮ್ಮ ಇಲಾಖೆಯ ಬಗ್ಗೆ ರೀ ಆರ್ಗನೈಜೇಷನ್ ಮಾಡುವ ಕಾರ್ಯಕ್ರಮ ಇದೆ. ಅದನ್ನು ಮುಂದಿನ ವರ್ಷದಲ್ಲಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ. ಇಷ್ಟು ವಿಷಯಗಳನ್ನು ಹೇಳಿ ಮಾನ ಸದಸ್ಯರು ಕೊಟ್ಟಂತಹ ಸಲಹೆಗಳನ್ನು ಕಾರ್ಯರೂಪಕ್ಕೆ ತರುವುದಕ್ಕೆ ಪ್ರಯತ್ನ ಮಾಡುತ್ತೇನೆ. ಎಂದು ಹೇಳಿ ನನ್ನ ಎರಡು ಇಲಾಖೆಗಳ ಬೇಡಿಕೆಗೆ ಮಂಜೂರಾತಿ ಕೊಡಬೇಕೆಂದು ಕೇಳಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಬಿ. ಜಿ ಬಣಕಾರ್ (ಪಶುಸಂಗೋಪನಾ ಶಾಖೆಯ ಮಂತ್ರಿಗಳು).—ಸನ್ಮಾನ್ಯ ಅಧ್ಯಕ್ಷರೇ, ನನ್ನ ಇಲಾಖಾ ಬೇಡಿಕೆಗಳ ಮೇಲೆ, ನನ್ನ ಮಿತ್ರರು ಅನೇಕರು ಕೆಲವು ಸಲಹೆಗಳನ್ನು ಕೊಟ್ಟಿದ್ದಾರೆ ಅವರಿಗೆ ನನ್ನ ಧನ್ಯವಾದಗಳನ್ನು ಅರ್ಪಿಸುತ್ತೇನೆ, ಮೊದಲನೆಯದಾಗಿ ಹೇಳಬೇಕು ಎಂದರೆ ನಮ್ಮ ಮಾನ್ಯ ಸದಸ್ಯರಾದ ನಾಯ್ಡು ಅವರು ಗೋಮಾಳದ ಬಗ್ಗೆ ಕೆಲವು ಸಲಹೆಗಳನ್ನು ಕೊಟ್ಟಿದ್ದಾರೆ. ಇವತ್ತು ಪ್ರತಿಯೊಂದು ಹಳ್ಳಿಗಳಲ್ಲೂ ಗೋಮಾಳ ಇದೆ ಆ ಗೋಮಾಳಗಳಲ್ಲಿ ಹಿಂದಿನ ಕಾಲದಿಂದಲೂ ಹಳ್ಳಿಯ ಜನರು ತಮ್ಮ ದನಗಳನ್ನು ತೆಗೆದುಕೊಂಡು ಹೋಗಿ ಮೇಯಿಸುತ್ತಿದ್ದರು. ಇತ್ತೀಚೆಗೆ ಗೋಮಾಳದ ಪ್ರದೇಶ ಕಡಿಮೆಯಾಗಿದೆ. ಇವೊತ್ತು ಪ್ರತಿಯೊಂದು ಹಳ್ಳಿಯಲ್ಲೂ ಗೋಮಾಳ ಇದ್ದರೆ ಜಾನುವಾರುಗಳು ಮೇಯುವುದಕ್ಕೆ ಅನುಕೂಲವಾಗುತ್ತದೆ ಎಂದು ಹೇಳುತ್ತೇನೆ. ಆದುದರಿಂದ ಆ ವಿಷಯದ ಬಗ್ಗೆ ನಮ್ಮ ಅನಿಮಲ್ ಹಸ್‌ಬೆಂಡರಿ ಖಾತೆಗೆ ವಹಿಸಿಕೊಡಬೇಕು ಎಂದು ರೆವಿನ್ಯೂ ಖಾತೆಯವರನ್ನು ಕೇಳಿದೇವೆ. ಇನ್ನು ಗೋಮಾಳ ಪ್ರದೇಶಗಳಲ್ಲಿ ಉತ್ತಮ ತರವಾದ ಹುಲ್ಲನ್ನು ಬೆಳೆಸಬೇಕು ಎಂದು ಯೋಜನೆ ಇಟ್ಟುಕೊಂಡಿದ್ದೇವೆ. ಇನ್ನು ಮಾನ್ಯ ಸದಸ್ಯರು ಸ್ಲಾಟರ್‌ಹೌಸ್ ಬಗ್ಗೆ ಕೋರಮಂಗಲದಲ್ಲಿ ಇರತಕ್ಕ ಜಾಗ ಏನು ಇದೆ ಅದನ್ನು ಷಿಫ್ಟ್ ಮಾಡಬೇಕು, ವಿಮಾನ ಬಂದಾಗ ತೊಂದರೆಯಾಗುತ್ತದೆ ಎಂದು ಹೇಳಿದರು. ಈಗ ನಾವು ತೆಗೆದುಕೊಂಡಂತ ಜಮೀನಿನ ಸಮೀಪದಲ್ಲಿ ಮಿಲಿಟರಿ ಸ್ಲಾಟರ ಹೌಸ್ ಇದೆ ಕಟ್ಟಿಸಬಹುದಾದ ಮಾಡರನ್ ಸ್ಲಾಟರ್ ಹೌಸ್ ಸಮೀಪದಲ್ಲಿ ಯಾವುದೇ ತರಹದ ಪಕ್ಷಿಗಳು ಅಲ್ಲಿ ಬರದಂತೆ ಕಾಪಾಡಿಕೊಳ್ಳಬೇಕು ಎನ್ನುವ ವಿಚಾರ ಇಟ್ಟುಕೊಂಡಿದ್ದೇವೆ. ಮಾನ್ಯ ಸದಸ್ಯರು ಸ್ಟಾಕ್‌ಮೆನ್ ಟ್ರೈನಿಂಗ್ ವಿಚಾರದಲ್ಲೂ ಕೂಡ ಹೇಳಿದರು, ಇವೊತ್ತು ಸ್ಟಾಕ್‌ಮೆನ್ ಟ್ರೈನಿಂಗ್ ಕೊಡುವುದು ಯೋಗ್ಯವಾದುದು. ಇನ್ನು ವೆಟರ್‌ನರಿ ಕಾಂಪೌಂಡರುಗಳಿಗೆ ಇನ್ಸ್‌ಪೆಕ್ಟರುಗಳಾಗಿ

ಪ್ರಮೋಷನ್ ಕೊಟ್ಟು, ಅವರ ಉಪಯೋಗ ತಗೆದುಕೊಳ್ಳಬೇಕು ಎಂಬುದು ಪರಿಶೀಲನೆಯಲ್ಲಿದೆ, ಆದುದರಿಂದ ಅವರಿಗೆ ಹೆಚ್ಚಿನ ಟ್ರೈನಿಂಗ್ ಕೊಟ್ಟು ಪ್ರಯೋಜನ ಪಡೆಯುವುದಕ್ಕೆ ಪ್ರಯತ್ನ ಮಾಡುತೇವೆ. ಈಗ ಕ್ವಾರ್ಟರ್ಲಿ ಬುಲೆಟಿನ್ ಹೊರಡಿಸುತ್ತಾ ಇದ್ದೇವೆ, ಅದರ ಬಗ್ಗೆ ಮಾನ್ಯ ಸದಸ್ಯರು ವ್ಯಕ್ತಪಡಿಸಿದ ಸಲಹೆಯಂತೆ ಇದನ್ನು ಪ್ರತಿ ತಿಂಗಳೂ ಸಹ ಹೊರಡಿಸಿ ಪ್ರತಿಯೊಬ್ಬ ಜನರಿಗೂ ಅನುಕೂಲವಾಗುವಂತೆ ಪ್ರಯತ್ನ ಮಾಡುತ್ತೇವೆ. ಇನ್ನು ಇನ್‌ಸ್ಟಿಟ್ಯೂಟ್ ಆಫ್ ಅನಿಮಲ್ ಹೆಲ್ತ್ ಬಗ್ಗೆ ಮಾನ್ಯ ಸದಸ್ಯರು ಹೇಳಿದರು. ಈಗಾಗಲೇ ಬೆಂಗಳೂರಿನಲ್ಲಿ ಇರುವಂಥಾ ಇನ್‌ಸ್ಟಿಟ್ಯೂಷನ್‌ಗೆ 1 ಕೋಟಿ 38 ಲಕ್ಷ ರೂಪಾಯಿ ಖರ್ಚುಮಾಡಿ ಅದನ್ನು ಎಕ್ಸ್‌ಪಾಂಡ್ ಮಾಡಬೇಕು ಎಂದು ಸರ್ಕಾರದ ವಿಚಾರ ಇದೆ. ಇದನ್ನು ಅದಷ್ಟು ಬೇಗ ಪ್ರಾರಂಭಿಸಬೇಕು ಎಂದು ಯೋಜನೆ ಇಟ್ಟುಕೊಂಡಿದ್ದೇವೆ. ಏಕೆಂದರೆ ಈ ಸಂಸ್ಥೆ ಏನು ಇದೆ ಇದು ಇಡೀ ಭಾರತದಲ್ಲೇ ಉತ್ತಮವಾದಂಥ ಸಂಸ್ಥೆ, ರಾಜ್ಯದಲ್ಲಿ ಉತ್ತಮವಾದಂಥ ಔಷಧವನ್ನು ತಯಾರು ಮಾಡುತ್ತಿದ್ದಾರೆ. ಹೋದವರ್ಷ 30 ಲಕ್ಷ ರೂಪಾಯಿ ಬೆಲೆಯ ಔಷಧಗಳನ್ನು ಇಲ್ಲಿ ತಯಾರು ಮಾಡಿ ಎಲ್ಲಾ ಕಡೆಗೆ ಕಳುಹಿಸಿ ಕೊಟ್ಟಿದ್ದಾರೆ. ಇನೂ ಹೆಚ್ಚು ಪ್ರಮಾಣದಲ್ಲಿ ಎಲ್ಲಾ ತರಹದ ಔಷಧಗಳನ್ನು ಕಂಡುಹಿಡಿಯುವುದಕ್ಕೋಸ್ಕರ ಈ ಇನ್‌ಸ್ಟಿಟ್ಯೂಷನ್ ಏನು ಇದೆ ಇದನ್ನು ಬೃಹದಾಕಾರವಾಗಿ ಬೆಳೆಸಬೇಕು ಎಂದು ಈ ಬಗ್ಗೆ ಪ್ರಯತ್ನ ಮಾಡುತ್ತೇವೆ ಎಂದು ಹೇಳುತ್ತೇನೆ. ಇನ್ನು ಮಾನ್ಯ ಸದಸ್ಯರಾದ ವೆಂಕಟಲಿಂಗಯ್ಯನವರು ನಗರಗಳಲ್ಲಿ ಹುಲ್ಲನ್ನು ಸಪ್ಲೈ ಮಾಡುವಂಥ ಕಾರ್ಯ ಆಗಬೇಕು ಎಂದು ಹೇಳಿದರು. ಅದು ಕೂಡ ಯೋಗ್ಯವಾದ ಸಲಹೆ. ಇವೊತ್ತು ಬೆಂಗಳೂರು, ಮೈಸೂರು ನಗರಗಳಲ್ಲಿ ಅನೇಕ ಜನರು ಉತ್ತಮ ತಳಿಯ ದನುಗಳನ್ನು ಕಟ್ಟಿದ್ದಾರೆ. ಅವರಿಗೆ ಉತ್ತಮ ತರದ ಹುಲ್ಲು ಬೇಕಾಗುತ್ತದೆ ಆದ್ದರಿಂದ ದೊಡ್ಡ ದೊಡ್ಡ ಪಟ್ಟಣಗಳಿಗೆ ಉತ್ತಮ ತರದ ಹುಲ್ಲನ್ನು ಒದಗಿಸುವುದಕ್ಕೆ ಯಾವ ತರಹ ಒಂದು ಯೋಗ್ಯ ಕಾರ್ಯಕ್ರಮ ಹಾಕಿಕೊಳ್ಳಬೇಕೋ, ಆ ರೀತಿ ಒಂದು ಒಳ್ಳೆಯ ಕಾರ್ಯಕ್ರಮ ಹಾಕಿಕೊಳ್ಳುವುದಕ್ಕೆ ಪ್ರಯತ್ನಮಾಡುತ್ತೇವೆ ಎಂದು ಹೇಳುತ್ತೇನೆ.

ಇನ್ನು ಮೈಸೂರಿನ ಡಾಕ್ಟರ್ ಬಗ್ಗೆ ಹೇಳಿದರು. ಈಗಾಗಲೇ ಅವರ ಮೇಲೆ ಬೇಕಾದಷ್ಟು ತಕರಾರುಗಳು ಬಂದಿರುವುದರಿಂದ ಅವರನ್ನು ಕೂಡಲೇ ಅಲ್ಲಿಂದ ಬೇರೆ ಕಡೆಗೆ ಟ್ರಾನ್ಸ್‌ಫರ್ ಮಾಡಬೇಕೆಂದು ಆದೇಶ ಕೊಟ್ಟಿದ್ದೇನೆ. ಮತ್ತು ಟ್ರಾನ್ಸ್‌ಫರ್ ಕೂಡ ಮಾಡಲಾಗಿದೆ ಅವರು ಕೂಡಲೇ ಅಲ್ಲಿಗೆ ಹೋಗದಿದ್ದರೆ ಅವರ ಮೇಲೆ ಸೂಕ್ತಕ್ರಮ ತೆಗೆದುಕೊಳ್ಳುತ್ತೇನೆಂದು ಹೇಳಿದ್ದೇನೆ, ಯಾವುದೇ ಕಾರಣದಿಂದಲೂ ಅವರ ಟ್ರಾನ್ಸ್‌ಫರ್‌ನ್ನು ಕ್ಯಾನ್ಸಲ್ ಮಾಡುವುದಿಲ್ಲ. ಇಷ್ಟೇ ಅಲ್ಲದೆ ನಮ್ಮ ಕಡೆಯಲ್ಲಿ ಯಾವ ಯಾವ ಡಾಕ್ಟರುಗಳು 4 ವರ್ಷದಿಂದ ಒಂದೇ ಕಡೆ ಇದ್ದಾರೆ ಅಂಥವರನ್ನು ಕೂಡಲೇ ಬೇರೆ ಕಡೆಗೆ ಟ್ರಾನ್ಸ್‌ಫರ್ ಮಾಡಬೇಕೆಂದು ಡೈರೆಕ್ಟರ್‌ರವರಿಗೆ ಆದೇಶ ಕೊಟ್ಟಿದ್ದೇವೆ. ಬರೀ ಡಾಕ್ಟರ್‌ಗಳನ್ನೇ ಟ್ರಾನ್ಸ್‌ಫರ್ ಮಾಡುತ್ತೇವೆ ಎಂದು ಅಲ್ಲ. ವೆಟರಿನರಿ ಲೈವ್‌ಸ್ಟಾಕ್ ಇನ್‌ಸ್ಪೆಕ್ಟರ್ ಆಗಲಿ, ಕಾಂಪೌಂಡರ್ ಆಗಲಿ ಅಥವಾ ಬೇರೆ ಯಾವ ನೌಕರನೇ ಆಗಲಿ ಅವರ ಮೇಲೆ ದೂರು ಏನಾದರೂ ಇದ್ದರೆ ಅಂಥವರನ್ನು ತಕ್ಷಣ ಬೇರೆ ಕಡೆಗೆ ಟ್ರಾನ್ಸ್‌ಫರ್ ಮಾಡುವುದಲ್ಲದೆ ಅವರ ಮೇಲೆ ಸೂಕ್ತ ಕ್ರಮವನ್ನೂ ಕೂಡ ತೆಗೆದುಕೊಳ್ಳುವಂತೆ ಹೇಳಿದ್ದೇನೆ

ಇನ್ನು ಮಾನ್ಯ ಕೊಂಡೂರು ಲಿಂಗಪ್ಪನವರು ವೈದ್ಯರ ಬಗ್ಗೆ ಹೇಳುತ್ತಾ ಜನ ವೈದ್ಯರು, ಮತ್ತು ದನ ವೈದ್ಯರು ಎಂದು ಹೇಳಿದರು ಈಗ ಮನು ವೈದ್ಯರಿಗೆ ಎಷ್ಟು ಮಹತ್ವವನ್ನು ಕೊಟ್ಟಿದ್ದೇವೆಯೋ ಅಷ್ಟೇ ಮಹತ್ವವನ್ನು ಈ ಜಾನುವಾರು ವೈದ್ಯರಿಗೂ ಕೂಡ ಕೊಡಬೇಕೆಂದು ಮಾಡಿದ್ದೇವೆ. ಅವರ ಬೇಡಿಕೆ ಯೋಗ್ಯವೇ ಎಂಬುದನ್ನು ತಿಳಿದು ಅದಕ್ಕೆ ಸೂಕ್ತ ಪರಿಹಾರವನ್ನು ನೀಡಬೇಕೆಂದು ಯೋಜನೆ ಮಾಡಿದ್ದೇವೆ. ಏಕೆಂದರೆ ಈ ವೆಟರಿನರಿ ಡಾಕ್ಟರ್‌ಗಳು ಮನು ವೈದ್ಯರಿಗಿಂತ ಅಂದರೆ ಎಂ.ಬಿ.ಬಿ.ಎಸ್. ಓದುವವರಿಗಿಂತ ಇನ್ನೂ ಹೆಚ್ಚಿಗೆ ಅವರು ಓದಬೇಕಾಗಿದೆ. ಮಾತನಾಡದ ಪಶುಗಳನ್ನು, ದನಗಳನ್ನು ಪರೀಕ್ಷೆ ಮಾಡಿ ಅವುಗಳಿಗೆ ಏನು ತೊಂದರೆ ಇದೆ ಏನು ರೋಗರುಜನಗಳಿವೆ ಎಂಬುದನ್ನು ಕಂಡು ಹಿಡಿದು ಅದಕ್ಕೆ ಸರಿಯಾದ ಔಷಧಿಗಳನ್ನು ಕೊಡತ್ತಿದ್ದಾರೆ ಅಂದರೆ ಈ ವೆಟರಿನರಿ ಡಾಕ್ಟರ್‌ಗಳ ಕೆಲಸ ಮನು ವೈದ್ಯರಿಗಿಂತಲೂ ಹೆಚ್ಚಿನ ಮಹತ್ವದ್ದಾಗಿರುತ್ತದೆಂದು ಯಾರಾದರೂ ಕೂಡ ಹೇಳುತ್ತಾರೆ ಒಂದು ಸಾರಿ ವೆಟರಿನರಿ ಕಾಲೇಜಿನ ವಿದ್ಯಾರ್ಥಿಗಳು ಬಂದಿದ್ದಾಗ ಮಾನ್ಯ ಮುಖ್ಯಮಂತ್ರಿಗಳೂ ಕೂಡ ಇದರ ಬಗ್ಗೆ ಆ ವಿದ್ಯಾರ್ಥಿ

ಗಳೊಡನೆ ಮಾತನಾಡಿದ್ದಾರೆ. ಆದುದರಿಂದ ಇದರ ಬಗ್ಗೆ ಒಂದು ಯೋಗ್ಯ ಕ್ರಮವನ್ನು ತೆಗೆದು ಕೊಳ್ಳಬೇಕಾಗಿದೆ. ಈಗ ಮೆಡಿಕಲ್ ಡಾಕ್ಟರ್‌ಗಳನ್ನು ಹೇಗೆ ಅಪ್‌ಗ್ರೇಡ್ ಮಾಡುವ ಒಂದು ವ್ಯವಸ್ಥೆ ಇದೆಯೊ ಅದೇ ರೀತಿ ಈ ವೆಟರಿನರಿ ಡಾಕ್ಟರ್‌ಗಳನ್ನೂ ಕೂಡ ಅಪ್‌ಗ್ರೇಡ್ ಮಾಡುವ ವ್ಯವಸ್ಥೆ ಮಾಡಿದ್ದೇವೆ ಕಾಂಪೌಂಡರುಗಳನ್ನು ಕೂಡ ಲೈವ್‌ಸ್ಟಾಕ್‌ಮೆನ್‌ಗಳಾಗಿ ಬಡ್ತಿ ಕೊಡುವ ಒಂದು ಯೋಚನೆ ಮಾಡಿದ್ದೇವೆ. ಈಗ ಈ ಡಾಕ್ಟರ್‌ಗಳು ಏನು ಸ್ಟ್ರೈಕ್ ಮಾಡುತ್ತಿದ್ದಾರೆ ಅದನ್ನು ಆದಷ್ಟು ಬೇಗ ನಿಲ್ಲಿಸಿ ತಮ್ಮ ಕರ್ತವ್ಯದಲ್ಲಿ ತೊಡಗಬೇಕೆಂದು ಹೇಳಿ ಈಗ ಮಾನ್ಯ ಸದಸ್ಯರುಗಳು ಏನೇನು ಒಳ್ಳೆಯ ಉಪಯುಕ್ತ ಸಲಹೆಗಳನ್ನು ಕೊಟ್ಟಿದ್ದಾರೆ ಅವರೆಲ್ಲರಿಗೂ ಕೂಡ ನನ್ನ ಧನ್ಯವಾದಗಳನ್ನರ್ಪಿಸುತ್ತೇನೆ.

ಇವತ್ತು ನಮ್ಮ ದೇಶದಲ್ಲಿ ಒಕ್ಕಲುತನಕ್ಕೆ ಎಷ್ಟು ಮಹತ್ವ ಇದೆಯೋ ಅಷ್ಟೇ ಮಹತ್ವವನ್ನು ಈ ಜಾನುವಾರುಗಳ ಅಭಿವೃದ್ಧಿಗೂ ಕೊಡಬೇಕೆಂಬುದು ಸರ್ಕಾರದ ಉದ್ದೇಶವಾಗಿದೆ ಎಂದು ಹೇಳುತ್ತೇನೆ ಏಕೆಂದರೆ ಇವತ್ತು ರೈತನಿಗೆ ವ್ಯವಸಾಯಕ್ಕೆ ಹೂಡಲಿಕ್ಕೆ ಎತ್ತುಗಳು ಬೇಕು, ಜಮೀನಿಗೆ ಗೊಬ್ಬರ ಬೇಕು, ಜನರಿಗೆ ಹಾಲು ಬೇಕು, ಇದಕ್ಕಾಗಿ ಈ ದನಕರುಗಳನ್ನು ಜಾಸ್ತಿ ಮಾಡಬೇಕಾಗಿದೆ. ಜನರಿಗೆ ಮಾಂಸವನ್ನು ಒದಗಿಸುವುದಕ್ಕೆ, ಉಣ್ಣೆ ಉತ್ಪಾದನೆ ಮಾಡುವುದಕ್ಕೆ ಚರ್ಮದ ಉದ್ಯಮವನ್ನು ಇನ್ನೂ ಹೆಚ್ಚು ಮಾಡುವುದಕ್ಕೆ ಕುರಿಗಳನ್ನು ಜಾಸ್ತಿ ಮಾಡಬೇಕಾಗಿದೆ. ಇದನ್ನೆಲ್ಲಾ ಜಾಸ್ತಿ ಮಾಡುವುದಕ್ಕೋಸ್ಕರ ಸರ್ಕಾರದ ವತಿಯಿಂದ ಒಂದು ಉತ್ತಮವಾದ ಯೋಜನೆಯನ್ನು ಹಾಕಿಕೊಂಡಿದ್ದೇವೆ. ನಮ್ಮ ರಾಜ್ಯದಲ್ಲಿ 7 ಲೈವ್‌ಸ್ಟಾಕ್ ಫಾರಂ ಇಟ್ಟು ಕೊಂಡಿದ್ದೇವೆ ಕುರಿಗಳನ್ನು ಸಾಕುವುದಕ್ಕೆ, ದನಗಳನ್ನು ಸಾಕುವುದಕ್ಕೆ ಹಂದಿಗಳನ್ನು ಸಾಕುವುದಕ್ಕೆ, ಕೋಳಿಗಳನ್ನು ಸಾಕುವುದಕ್ಕೆ ಫಾರಂ ಎಂದು ಇಟ್ಟುಕೊಂಡಿದ್ದೇವೆ. ನಮ್ಮ ರಾಜ್ಯದಲ್ಲಿ 30 ಕೆ.ವಿ.ಎಸ್. ಸ್ಕೀಂಗಳಲ್ಲಿ ಒಳ್ಳೆಯ ಗೂಳಿಗಳನ್ನು ಸಾಕಿ ಉತ್ತಮ ತರಹೆಯ ವೀರ್ಯವನ್ನು ಸಂಗ್ರಹಣೆ ಮಾಡಿ ಉತ್ತಮವಾದ ಕರುಗಳನ್ನು ಹೆಚ್ಚು ಮಾಡುವುದಕ್ಕೆ ವ್ಯವಸ್ಥೆ ಮಾಡುತ್ತಿದ್ದೇವೆ. ಅದಕ್ಕೋಸ್ಕರವಾಗಿ 10 ಬುಲ್ ಸೆಂಟರ್‌ಗಳನ್ನು ಏರ್ಪಾಡು ಮಾಡಿದ್ದೇವೆ ನಮ್ಮಲ್ಲಿ ಈಗ 100 ಆರ್ಟಿಫಿಷಿಯಲ್ ಇನ್‌ಸೆಮಿನೇಷನ್ ಸೆಂಟರ್ಸ್ ಇವೆ. ಇಷ್ಟೇ ಅಲ್ಲದೆ 4 ಸೆಂಟ್ರಲ್ ಸೆಮೆನ್ ಕಲೆಕ್ಷನ್ ಸೆಂಟರ್ಸ್ ಎಂದು ಮಾಡಿದ್ದೇವೆ ಇವೂ ಕೂಡ ಬಹಳ ಚೆನ್ನಾಗಿ ಕೆಲಸ ಮಾಡುತ್ತಿವೆ ನಮ್ಮ ರಾಜ್ಯದಲ್ಲಿ ಒಟ್ಟು 186 ಉತ್ತಮ ತರಹೆ ಗೂಳಿಗಳನ್ನು ಇಟ್ಟುಕೊಂಡು ಅವುಗಳಿಂದ ಉತ್ತಮ ತರಹೆಯ ವೀರ್ಯವನ್ನು ಕಲೆಕ್ಟ್ ಮಾಡಿ ಫ್ರೋಸನ್ ಮಾಡಿ ಎಲ್ಲಾ ಕಡೆಗೂ ಕಳುಹಿಸಿಕೊಡುವ ವ್ಯವಸ್ಥೆ ಮಾಡಿದ್ದೇವೆ. ಇಂಥ ಜರ್ಸಿ ಬುಲ್ಸ್‌ನ್ನು ಇಟ್ಟುಕೊಂಡು ಜಾನುವಾರುಗಳನ್ನು ಹೆಚ್ಚು ಮಾಡುವುದಕ್ಕೆ ವ್ಯವಸ್ಥೆ ಮಾಡಿದ್ದೇವೆ. ಕಮ್ಯಾಂಡ್ ಏರಿಯಾ ಡೆವಲಪ್‌ಮೆಂಟ್, ಡ್ರೈ ಏರಿಯಾ ಡೆವಲಪ್‌ಮೆಂಟ್, ಮಲಪ್ರಭಾ ಘಟಪ್ರಭಾ ಯೋಜನೆಯ ಕೆಳಗೆ ಅನೇಕ ಉತ್ತಮ ರೀತಿಯ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ. ಹೋದವರ್ಷ 3,30,635 ಇನ್‌ಸೆಮಿನೇಷನ್ ಮಾಡಲಾಗಿದ್ದು ಅದರಲ್ಲಿ 80,085 ಕರುಗಳು ಹುಟ್ಟಿವೆ. ಆದರೆ ಇದು ಇಷ್ಟೇ ಸಾಲದು ಇದನ್ನು ಇನ್ನೂ ಚೆನ್ನಾಗಿ ಅಭಿವೃದ್ಧಿ ಮಾಡಬೇಕೆಂದು ಪ್ರಯತ್ನ ಮಾಡಿದ್ದೇವೆ. ರಾಜ್ಯದಲ್ಲಿ ಉತ್ತಮ ತರಹೆಯ ಕರುಗಳನ್ನು ರೈತರು ಸಾಕಲು ಪ್ರೋತ್ಸಾಹ ನೀಡುವ ಸಲುವಾಗಿ ಯೋಗ್ಯ ಬಹುಮಾನಗಳನ್ನು ಒಳ್ಳೆಯ ಕರುಗಳನ್ನು ಸಾಕಿದವರಿಗೆ ಕೊಡುವ ಒಂದು ಯೋಜನೆಯನ್ನು ಹಾಕಿಕೊಂಡಿದ್ದೇವೆ ದನಕರುಗಳಿಗೆ ಉತ್ತಮವಾದ ಹುಲ್ಲನ್ನು ಸಪ್ಲೈ ಮಾಡುವ ಸಲುವಾಗಿ ಫಾಡರ್ ಡೆವಲಪ್‌ಮೆಂಟ್ ಸ್ಕೀಂ ಎಂದು ಮಾಡಿ ಅದರ ಮೂಲಕ ಹೈಬ್ರಿಡ್ ಹುಲ್ಲನ್ನು ಸರಬರಾಜು ಮಾಡುವುದಕ್ಕೆ ವ್ಯವಸ್ಥೆ ಮಾಡಿದ್ದೇವೆ. ಡಿ. ಪಿ. ಎ. ಪಿ. ಪ್ರಾಜೆಕ್ಟ್‌ನಲ್ಲಿ ಡೈರಿ ಉದ್ಯಮಕ್ಕೆ ಪ್ರೋತ್ಸಾಹ ಕೊಡುವ ಸಲುವಾಗಿ ನಮ್ಮ ಇಡೀ ಭಾರತದೇಶ 6 ಜಿಲ್ಲೆಗಳನ್ನು ಇದಕ್ಕಾಗಿ ಆರಿಸಿಕೊಂಡಿದ್ದೇವೆ ಈ ಕಾರ್ಯಕ್ರಮದಲ್ಲಿ ಬಿಜಾಪುರ ಡಿಸ್ಟ್ರಿಕ್ ತೆಗೆದುಕೊಂಡು ಅಲ್ಲಿ ಒಂದು ಡೈರಿಯನ್ನು ಸ್ಥಾಪಿಸುವುದಕ್ಕೆ ಕ್ರಮ ತೆಗೆದುಕೊಂಡಿದ್ದೇವೆ. ಈ ಯೋಜನೆ ಪ್ರಕಾರ ಬಿಜಾಪುರ ಜಿಲ್ಲೆಯಲ್ಲಿ 80 ಹಾಲಿನ ಸಹಕಾರ ಸಂಘಗಳನ್ನು ಸ್ಥಾಪನೆ ಮಾಡಬೇಕೆಂದು ಉದ್ದೇಶ ಇಟ್ಟುಕೊಂಡಿದ್ದೇವೆ. ಅದರ ಪ್ರಕಾರ ಈಗಾಗಲೇ 37 ಸಹಕಾರ ಸಂಘಗಳನ್ನು ಸ್ಥಾಪನೆ ಮಾಡಿದ್ದೇವೆ; ಇನ್ನುಳಿದ 43 ಸಹಕಾರ ಸಂಘಗಳನ್ನು ಆದಷ್ಟು ಜಾಗ್ರತೆ ಪ್ರಾರಂಭ ಮಾಡುವುದಕ್ಕೆ ಕ್ರಮ ಕೈಕೊಳ್ಳುತ್ತೇವೆ. ಮೊಬೈಲ್

ವೆಟರಿನರಿ ಕ್ಲಿನಿಕ್ಸ್ ಎಂದು ಮಾಡಿ ಇವರು ಬಿಜಾಪುರ ಜಿಲ್ಲೆಯಲ್ಲಿ ಎಲ್ಲೆಲ್ಲಿ ಬುಲ್ ಸೆಂಟರ್ಸ್, ಕಾಫ್ ರೇರಿಂಗ್ ಸೆಂಟರ್ಸ್ ಇವೆ ಅಲ್ಲೆಲ್ಲಾ ಸಂಚಾರ ಮಾಡಿ ಅವುಗಳಿಗೆ ಉತ್ತಮ ತರಹೆಯ ಔಷಧಿಗಳನ್ನು ಕೊಡುವುದಕ್ಕೆ ವ್ಯವಸ್ಥೆ ಮಾಡಿದ್ದೇವೆ.

ಒಟ್ಟಿನಲ್ಲಿ ಹೇಳುವುದಾದರೆ ಲೈವ್‌ಸ್ಟಾಕ್ ಪ್ರೊಡಕ್ಷನ್ ಕಾರ್ಯಕ್ರಮದಲ್ಲಿ ಎಸ್.ಎಫ್.ಡಿ.ಎ; ಎಂ.ಎಫ್.ಎ ಎಲ್. ಇಳಿಗೆ ರಾಜ್ಯಾದಂತ ದುರ್ಬಲವರ್ಗದವರಿಗೆ ಹಸುಗಳನ್ನು, ಕರುಗನ್ನು, ಕೋಳಿ ಕುರಿ, ಹಂದಿ ಮುಂತಾದವುಗಳನ್ನು ಸಾಕುವುದಕ್ಕೆ 12 ಜಿಲ್ಲೆಗಳಲ್ಲಿ ಜನಗೆ ಅನುಕೂಲ ಮಾಡಿಕೊಟ್ಟಿದ್ದೇವೆ. ಈಗ ಅಂದರೆ 1977-78ನೇ ಸಾಲಿಗೆ ಈ ಲೈವ್‌ಸ್ಟಾಕ್ ಕಾರ್ಯಕ್ರಮ ಕ್ಕೋಸ್ಕರ 20 ಲಕ್ಷ ರೂಪಾಯಿಗಳನ್ನು ತೆಗೆದಿಟ್ಟಿದ್ದೇವೆ.

1977-78ನೇ ಸಾಲಿಗೆ ಅಗ್ರಿಕಲ್ಚರ್ ಲೇಬರರ್‌ಗೆ ಪ್ರಾತಿನಿಧ್ಯ ಕೊಡುವ ಉದ್ದೇಶವನ್ನಿಟ್ಟು ಕೊಂಡಿದ್ದೇವೆ.

7-00 ಪಿ. ಎಂ.

ಇನ್ನು ಡೈರಿ ಡೆವಲಪ್‌ಮೆಂಟ್ ವಿಚಾರದಲ್ಲಿ ಹೇಳುವುದಾದರೆ ನಮ್ಮ ರಾಜ್ಯದಲ್ಲಿ ಪ್ರತಿಯೊಂದು ಜಿಲ್ಲೆಗಳಲ್ಲಿ ಬಿಜಾಪುರ ಜಿಲ್ಲೆ ಸೇರಿದಂತೆ ಹೊಸ ಡೈರಿಗಳನ್ನು ತೆಗೆಯಬೇಕೆಂದು ಕಾರ್ಯಕ್ರಮ ಗಳನ್ನು ಹಾಕಿಕೊಂಡು ಇದರ ಮುಖಾಂತರ ರೈತರು ಉತ್ಪಾದಿಸಿದ ಹಾಲನ್ನು ಕೊಂಡು ಸಂಗ್ರಹಣೆ ಮಾಡಬೇಕೆಂಬ ವಿಚಾರವನ್ನು ಇಟ್ಟುಕೊಂಡಿದ್ದೇವೆ. ಇಷ್ಟೇ ಅಲ್ಲದೆ ಹೊಸ ಡೈರಿಗಳನ್ನು ಪ್ರತಿಯೊಂದು ಜಿಲ್ಲೆಯಲ್ಲಿಯೂ ತೆರೆಯಬೇಕೆಂಬ ಉದ್ದೇಶವನ್ನಿಟ್ಟುಕೊಂಡಿರುತ್ತೇವೆ.

ಬೆಂಗಳೂರಿನಲ್ಲಿ ಹಾಲಿನ ಬೆಲೆ ಜಾಸ್ತಿಯಾಗಿದೆ ಎಂದು ಶ್ರೀಮಾನ್ ಟಿ. ಆರ್. ಶಾಮಣ್ಣ ನವರು ಹೇಳಿದರು. ಇದು ಅಷ್ಟು ಸಮಂಜಸವಾಗಿ ಕಾಣುವುದಿಲ್ಲ. ಏಕೆಂದರೆ ನಮ್ಮ ರಾಜ್ಯದಲ್ಲಿ ದನಗಳ ಆಹಾರದ ಬೆಲೆ ಜಾಸ್ತಿಯಾಗಿರುವುದೇ ಅಲ್ಲದೆ ಆಕಳು ಮತ್ತು ಎಮ್ಮೆಗಳ ಬೆಲೆಯೂ ಕೂಡ ಜಾಸ್ತಿಯಾಗಿರುತ್ತದೆ. ಒಂದು ಲೀಟರ್ ಹಾಲಿಗೆ ಎರಡು ರೂಪಾಯಿನಂತೆ ಮಾರುವುದು ಏನಿದೆ ಅದು ಈಗಿನ ಕಾಸ್ಟ್ ಆಫ್ ಪ್ರೊಡಕ್ಷನ್‌ಗೆ ಹೋಲಿಸಿ ನೋಡಿದರೆ ಅದರ ಬೆಲೆ ಎರಡು ರೂಪಾಯಿ ಹನ್ನೆರಡು ಪೈಸೆ ಬೆಲೆಯಾಗಿರುತ್ತದೆ. ಆದರೂ ಎರಡೂ ರೂಪಾಯಿನಂತೆಯೇ ನಾವು ಮಾರಾಟ ಮಾಡುತ್ತಿದ್ದೇವೆ.

ಶ್ರೀ ಕಾಗೋಡು ತಿಮ್ಮಪ್ಪ.— ಡೈರಿ ಡೆವಲಪ್‌ಮೆಂಟ್ ಕಾರ್ಪೊರೇಷನ್ ಏರ್‌ಕಂಡಿಷನ್ ಗೋಸ್ಕರವಾಗಿ ಎಷ್ಟು ಖರ್ಚು ಮಾಡಿರುತ್ತೀರಿ?

ಶ್ರೀ ಬಿ. ಜಿ. ಬಣಕಾರ್.—ಅದಕ್ಕೆ ಬೇರೆ ಪ್ರತ್ಯೇಕವಾಗಿ ಪ್ರಶ್ನೆ ಕೇಳಿದರೆ ಎಲ್ಲ ವಿವರಗಳನ್ನು ತಮಗೆ ಒದಗಿಸಿ ಕೊಡುತ್ತೇನೆ.

ಡೈರಿ ಡೆವಲಪ್‌ಮೆಂಟ್ ಕಾರ್ಪೊರೇಷನ್ ಅಂದರೆ ಇದನ್ನು ಒಂದು ವ್ಯಾಪಾರ ಸಂಸ್ಥೆಯೆಂದು ತಿಳಿದುಕೊಳ್ಳಬಾರದು. ಎಲ್ಲ ಜನರಿಗೂ ಅನುಕೂಲ ಮಾಡಿಕೊಡಬೇಕು, ಉತ್ತಮವಾದ ಹಾಲನ್ನು ಸಂಗ್ರಹಣೆ ಮಾಡಿ ಜನರಿಗೆ ಒದಗಿಸಿಕೊಡಬೇಕು ಎನ್ನುವುದೇ ಇದರ ಮುಖ್ಯ ಉದ್ದೇಶ ವಾಗಿರುತ್ತದೆ. ಈ ಉದ್ದೇಶವನ್ನಿಟ್ಟುಕೊಂಡು ಮೈಸೂರು, ಮಂಡ್ಯ, ಹಾಸನ ತುಮಕೂರು ಮುಂತಾದ ಸ್ಥಳಗಳಲ್ಲಿ ಡೈರಿಡೆವಲಪ್‌ಮೆಂಟ್ ಕಾರ್ಪೊರೇಷನ್‌ಗಳನ್ನು ತೆಗೆದಿರುವುದು. ಪ್ರಾಫಿಟ್ ಮೋಟೋ ದೃಷ್ಟಿಯಿಂದ ಅಲ್ಲ ಸರ್ವೀಸ್ ಮಾಡಬೇಕು ಎನ್ನುವ ದೃಷ್ಟಿಯಿಂದ ಕೆಲಸ ಮಾಡುತ್ತಿದ್ದೇವೆ. ಇದರಿಂದ ಲುಕ್ಸಾನಾಗುತ್ತಿದ್ದರೂ ಕೂಡ ದಕ್ಷತೆಯಿಂದ ಕೆಲಸ ಮಾಡುತ್ತಿದ್ದೇವೆ. ಅಕಸ್ಮಾತ್ ಏನಾದರೂ ಲೋಪದೋಷಗಳು ಕಂಡುಬಂದರೆ ಅದನ್ನು ಸರಿಪಡಿಸುವುದಕ್ಕೆ ಪ್ರಯತ್ನ ಮಾಡುತ್ತೇವೆಂದು ಹೇಳುತ್ತಾ ಹೆಚ್ಚಿಗೆ ವೇಳೆಯನ್ನು ತೆಗೆದುಕೊಳ್ಳದೆ, ಮಾನ್ಯ ಸದಸ್ಯರೆಲ್ಲರೂ ಏನೇನು ಸಲಹೆಗಳನ್ನು ಕೊಟ್ಟಿದ್ದಾರೆ, ಅವನ್ನೆಲ್ಲ ಗಮನದಲ್ಲಿಟ್ಟುಕೊಂಡು ಕೆಲಸ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆಂದು ಹೇಳಿ ಈವತ್ತಿನದಿವಸ ಇಲ್ಲಿ ಮಂಡಿಸಿರತಕ್ಕಂಥ ಬೇಡಿಕೆಗೆ ಸರ್ವರೂ ಒಪ್ಪಿಗೆ ಕೊಡಬೇಕೆಂದು ವಿನಂತಿ ಮಾಡಿಕೊಂಡು ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

Madam Speaker : The question is :—

"That the respective sums not exceeding the amounts mentioned in the list of Demands be granted to the Government to defray the charges which will come in course of payment during the financial year ending 31st day of March 1978 in respect of Demand Nos. 39, 42, 40, 45 and 46."

The motion was adopted and the sums were granted.

Demand No. 40—Horticulture

"That a sum not exceeding Rs. 2,93,88,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1978 in respect of Demand No. 40 "Horticulture".

Minister for Agriculture :—

Demand No. 39—Agriculture (Excluding Horticulture and Drought Prone Areas Programme

"That a sum not exceeding Rs. 15,60 92,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1978 in respect of Demand No. 39 "Agriculture (Excluding Horticulture and Drought Prone Areas Programme)."

Demand No. 42.—Soil and Water Conservation.

Madam/Sir, on the recommendation of the Governor, I beg to move ;

"That a sum not exceeding Rs. 7,19 94,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1978 in respect of Demand No. 42 "Soil and Water Conservatton."

Madam/Sir, on the recommendation of the Governor, I beg to move :

"That a sum not exceeding Rs. 11,89,60,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1978 in respect of Demand No. 45 "Animal Husbandry and Dairy Development."